ತಿ ದ್ದರು. ಅವರ ಕಾಲದಲ್ಲಿ ಒಂದು ಒಳ್ಳೆಯ ಶಿಸ್ತಿನ ಆಡಳಿತವನ್ನು ಜಾರಿಗೆ ತಂದರು. ಈ ಸಮಾಜದ ಸಂಘಟನೆಗಾಗಿ ಎಲ್ಲರನ್ನು ಒಂದು ಕಡೆ ಸೇರಿಸುವಂತಹ ಶಕ್ತಿ ಅವರಲ್ಲಿತ್ತು. ಅನ್ಯಾಯದ ವಿರುದ್ಧ ಅವರು ಯಾವಾಗಲೂ ಹೋರಾಟ ಮಾಡುತ್ತಿದ್ದರು. ಅವರಲ್ಲಿ ಕ್ರಾಂತಿಕಾರಕವಾದಂಥ ವಿಚಾರ ಗಳಿದ್ದವು. ೧೯೭೭ರ ನಂತರ ನಾನು ಮತ್ತು ಅವರು ಇಡೀ ರಾಜ್ಯದಲ್ಲಿ ಸಂಚಾರ ಮಾಡುವ ಕಾಲಕ್ಕೆ ನಾವು ಹೋದ ಕಡೆಗಳಲ್ಲಿ ಜನರು ಇವರಿಗೆ ನಮಸ್ಕಾರ ಮಾಡುತ್ತಿದ್ದರು. ಇದಕ್ಕೆ ಕಾರಣವೇನೆಂದು ನಾನು ಜನರನ್ನು ಕೇಳಿದಾಗ, ಇವರು ಡಿ.ಸಿ. ಆಗಿದ್ದ ಕಾಲಕ್ಕೆ ನಮ್ಮ ಊರಿಗೆ ಒಂದು ಟ್ಯಾಂಕ್‌ನ್ನು ಮಾಡಿಸಿಕೊಟ್ಟರು, ಇಲ್ಲವೇ ಶಾಲೆಯನ್ನು ಮಂಜೂರು ಮಾಡಿದರು, ಹೀಗೆ ನಾನಾ ಕಾರಣಗಳನ್ನು ಕೊಟ್ಟು ನಮಸ್ಕಾರ ಮಾಡುತ್ತಿದ್ದರು ಅವರು ಸರ್ಕಾರದ ಹುದ್ದೆಯಲ್ಲಿದ್ದಾಗಲೂ ಸಹ ಜನತೆಗೆ ಒಳ್ಳೆಯ ಕೆಲಸಗಳನ್ನು ಮಾಡಿದರು. ಅನಂತರವೂ ಸಹ ಜನತೆಗೆ ಒಳ್ಳೆಯ ಕೆಲಸಗಳನ್ನು ಮಾಡಿದರು. ಹೀಗೆ ನಾನಾ ರೀತಿಯಿಂದ ಸೇವೆ ಸಲ್ಲಿಸಿದವರನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಅವರ ಮರಣದಿಂದ ಅಖಿಲಭಾರತ ವೀರಶೈವ ಮಹಾಸಭೆಗೆ ಹಾಗೂ ಕರ್ನಾಟಕ ರಾಜ್ಯಕ್ಕೆ ಹಾನಿಯಾಗಿದೆ. ಈ ಕಾರಣದಿಂದ ನಾನು ನಮ್ಮ ಕಿಸಾನ್‌ಸಭಾದ ಮೂಲಕ ಮತ್ತು ವೀರಶೈವ ಮಹಾಸಭಾದ ಮೂಲಕ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಮತ್ತು ಅವರಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಶ್ರೀ ಬಿ.ವಿ. ಕಕ್ಕಿಲಾಯ (ಬಂಟ್ವಾಳ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಲ್ಲಾರಾಧ್ಯ ಅವರ ನಿಧನದ ಬಗ್ಗೆ ನಾನು ಸಂತಾಪವನ್ನು ಸೂಚಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ನನಗೆ ಅವರ ನಿಕಟ ಪರಿಚಯವಿಲ್ಲ. ಆದರೂ ಸಹ ಅವರ ಒಂದು ಕಾರ್ಯದಕ್ಷತೆ ಬಗ್ಗೆ ಮತ್ತು ಅವರು ವಿಧಾನಸಭೆಯಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ನಿರ್ವಹಿಸುತ್ತಿದ್ದ ಕೆಲಸಕಾರ್ಯಗಳ ಬಗ್ಗೆ ನಾನು ಹೊರಗಡೆ ಇದ್ದೇ ಬಹಳ ಚೆನ್ನಾಗಿ ತಿಳಿದುಕೊಂಡಿದ್ದೇನೆ. ಅವರು ನಮ್ಮ ರಾಜ್ಯದ ಹಿರಿಯ ಮುತ್ಸದ್ಧಿ, ರಾಜಕಾರಣಿ ಹಾಗೂ ಒಳ್ಳೆಯ ದಕ್ಷ ಆಡಳಿತಗಾರರಾಗಿದ್ದರು. ಮುಖ್ಯವಾಗಿ ಅವರು ವಿದ್ಯಾಕ್ಷೇತ್ರದಲ್ಲಿ ಅನೇಕ ಹೊಸ ಸುಧಾರಣೆಗಳನ್ನು ತರುವುದರಲ್ಲಿ ಮುಂದಾಗಿದ್ದರೆಂದು ನಾನು ತಿಳಿದುಕೊಂಡಿದ್ದೇನೆ. ಅವರ ನಿಧನದಿಂದ ರಾಜ್ಯಕ್ಕೆ ಒಬ್ಬ ಅನುಭವಸ್ಥರನ್ನು ಕಳೆದು ಕೊಂಡಿದ್ದೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಈ ವಿಚಾರದಲ್ಲಿ ನಾನೂ ಕೂಡ ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿದಂಥಾ ಭಾವನೆಗಳಿಗೆ ಭಾಗಿಯಾಗಿದ್ದೇನೆ. ಅವರ ಆ ನಿಧನದಿಂದ ತುಂಬಲಾರದಂಥಾ ನಷ್ಟವಾಗಿದೆ ಎಂದು ಹೇಳಿ, ಅವರ ನಿಧನದಿಂದ ದುಃಖಕ್ಕೆ ಗುರಿಯಾಗಿರುವಂಥಾ ಅವರ ಕುಟುಂಬ ವರ್ಗದವರಿಗೂ ಕೂಡ ಈ ನಷ್ಟವನ್ನು ಸಹಿಸಿಕೊಳ್ಳುವಂಥಾ ಧೈರ್ಯ ಬರಲಿ ಎಂದು ಹಾರೈಸಿ ಅವರು ಗಳೊಂದಿಗೆ ನಾನೂ ಸಹ ನನ್ನ ಸಂತಾಪವನ್ನು ಇನ್ನೊಮ್ಮೆ ವ್ಯಕ್ತಪಡಿಸುತ್ತೇನೆ.

MR. SPEAKER.— I request the hon. members to Stand in Silence for a minute as a mark of respect to the memory of the deceased.

FINANCIAL BUSINESS

Discussion on Voting of Demands for Grants for 1982-83

Demand No. 54 and 55

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಸಹಕಾರ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈ ಸಹಕಾರ ಖಾತೆಗೆ ಸಂಬಂಧಪಟ್ಟಂತೆ ಹಣಕಾಸಿನ ಬೇಡಿಕೆಯನ್ನು ಈ ಸಭೆಯ ಒಪ್ಪಿಗೆಗೆ ಇಟ್ಟಮೇಲೆ ಅನೇಕ ಮಾನ್ಯ ಸದಸ್ಯರುಗಳು ಹಾಗೂ ನನ್ನ ಮಿತ್ರರು ಉತ್ತಮವಾದಂಥಾ ಸಲಹೆಗಳನ್ನು ಕೊಟ್ಟರು ಜೊತೆಗೆ ಈ ಸಹಕಾರ ಕ್ಷೇತ್ರ ಯಾವ ರೀತಿಯಾಗಿ ಕೆಲಸ ಮಾಡುತ್ತಾ ಇದೆ ಅನ್ನುವ ಮಾತನ್ನು ಸಹ ಹೇಳಿದ್ದಾರೆ. ಈ ಸಹಕಾರಿ ಕ್ಷೇತ್ರದಲ್ಲಿ ಸಹಕಾರ ಆಂಧೋಳನ ಜಯಪ್ರದವಾಗಿ ಆದರೆ ಮಾತ್ರ ರಾಷ್ಟ್ರದ ಪ್ರಗತಿ ಸಾಧ್ಯ ಅನ್ನುವುದನ್ನು ಹೇಳಿದ್ದಾರೆ. ಜೊತೆಗೆ ಈ ಸಹಕಾರಿ ಕ್ಷೇತ್ರ ತನ್ನ ಕಾರ್ಯ ಚಟುವಟಿಕೆಗಳನ್ನು ಎಲ್ಲಾ ರೀತಿಯಲ್ಲೂ ಸಹ ಉತ್ತಮವಾಗಿ ನಿರ್ವಹಣೆ ಮಾಡಿದರೆ ಈ ಸಮಾಜದಲ್ಲಿ ತುಳಿಯಲ್ಪಟ್ಟ ಹಾಗೂ ಸಮಾಜದಲ್ಲಿ ಹಿಂದುಳಿದ ವರ್ಗದ ಒಂದು ಏಳಿಗೆ ಸಾಧ್ಯ ಎನ್ನತಕ್ಕಂಥಾ ಮಾತನ್ನು ಸರ್ವಸಾಮಾನ್ಯವಾಗಿ

ಎಲ್ಲಾ ಸದಸ್ಯರೂ ಈ ಸಭೆಯಲ್ಲಿ ತಿಳಿಸಿದ್ದಾರೆ. ಸನ್ಮಾನ್ಯರಾದಂತಹ ರಾಮಭಟ್ಟರು, ಹೆಚ್. ಡಿ. ದೇವೇಗೌಡರು, ಡಾ. ಎಚ್. ಎಲ್. ತಿಮ್ಮೇಗೌಡರು. ತಕ್ಕೀಡ್‌ರವರು. ರಾಜೂಗೌಡರು ಇನ್ನೂ ಅನೇಕ ಮಾನ್ಯ ಸದಸ್ಯರುಗಳು ಜೊತೆಗೆ ಶ್ರೀಮಾನ್ ನಾನಯ್ಯನವರು ಈ ಬಗ್ಗೆ ಅನೇಕ ವಿಷಯುಗಳನ್ನು ಕೂಲಂಕಷವಾಗಿ ತಿಳಿಸಿದ್ದಾರೆ. ಈ ಸಹಕಾರ ಸಂಘಗಳಲ್ಲಿ, ಈ ಸಹಕಾರ ಕ್ಷೇತ್ರಗಳಲ್ಲಿ ಕೆಲಸ ಮಾಡ ತಕ್ಕಂಥಾ ಖಾಸಗೀ ಮುಖಂಡರು ಏನು ಇದ್ದಾರೆ ಮತ್ತು ಅಧಿಕಾರಿಗಳು ಏನು ಇದ್ದಾರೆ, ಇವರುಗಳು ತಮ್ಮ ಕಾರ್ಯವನ್ನು ವ್ಯವಸ್ಥಿತವಾಗಿ ಮಾಡುತ್ತಾ ಇಲ್ಲ, ಅನೇಕ ಲೋಪದೋಷಗಳು ಎದ್ದು ಕಾಣುತ್ತಾ ಇವೆ ಅನೇಕ ಅವ್ಯವಹಾರಗಳು ನಡೆದಿದೆ, ಅವರಿಗೆ ತಕ್ಕ ಶಿಕ್ಷೆಯಾಗಬೇಕು ಎನ ತಕ್ಕಂಥಾ ವಿಷಯುಗಳನ್ನು ಅವರದೇ ಆದಂಥಾ ಒಂದು ದಾಟಿಯಲ್ಲಿ ಅನೇಕ ಸದಸ್ಯರುಗಳು ತಿಳಿಸಿದ್ದಾರೆ. ಮಾನ್ಯ ಅಧ್ಯಕ್ಷರೇ, ನಾನು ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಈ ಕ್ಷೇತ್ರದಲ್ಲಿ ಅನೇಕ ಲೋಪ ದೋಷಗಳು ಇರಬಹುದು. ಕೆಲವು ಅವ್ಯವಹಾರಗಳು ನಡೆದಿರಬಹುದು, ಹಾಗೆ ನಡೆದಿಲ್ಲ ಎನ್ನತಕ್ಕಂಥಾ ದ್ದನ್ನು ಹೇಳುವುದಕ್ಕೆ ನಾನ್ನು ತಯಾರಿಲ್ಲಾ ಆದರೆ ಸಹಕಾರಿ ಕ್ಷೇತ್ರವನ್ನು ಸಹಕಾರ ಅಂಧೋಳನದಿಂದ ಮಾತ್ರ ಮಾಡಿದರೆ ಅದರಲ್ಲಿ ಈವೊತ್ತಿನ ದಿವಸ ಪ್ರಗತಿ ಸಾಧಿಸುವುದಕ್ಕೆ ಸಾಧ್ಯ ಎನ್ನತಕ್ಕಂಥಾ ಮಾತನ್ನು ಹೇಳಿದರೆ ತಾವೆಲ್ಲರೂ ಒಪ್ಪಿದ್ದೀರಿ ಎಂದು ನಾನಾದರೂ ಭಾವಿಸುತ್ತೇನೆ. ಬಹುಶಃ ಮುಖ್ಯವಾಗಿ ಹೇಳುವುದು ಈ ಸಹಕಾರ ಕ್ಷೇತ್ರದಲ್ಲಿ ಕೆಲಸಮಾಡತಕ್ಕಂಥಾವರು ಎಷ್ಟೇ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂಥಾವರಾದರೂ ಕೂಡ ಅವರ ಮೇಲೆ ಆಪಾದನೆ ಬರತಕ್ಕಂಥಾದ್ದು ಸಹಜ, ಸನ್ಮಾನ್ಯ ಗಂಗಾಧರ್‌ರವರು ಮಾತನಾಡುವಾಗ ನನ್ನ ಮೇಲೂ ಸಹ ಒಂದು ಆಪಾದನೆ ಮಾಡಿದರು ಅವರು ಏನು ಹೇಳಿದರು ಎಂದರೆ, ಶ್ರೀಮಾನ್ ಶ್ರೀಕಂಠಯ್ಯನವರ ವ್ಯವಹಾರದ ಬಗ್ಗೆ ಏನು ಒಂದು ವಿಷಯುವನ್ನು ತನಿಖೆಗೆ ಒಪ್ಪಿಸಿದರು, ಆ ತನಿಖೆಯ ರಿಪೋರ್ಟ್ ನಮಗೆ ಬಂದಿಲ್ಲ ಅನ್ನುವ ಮಾತನ್ನು ಹೇಳಿದರು. ಆ ತನಿಖೆಯ ರಿಪೋರ್ಟ್ ಏತಕ್ಕೆ ಬಂದಿಲ್ಲಾ ಅನ್ನುವುದನ್ನು ಅವರು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಗೆ ಬಂದಾಗ ಕೇಳಬೇಕು ಎಂದು ಅವರಿಗೆ ಹೇಳ ಬಯುಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ತಾವೇನೂ ಹೇಳಬೇಕಾಗಿಲ್ಲಾ. ನಿಮಗೆ ಗೊತ್ತಿದ್ದರೆ ನೀವೇ ಹೇಳಿಬಿಡಿ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಇದು ನನಗೆ ಗೊತ್ತಿಲ್ಲಾ. ದಯುವಿಟ್ಟು ನೀವೇ ಹೇಳಿ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಪದೇ ಪದೇ ಈ ಮಾತುಗಳನ್ನು ತಾವು ಆಡುವುದ ರಿಂದ ನಾನು ಹೇಳಬೇಕಾಗಿದೆ. ಸಾಮಾನ್ಯವಾಗಿ ಯಾರಾದರೂ ಉತ್ತಮವಾಗಿ ಕೆಲಸ ಮಾಡಿದರೆ ಇಂಥಾ ಒಂದು ಆಪಾದನೆ ಬರತಕ್ಕಂಥಾದ್ದು ಸಹಜ. ಅದು ಏನೇ ಕಾರಣ ಇರಲಿ, ಅದು ರಾಜಕೀಯ ಕಾರಣವೇ ಇರಲಿ, ಇನ್ನಾವ ಕಾರಣವೇ ಇರಲಿ, ಅಥವಾ ಅದರಲ್ಲಿ ಲೋಪದೋಷಗಳು ಆಗಿರತಕ್ಕಂಥಾ ಸಂದರ್ಭಗಳು ಇರಲಿ, ಇಲ್ಲದೇ ಇರಲಿ, ಪ್ರಾಮಾಣಿಕವಾಗಿ ಕೆಲಸ ಮಾಡಿದರೂ ಕೂಡಾ ಇಂಥಾ ಆಪಾದನೆಗಳು ಬರುವುದು ಸಹಜ. ಆದರೆ ಹಾಗೆ ಮಾತನಾಡುವಾಗ ಇದರಲ್ಲಿ ಮೂಲ ಉದ್ದೇಶ ಏನು ಅನ್ನುವುದನ್ನು ಅರ್ಥ ಮಾಡಿಕೊಂಡು ಮಾತನಾಡಬೇಕೆನ್ನುವುದನ್ನು ನನ್ನ ಒಂದೇ ಒಂದು ಪ್ರಾರ್ಥನೆ ಅಷ್ಟೆ. ಈ ಒಂದು ಇನ್ಸ್ಟಿಟ್ಯೂಷನ್ಸ್ ವ್ಯವಹಾರಗಳು ಅನೇಕರಿಗೆ ಗೊತ್ತು. ನಾನು ಇನ್ಸ್ಟಿಟ್ಯೂಷನ್ ಅಧ್ಯಕ್ಷನಾಗಿ ಅಧಿಕಾರ ಸೂತ್ರ ಹಿಡಿದಾಗ ಅದು ೪೨ ಲಕ್ಷ ರೂಪಾಯಿಗಳ ಒಂದು ಅಕ್ಯೂಮಲೇಟೆಡ್ ಲಾಸ್‌ನಲ್ಲಿತ್ತು. ನಾನು ಅಧಿಕಾರ ಬಿಟ್ಟಾಗ ಅದು ಒಂದು ಕೋಟಿ ರೂಪಾಯಿಗಳ ನಿವ್ವಳ ಲಾಭ ಹೊಂದಿತ್ತು ಅಲ್ಲದೆ ರಾಷ್ಟ್ರಕ್ಕೆ ಅದು ೩ನೇ ಸ್ಥಾನವನ್ನು ಪಡೆದಿದೆ ಎನ್ನುವ ಮಾತನ್ನು ನಾನು ಹೆಮ್ಮೆ ಯಿಂದ ಹೇಳಬಯುಸುತ್ತೇನೆ. ಇನ್ನೂ ಮುಂದುವರೆದು ಹೇಳಬೇಕಾದರೆ ಈಗ ಕಟ್ಟಿಸಿರತಕ್ಕಂಥಾ ಕಟ್ಟಡದಲ್ಲಿ ತಿಂಗಳಿಗೆ ಒಂದು ಲಕ್ಷ ರೂಪಾಯಿನವರೆಗೆ ಬಾಡಿಗೆ ಬರುತ್ತದೆ ಅಲ್ಲದೆ ಈ ಫೆಡರೇಷನ್ ಕಟ್ಟಡವನ್ನು ೧೧ ತಿಂಗಳಿನಲ್ಲೇ ಅತಿ ಜಾಗ್ರತೆಯಾಗಿ ಕಟ್ಟಿಸಿದ್ದೇವೆ. ಇದರಲ್ಲಿ ಎಷ್ಟರಮಟ್ಟಿಗೆ ಕೆಲಸ ಮಾಡಿದ್ದೇನೆಂದು ತಾವೇ ತಿಳಿದುಕೊಳ್ಳಬಹುದು. ತಮಗೆ ಹೇಳಬೇಕಾದರೆ ಇದರ ಒಂದು ವ್ಯವಹಾರ ದಿಂದ ನಮ್ಮ ರಾಜ್ಯ ಉತ್ತಮ ಸ್ಥಿತಿಗೆ ಬಂದಿದೆ ಎಂದು ಹೇಳಬಹುದು, ಹಾಗೆ ಯಾವುದಾದರೂ ಒಂದು ಸಂಸ್ಥೆ ಉತ್ತಮ ಸ್ಥಿತಿಗೆ ಬಂದರೆ ಅದರಲ್ಲಿ ಲೋಪದೋಷಗಳು ಆಗಿವೆ ಎಂದಾಗಲಿ ಅಥವಾ ಅವ್ಯವಹಾರ ಗಳು ಆಗಿವೇ ಎಂದಾಗಲಿ ಅದರ ವಸ್ತುಸ್ಥಿತಿ ಏನು ಅದರ ಉದ್ದೇಶ ಏನು ಅದು ಸಫಲವಾಗಿದೆಯೋ ಇಲ್ಲವೇ ಅನ್ನುವುದರ ಕಡೆಗೆ ಗಮನ ಹರಿಸಬೇಕೇ ವಿನಾ ಬೇರೆ ಕಡೆ ಗಮನ ಹರಿಸುವುದು ಸರಿಯಾದುದಲ್ಲ. ಮೇಲಾಗಿ ನಾನು ಅಂತಹ ಕೆಲಸ ಮಾಡುವುದಕ್ಕೂ ಕೂಡ ಹೋಗಿಲ್ಲ, ಅಲ್ಲದೆ ಈ ಸೊಸೈಟಿ ಬಗ್ಗೆ ಒಂದು

ಅಹಿತಕರವಾದ ವಾತಾವರಣ ಉಂಟು ಮಾಡುವುದನ್ನೂ ಸಹ ನಾನು ಬಯಸುವುದಿಲ್ಲ. ನನ್ನ ಜೊತೆಯಲ್ಲಿ ಅದಕ್ಕೆ ಅನೇಕರು ಸದಸ್ಯರಾಗಿದ್ದರು. ಆದರೆ ಅವರು ಅದರ ಉದ್ದೇಶವನ್ನು ಅರಿತುಕೊಂಡು ಮಾತನಾಡಬೇಕೆಂದು ನಾನು ಸವಿನಯದಿಂದ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದರಲ್ಲಿ ಯಾರೇ ಇರಲಿ, ಶ್ರೀ ಬೊಮ್ಮಾಯಿ ಅವರೇ ಇರಲಿ, ಅದರ ಉದ್ದೇಶವನ್ನರಿತು ಮಾತನಾಡಬೇಕು. ಶ್ರೀ ಎಸ್. ಆರ್. ಬೊಮ್ಮಾಯಿ ಅವರೂ ಕೂಡ ಒಂದು ರಿಪೋರ್ಟ್ ಕೊಟ್ಟರು. ಅವರೂ ಸಹ ಜನತಾ ಬಜಾರ್‌ಗೆ ಅಧ್ಯಕ್ಷರಾಗಿದ್ದಾಗ ನಷ್ಟವಾಗಲು ಕಾರಣ ಏನೇ ಇರಲಿ, ನಾನು ಅದನ್ನು ಈಗ ಹೇಳುವುದಕ್ಕೆ ತಯಾರಿಲ್ಲಾ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಇನ್ನೂ ಅದರ ಬಗ್ಗೆ ಈ ಸಭೆ ಮುಂದೆ ಎನ್‌ಕ್ವೈರಿ ರಿಪೋರ್ಟ್ಸ್ ಇಟ್ಟಿಲ್ಲವಲ್ಲಾ, ಸಂಶಯ ಬಂದಿದ್ದರಿಂದ ಕೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ಆಗಲಿ, ಆ ಎನ್‌ಕ್ವೈರಿ ರಿಪೋರ್ಟನ್ನು ಇನ್ನೂ ಕೂಡ ಏತಕ್ಕೆ ಈ ಸಭೆ ಮುಂದೆ ಇಟ್ಟಿಲ್ಲಾ, ದಯವಿಟ್ಟು ಆದಷ್ಟು ಬೇಗನೆ ಆ ಎನ್‌ಕ್ವೈರಿ ರಿಪೋರ್ಟನ್ನು ಈ ಸಭೆಯ ಮುಂದೆ ಇಡಿಸಿಬಿಡಿ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ನಾನು ಆಗಲೇ ಹೇಳಿದೆನಲ್ಲಾ, ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಬಂದ್ದಾಗ ಕೇಳಿ ಎಂದು, ನಾನು ಮತ್ತೇನೂ ಹೇಳುವುದಕ್ಕೆ ಹೋಗುವುದಿಲ್ಲ. ಅದೇನೇ ಇರಲಿ. ಈ ಆಡಿಟ್ ಅಬ್ಜಕ್ಷನ್ ಏನು ಇದೆ, ಅದು ಸಾಮಾನ್ಯವಾಗಿ ಅಲ್ಲಿ ಕೆಲಸ ಮಾಡತಕ್ಕಂಥಾ ಅಧ್ಯಕ್ಷರ ಮೇಲೆ ಬಂದೇ ಬರುತ್ತದೆ. ಶ್ರೀ ಬೊಮ್ಮಾಯಿ ಅವರೂ ಸಹ ಒಂದು ಸಂಸ್ಥೆಗೆ ಅಧ್ಯಕ್ಷರಾಗಿದ್ದರು. ಆ ಹೋಲ್‌ಸೇಲ್ ಸ್ಟೋರ್ಸ್ ಮುಚ್ಚಿಹೋಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಬಂದ ಮೇಲೆ ಅದು ಮುಚ್ಚಿಹೋದದ್ದು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈಗ ಬೇರೆ ಒಂದು ಹೊಸದಾಗಿ ಹೋಲ್‌ಸೇಲ್ ಸ್ಟೋರ್ಸ್ ಮಾಡಿದ್ದು ಆಯಿತು. ಆದರೆ ಅದು ಹಿಂದೆ ಮುಚ್ಚಿ ಹೋದುದಕ್ಕೆ ಶ್ರೀ ಬೊಮ್ಮಾಯಿಯವರು ಕಾರಣ ಏನು ಹೇಳುವುದಕ್ಕಾಗುತ್ತಯೋ ? ಸಾಮಾನ್ಯವಾಗಿ ಕೆಲಸ ಮಾಡತಕ್ಕಂಥಾ ಸಂದರ್ಭದಲ್ಲಿ ಅಲ್ಲಿನ ಅಧ್ಯಕ್ಷರ ಮೇಲೆ ಆಪಾದನೆಗಳು ಬರುವುದು ಸಹಜ. ಆದರೆ ಆ ಆಪಾದನೆಗಳನ್ನು ಮಾಡತಕ್ಕಂಥಾ ಕಾಲದಲ್ಲಿ ಅದರ ಉದ್ದೇಶ ಏನು ಅನ್ನುವುದನ್ನು ಮೂಲತಃ ಯೋಚನೆ ಮಾಡಿ ಮಾತನಾಡಬೇಕು ಎಂದು ನಾನು ಸದಸ್ಯರಲ್ಲಿ ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಹೆಚ್. ಡಿ. ದೇವೇಗೌಡರು ಮಾತನಾಡುವಾಗ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಶ್ರೀಕಂಠಯ್ಯನವರು ಸಹಕಾರ ಮಂತ್ರಿಗಳಾದ ಮೇಲೆ ಈ ಸಹಕಾರ ಕ್ಷೇತ್ರದಲ್ಲಿ ಅವರು ಬಹಳ ಮಟ್ಟಿಗೆ ಒಂದು ಸುಧಾರಣೆ ತರುತ್ತಾರೆಂದು ನಾವು ಏನ್ನೊಂದು ನಿರೀಕ್ಷಣೆ ಮಾಡಿದ್ದೇವೋ ಅದು ಆಗಲಿಲ್ಲಾ ಅನ್ನುವ ಮಾತನ್ನು ಹೇಳಿದ್ದಾರೆ. ಆದರೆ ನಾನು ಸಹಕಾರ ಮಂತ್ರಿ ಆದ ಸಂದರ್ಭ ಹೇಗಿತ್ತು, ಸನ್ನಿವೇಶ ಹೇಗಿತ್ತು, ಅನ್ನುವುದನ್ನು ತಾವು ವಿಚಾರ ಮಾಡಬೇಕು. ನಾನು ಸಹಕಾರ ಮಂತ್ರಿಯಾಗಿ ಬಂದಂಥ ಸಮಯದಲ್ಲಿ ದೇಶದಲ್ಲಿ ಚಳುವಳಿ, ರೈತರ ಚಳುವಳಿ, ರೈತರು ಸಾಲವನ್ನು ವಾಪಸ್ ಕೊಡ ಬೇಡಿ ಎಂದು ಹೇಳತಕ್ಕ ಚಳುವಳಿ ಇತ್ತು. ಈ ಸಹಕಾರ ಕ್ಷೇತ್ರಕ್ಕೆ ಎರಡು ಕೈಗಳು ಸೇರಿದರೆ ಇದರ ಪ್ರಗತಿ ಸಾಧ್ಯ. ಮಾನ್ಯ ಬೊಮ್ಮಾಯಿಯವರಾಗಲೀ, ಮಾನ್ಯ ದೇವೇಗೌಡ ಅವರಾಗಲೀ ಅಥವಾ ಇನ್ನಾವ ಸದಸ್ಯರಾಗಲೀ, ರೈತರು ಸರ್ಕಾರಕ್ಕೆ ಸಾಲವನ್ನು ವಾಪಸ್ ಕೊಡಿ ಎಂದಾಗಲೀ, ಕೊಡಬೇಡಿ ಎಂದಾಗಲೀ ಬಹಿರಂಗವಾಗಿ ಯಾರೂ ಹೇಳಲಿಲ್ಲ. ಎಲ್ಲರೂ ತಟಸ್ಥರಾಗಿದ್ದರು. ಈ ಸನ್ನಿವೇಶವನ್ನು ನಾವು ಅರ್ಥಮಾಡಿಕೊಳ್ಳಬೇಕು, ಮಾನ್ಯ ದೇವೇಗೌಡ ಅವರು ತಮ್ಮ ಭಾಷಣದಲ್ಲಿ ಹೇಳಿದಂಥ ಅಂಕಿ ಅಂಶಗಳು ೧೯೮೭ರ ಹಿಂದಿನವು. ೧೧೫ ಕೋಟಿ ರೂಪಾಯಿಗಳ ಕ್ರೆಡಿಟ್ ಫ್ಲೋ ಏನು ಇದೆ ಅದನ್ನು ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ ಮತ್ತು ದೀರ್ಘಾವಧಿ ಸಾಲಗಳಲ್ಲಿ ಸರ್ಕಾರ ತೊಡಗಿಸಿದೆ.

ಶ್ರೀ ಎಚ್. ಡಿ. ದೇವೇಗೌಡ.—ನಾವು ಈ ಸಮಯದಲ್ಲಿ ಮೌನವಾಗಿದ್ದೆವು ಎಂದು ಹೇಳಿದಿರಿ ಆದರೆ ಲೋಕಸಭೆಯ ಅಧ್ಯಕ್ಷರು, ನಿಮ್ಮ ಪಾರ್ಟಿಯ ಮಾಜಿ ಮಂತ್ರಿಗಳು ಒಬ್ಬರು ಸಾಲ ಕೊಡ ಬಾರದು ಎಂದು ಹೇಳಿದರೆ ಅದು ರಾಜಕೀಯವಾಗುತ್ತದೆಯೋ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನಮ್ಮ ಪಾರ್ಟಿಯವರು ಹೇಳಿರಲಿ ಅಥವಾ ಬೇರೆಯವರು ಹೇಳಿರಲಿ, ಆದರೆ......

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ರೀಷೆಡ್ಯೂಲ್ ಮಾಡಿ ಸಾಲ ಕೊಡಿ ಎಂದು ಹೇಳಿದ್ದೇವೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸಾಲದ ವ್ಯವಹಾರ ತಟಸ್ಥವಾದರೆ ಹೇಗೆ ? ಆಂಧ್ರಪ್ರದೇಶ ದಲ್ಲಿ ರೀಷೆಡ್ಯೂಲ್ ಮಾಡಿದರು, ತಮಿಳುನಾಡಿನಲ್ಲಿ ರೀಷೆಡ್ಯೂಲ್ ಮಾಡಿದರು ಮಹಾರಾಷ್ಟ್ರದಲ್ಲಿ ಸುಮಾರು ೫೦ ಕೋಟಿ ರೂಪಾಯಿಗಳ ಸಾಲವನ್ನು ರೀಷೆಡ್ಯೂಲ್ ಮಾಡಿದರು, ಆದರೆ ಅಲ್ಲಿಯ ಸಹಕಾರ ಸಂಘಗಳ ಪರಿಸ್ಥಿತಿ ಏನಾಗಿದೆ ? ಇದನ್ನು ಚೆನ್ನಾಗಿ ತಾವು ವಿಶ್ಲೇಷಣೆ ಮಾಡಬೇಕು, ಅಲ್ಲಿ ಯಾವ ಸಹಕಾರ ಸಂಘವೂ ತನ್ನ ಕಾರ್ಯವನ್ನು ಮಾಡುತ್ತಿಲ್ಲ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಸರ್ಕಾರದವರು ೪೮-೫೦ ಕೋಟಿ ರೂಪಾಯಿಗಳನ್ನು ಕೊಟ್ಟರೂ ಸಹ ಅಲ್ಲಿಯ ಸಹಕಾರ ಸಂಘಗಳ ಕಾರ್ಯಾಚರಣೆ ಸ್ಥಗಿತವಾಗಿದೆ. ನಮ್ಮಲ್ಲಿ ಏನಾಗಿದೆ ? ಎಷ್ಟೇ ತೊಂದರೆ ಬಂದರೂ ಸಹ. ದೇಶದಲ್ಲಿ ಅನೇಕ ರೀತಿಯ ಚಳುವಳಿಗಳು ನಡೆದರೂ ಸಹ ನಾವು ಒಂದು ಮಟ್ಟದಲ್ಲಿದ್ದೇವೆ. ಮಾನ್ಯ ದೇವೇಗೌಡ ಅವರು ೩೧-೩-೧೯೮೧ರ ಅಂಕಿಅಂಶಗಳನ್ನು ಕೊಟ್ಟರು. ಇತ್ತೀಚಿಗೆ, ಮಾರ್ಚ್ ಆಖೈರಿಗೆ ನಾವು ೧೦೫ ಕೋಟಿ ರೂಪಾಯಿಗಳ ಸಾಲ ವಿತರಣೆಮಾಡಬೇಕು ಎಂದು ಏನು ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆಯೋ ಅದರ ಪ್ರಕಾರ ನಮ್ಮ ರಾಜ್ಯದಲ್ಲಿ ಸುಮಾರು ೪೧ ಕೋಟಿ ರೂಪಾಯಿಗಳನ್ನು ಮಾತ್ರ ರೈತರಿಗೆ ಕೊಟ್ಟಿದ್ದೇವೆ. ಇತ್ತೀಚಿಗೆ ನಾವು ಈ ವಿಷಯದಲ್ಲಿ ಸುಮಾರು ೧೦೦ ಕೋಟಿ ರೂಪಾಯಿಗಳನ್ನು ಮುಟ್ಟುತಕ್ಕ ಪರಿಸ್ಥಿತಿಗೆ ಬಂದಿದ್ದೇವೆ, ಕಳೆದ ತಿಂಗಳಿಗೆ ಸುಮಾರು ೮೦ ಕೋಟಿ ರೂಪಾಯಿಗಳ ವಿತರಣೆಯಾಗಿದೆ, ಜೂನ್ ಮುಗಿಯುವ ವೇಳೆಗೆ ೧೦೦ ಕೋಟಿ ರೂಪಾಯಿಗಳ ವಿತರಣೆ ಯಾಗಬಹುದು.

ಮಾನ್ಯ ದೇವೇಗೌಡ ಅವರು ಮೊಬಿಲೈಸೇಷನ್ ಆಫ್ ರಿಸೋರ್ಸಸ್ ಬಗ್ಗೆ ಹೇಳಿದರು. ಇದರ ಬಗ್ಗೆ ಕಮರ್ಷಿಯಲ್ ಬ್ಯಾಂಕ್ಸ್‌ಗಳನ್ನು ಅವರು ಉಲ್ಲೇಖಿಸಿದ್ದಾರೆ. ಈ ವಿಷಯದಲ್ಲಿ ಸಹಕಾರ ಬ್ಯಾಂಕುಗಳಿಗೆ ಹೋಲಿಕೆ ಮಾಡಿದರೆ ಮೊಬಿಲೈಸೇಷನ್ ಆಫ್ ರಿಸೋರ್ಸಸ್ ಸಹಜವಾಗಿಯೇ ಕಡಿಮೆ ಯಾಗುತ್ತಿದೆ. ಕಮರ್ಷಿಯಲ್ ಬ್ಯಾಂಕ್‌ಗಳಂತೆ ಸಹಕಾರ ಬ್ಯಾಂಕುಗಳು ರಿಸೋರ್ಸಸ್ ಮೊಬಿಲೈಸ್ ಮಾಡುವುದಕ್ಕೆ ಹೇಗೆ ಸಾಧ್ಯ ? ಆದರೂ ಸಹ. ಅಪೆಕ್ಸ್ ಬ್ಯಾಂಕು ಸುಮಾರು ೮೦ ಕೋಟಿ ರೂಪಾಯಿ ಗಳನ್ನು ಇವತ್ತಿನ ದಿವಸ ಶೇಖರಣೆ ಮಾಡಿದೆ. ಇತಿಹಾಸದಲ್ಲೇ ಇದು ೧೦೦ ಕೋಟಿ ರೂಪಾಯಿ ಗಳನ್ನು ಮೀರಿದಂಥ ಕಾಲ ಇರಲಿಲ್ಲ. ೧೦೦ ಕೋಟಿ ರೂಪಾಯಿಗಳಿಗೂ ಮೀರಿದ ವ್ಯವಹಾರ ಅಲ್ಲಿ ಆಗಿದೆ. ಅಷ್ಟೇ ಅಲ್ಲದೆ ೮ ಜಿಲ್ಲಾ ಬ್ಯಾಂಕುಗಳಿಗೆ ಸುಮಾರು ೩೭ ಕೋಟಿ ರೂಪಾಯಿಗಳ ನೆರವನ್ನು ಕೊಟ್ಟಿದೆ ಈ ೮ ಬ್ಯಾಂಕುಗಳಲ್ಲಿ ೨-೩ ಬ್ಯಾಂಕುಗಳನ್ನು ಬಿಟ್ಟರೆ ೪-೫ ಬ್ಯಾಂಕುಗಳು ಸಾಲ ಪಡೆಯು ತಕ್ಕ ಸ್ಥಿತಿಯನ್ನು ಮುಟ್ಟಿವೆ. ನಮ್ಮ ರಾಜ್ಯದ ಕೆಲವು ಭಾಗದಲ್ಲಿ ಮಳೆ ಬಾರದೆ, ಬೆಳೆಯಾಗದೆ ರೈತರು ತೆಗೆದುಕೊಂಡ ಸಾಲವನ್ನು ವಾಪಸ್ ಕೊಡಲಿಲ್ಲ, ಅವರ ಕಡೆಯಿಂದ ಚಳುವಳಿ ಶುರುವಾಯಿತು. ಈ ತರಹದ ಪ್ರಸಂಗಗಳಲ್ಲಿ ನಮ್ಮ ಬ್ಯಾಂಕುಗಳ ಪರಿಸ್ಥಿತಿ ಹೇಗಾಗಬೇಕು ? ನಮಗೂ ಕಷ್ಟಬಂತು. ಆದರೂ ಸಹ ಲಾಂಗ್ ಟರ್ಮ್ ಸಾಲವನ್ನು ಕೊಡುವುದರಿಂದ ನಾವು ಹೆಚ್ಚಿನ ಸಾಧನೆಯನ್ನು ಮಾಡಿ ದ್ದೇವೆ. ಸಾಲದ ವಸೂಲಾತಿಯೂ ಬಹಳ ಚೆನ್ನಾಗಿ ನಡೆದಿದೆ. ಸಾಲವನ್ನು ಮನ್ನಾ ಮಾಡಬೇಕು ಎನ್ನತಕ್ಕ ಪ್ರಶ್ನೆ ಬಂತು, ಸಾಲವನ್ನು ಮನ್ನಾ ಮಾಡಿದರೆ ಪರಿಸ್ಥಿತಿ ಏನಾಗುತ್ತದೆ ? ರಿಸರ್ವ್ ಬ್ಯಾಂಕ್‌ನವರಿಂದ ೭ ಪರ್ಸೆಂಟ್ ಬಡ್ಡಿಯಂತೆ ಹಣಪಡೆದು ಅಂತಿಮವಾಗಿ ಸಹಕಾರ ಸಂಘಗಳಿಂದ ವಿತರಣೆ ಮಾಡುವ ಹೊತ್ತಿಗೆ ಅದು ೧೨.೮೫ ರಷ್ಟು ಆಗುತ್ತದೆ. ಅಂದರೆ ಐದುಮುಕ್ಕಾಲು ಪರ್ಸೆಂಟ್ ಬಡ್ಡಿ ರೈತರಿಗೆ ಜಾಸ್ತಿ ಬೀಳುತ್ತದೆ. ಇದು ನ್ಯಾಷನಲ್ ಅಕ್ಸೆಪ್ಟೆಡ್ ಪ್ರಿನ್ಸಿಪಲ್, ನಾನು ಮಂತ್ರಿಯಾದರೂ ಅಷ್ಟೇ ಮಾನ್ಯ ದೇವೇಗೌಡ ಅವರು ಮಂತ್ರಿಯಾದರೂ ಅಷ್ಟೆ. ಯಾರೇ ಪ್ರಧಾನ ಮಂತ್ರಿಯಾದರೂ ಇದನ್ನು ಬದಲಾವಣೆ ಮಾಡುವುದಕ್ಕೆ ಕಷ್ಟಸಾಧ್ಯ. ಏಜನ್ಸಿಗಳನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವೇ? ಜಿಲ್ಲಾ ಸಹಕಾರ ಬ್ಯಾಂಕುಗಳನ್ನು ತೆಗೆದುಹಾಕಿ ಅಪೆಕ್ಸ್ ಬ್ಯಾಂಕ್‌ನವರು ನೇರವಾಗಿ ರೈತರಿಗೆ ಹಣವನ್ನು ಕೊಡುವುದಕ್ಕೆ ಸಾಧ್ಯವೇ ? ಇಲ್ಲದಿದ್ದರೆ ಅಪೆಕ್ಸ್ ಬ್ಯಾಂಕ್‌ನವರು ತಮ್ಮದೇ ಆದ ಏಜನ್ಸಿಯ ಇನ್‌ಫ್ರಾಸ್ಟ್ರಕ್ಚರ್ ನೀತಿಯನ್ನು ಹೊಸದಾಗಿ ಸ್ಥಾಪನೆ ಮಾಡಬೇಕಾಗುತ್ತದೆ. ಈ ಎಲ್ಲಾ ಕಾರಣ ಗಳಿಂದ ಈ ಐದೂ ಮುಕ್ಕಾಲು ಪರ್ಸೆಂಟ್ ಹೆಚ್ಚುವರಿ ಬಡ್ಡಿ ರೈತರ ಮೇಲೆ ಅನಿವಾರ್ಯವಾಗಿ ಬೀಳುತ್ತದೆ ಇವನ್ನು ಸರ್ಕಾರದವರೇ ತುಂಬಬೇಕು ಎನ್ನುವುದರ ಬಗ್ಗೆ ಮಾನ್ಯ ಅರ್ಥಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ಇದು ವಾಸ್ತವಾಂಶ. ಅರ್ಥ ಮಂತ್ರಿಗಳ ಹತ್ತಿರ ನಾವೂ ಸಹ ಒತ್ತಾಯ

ಮಾಡಿ ಮೂರು ಪರ್ಸೆಂಟ್ ರಿಬೇಟ್ ಕೊಡುವಂತೆ ಕೇಳಿಕೊಂಡಿದ್ದೇವೆ. ಈಗಾಗಲೇ ಇದರ ಬಗ್ಗೆ ನಮ್ಮ ಸೆಕ್ರೆಟರಿಯವರು ರಿಜಿಸ್ಟ್ರಾರ್ ಅವರು ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ. ಈ ರಿಬೇಟನ್ನು ಯಾವ ರೀತಿಯಾಗಿ ಕೊಡಬೇಕು ಎಷ್ಟರಮಟ್ಟಿಗೆ ಕೊಡಬೇಕು ಎನ್ನತಕ್ಕದನ್ನು ಅವರು ಪರಿಶೀಲನೆ ಮಾಡಿ ರೈತರಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅನೇಕ ಮಾನ್ಯ ಸದಸ್ಯರು ಗ್ರಾಮ ಪಂಚಾಯತಿಯ ಮಟ್ಟದಲ್ಲಿ ಒಂದೊಂದು ಸಹಕಾರ ಸಂಘ ಇರಬೇಕು ಎಂದು ಹೇಳಿದ್ದಾರೆ, ಮಾನ್ಯ ದೇವೇಗೌಡ ಅವರೂ ಸಹ ಅಗತ್ಯ ವಸ್ತುಗಳ ವಿತರಣೆ, ಸಾಲ ಹಂಚತಕ್ಕ ವ್ಯವಸ್ಥೆ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ, ೩-೪ ಪಂಚಾಯತಿಗಳನ್ನು ಸೇರಿಸಿ ಒಂದು ಸಹಕಾರ ಸಂಘವಾಗಿ ಚೆನ್ನಾಗಿ ಕೆಲಸ ಮಾಡುತ್ತಿದ್ದ ಕಡೆಯೂ ಸಹ ಕೆಟ್ಟು ಹೋಗಿದೆ, ಹೀಗಾಗಿ ಗ್ರಾಮಾಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಸಹಕಾರ ಇಲಾಖೆ, ಇದರ ಕ್ಷೇತ್ರದ ಬಗ್ಗೆ ಮಹಾತ್ಮ ಗಾಂಧೀಜಿಯವರು ಯಾವ ಒಂದು ಆಸೆಯನ್ನು ಇಟ್ಟುಕೊಂಡಿದ್ದರೋ ಅದು ಈಡೇರಬೇಕಾದರೆ, ಯಾವ ರೀತಿಯಲ್ಲಿ ಇವು ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ಮಾನ್ಯ ಬಸಪ್ಪನವರು ಪ್ರಶ್ನೆ ಕೇಳಿ ಉತ್ತರವನ್ನು ಪಡೆದಿದ್ದಾರೆ. ಈಗಾಗಲೇ ನಮ್ಮ ರಿಜಿಸ್ಟ್ರಾರ್ ಅವರು, ಸೆಕ್ರೆಟರಿಯವರು ರಿಸರ್ವ್ ಬ್ಯಾಂಕ್‌ನವರ ಜೊತೆಯಲ್ಲಿ ಈ ವಿಷಯದಲ್ಲಿ ಚರ್ಚೆಮಾಡುತ್ತಿದ್ದಾರೆ. ನಾವು ಇನ್ನೂ ಹೆಚ್ಚಿನ ಶ್ರಮವಹಿಸಿ ಗ್ರಾಮ ಪಂಚಾಯಿತಿಗೆ ಒಂದು ಸಹಕಾರ ಸಂಘ ಸ್ಥಾಪನೆ ಮಾಡುವುದಕ್ಕೆ ಖಂಡಿತವಾಗಿ ಪ್ರಯತ್ನ ಮಾಡುತ್ತೇವೆ. ಈ ನಮ್ಮ ಪ್ರಯತ್ನ ಸಾರ್ಥಕವಾಗುವುದಕ್ಕೆ ಮಾನ್ಯ ಸದಸ್ಯರೆಲ್ಲರೂ ಸಹಕರಿಸಬೇಕು ಎಂದು ಕೇಳಿಕೊಳ್ಳುತ್ತೇನೆ ನಾವೂ ಸಹ ಕೇಂದ್ರ ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್‌ನವರ ಜೊತೆ ಸಮಾಲೋಚನೆ ಮಾಡುತ್ತೇವೆ. ಈ ಅಮಾಲ್ಗಮೇಷನ್ ನೀತಿ ನಮಗೆ ಇಷ್ಟವಿಲ್ಲದಿದ್ದರೂ ಸಹ ಒತ್ತಾಯ ಪೂರ್ವಕವಾಗಿ ಇದನ್ನು ಮಾಡಬೇಕಾದ ಪರಿಸ್ಥಿತಿ ನಮಗೆ ಬಂತು. ನಾವು ವಸ್ತುಸ್ಥಿತಿಯನ್ನು ನೋಡಿದಾಗ, ಜನಸಾಮಾನ್ಯರಿಗೆ ಸೀಮೆ ಎಣ್ಣೆ ಸಿಕ್ಕುತ್ತಿಲ್ಲ, ಸಕ್ಕರೆ ಸಿಕ್ಕುತ್ತಿಲ್ಲ, ಗೊಬ್ಬರ ಸಿಕ್ಕುತ್ತಿಲ್ಲ. ಈ ವಿಷಯದಲ್ಲಿ ನಾನು ಖಂಡಿತವಾಗಿಯೂ ಪರಿಶೀಲನೆ ಮಾಡಿ ಪಂಚಾಯತಿಗೊಂದು ಸಹಕಾರ ಸಂಘ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಬಹುಮುಖ್ಯವಾಗಿ ಮಾನ್ಯ ಸದಸ್ಯರಾದ ವಾಮದೇವ್ ಅವರು, ರಾಮಭಟ್ಟ ಅವರು ಯಾವುದೋ ಒಂದು ನೆಪ ಹೇಳಿ, ಮಾನ್ಯ ಕೆ. ಎಚ್. ಪಾಟೀಲ್ ಅವರ ನೆಪ ಹೇಳಿ ಜನರಲ್ ಬಾಡಿ ಮೀಟಿಂಗ್ ಮತ್ತು ಚುನಾವಣೆಗಳನ್ನು ಮುಂದುವರಿಸುತ್ತೀರಿ ಎನ್ನುವ ಮಾತನ್ನು ಹೇಳಿದ್ದಾರೆ. ಅವರು ಮುಂದೆ ಹೋಗಿ ನಾನು ನಗರಾಡಳಿತ ಮಂತ್ರಿಯಾಗಿದ್ದಾಗ ಕಾರ್ಪೊರೇಷನ್‌ಗಳ ಚುನಾವಣೆಯನ್ನು ಸಹ ಮುಂದೆ ಹಾಕಿದೆ ಎಂದು ಹೇಳಿದರು. ಆದರೆ ನಾನು ಅಧಿಕಾರ ಬಿಟ್ಟ ಮೇಲೆ ಕೂಡ ಅವುಗಳಿಗೆ ಎಲೆಕ್ಷನ್ ಆಗಲಿಲ್ಲ. ಈ ಜನರಲ್ ಬಾಡಿ ಮೀಟಿಂಗನ್ನು ಮುಂದಕ್ಕೆ ಹಾಕುವುದಕ್ಕೆ ಯಾವ ಉದ್ದೇಶವೂ ಇಲ್ಲ. ಇವತ್ತು ನಮ್ಮ ಸರ್ಕಾರದವರು ಶ್ರೀ ಕೆ.ಹೆಚ್. ಪಾಟೀಲರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದ ಮೂಲ ಉದ್ದೇಶ ಏನೆಂದರೆ ಈ ಸಹಕಾರಿ ಕ್ಷೇತ್ರದಲ್ಲಿ ಆಗುತ್ತಾ ಇರತಕ್ಕಂಥ ಅವ್ಯವಹಾರವನ್ನು ತಡೆಗಟ್ಟುವುದಕ್ಕೆ ಮತ್ತು ಅವ್ಯವಹಾರ ಮಾಡಿದಂತಹವರಿಗೆ ಸೂಕ್ತವಾಗಿ ಶಿಕ್ಷೆ ಕೊಡುವುದಕ್ಕೆ ಅನುಕೂಲವಾಗಲಿ ಎಂದು, ಇವತ್ತು ಇರತಕ್ಕಂಥ ಆಕ್ಟ್‌ನಲ್ಲಿ ಅದಕ್ಕೆ ಅವಕಾಶವಿಲ್ಲ; ಈ ವಿಚಾರಗಳನ್ನೆಲ್ಲಾ ಸೂಕ್ತವಾಗಿ ಪರಿಶೀಲಿಸಿ ಒಂದು ರಿಪೋರ್ಟನ್ನು ಕೊಡಲಿ ಎಂದು ನಮ್ಮ ಸರ್ಕಾರದವರು ಕೆ.ಹೆಚ್. ಪಾಟೀಲ್ ಕಮಿಟಿಯನ್ನು ರಚನೆ ಮಾಡಿದರು.

ಮಾನ್ಯ ಸದಸ್ಯರು.—ಅವ್ಯವಹಾರ ಮಾಡಿದವರನ್ನೇ ಇವತ್ತು ಆ ವ್ಯವಹಾರಕ್ಕೆ ಬಿಟ್ಟಿದ್ದೀರಿ;

ಶ್ರೀ ಎಸ್.ಸಿ. ಶ್ರೀಕಂಠಯ್ಯ.—ಅದು ನಿಮ್ಮ ಅಭಿಪ್ರಾಯ. ಇವತ್ತು ಸಹಕಾರೀ ಕ್ಷೇತ್ರದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿ ಆ ರಂಗದಲ್ಲಿ ಅರಿತು ನುರಿತವರನ್ನೇ ಆ ಕಮಿಟಿಯಲ್ಲಿ ಹಾಕಿ, ಅವರು ಇವತ್ತು ನಮಗೆ ಒಂದು ಒಳ್ಳೆಯ ರಿಪೋರ್ಟನ್ನು ತಯಾರು ಮಾಡಿ ಕೊಟ್ಟಿದ್ದಾರೆ. ಅದನ್ನು ಸರ್ಕಾರ ಅನುಷ್ಠಾನಕ್ಕೆ ತರಬೇಕಾಗಿದೆ; ಅದನ್ನು ಸರ್ಕಾರ ಆದಷ್ಟು ಬೇಗನೇ ಅನುಷ್ಠಾನಕ್ಕೆ ತರುತ್ತದೆ. ಈ ಸಹಕಾರ ಸಂಘಗಳವರು ಈಗ ಜನರಲ್ ಬಾಡಿ ಮೀಟಿಂಗ್‌ಗಳನ್ನು ಮಾಡಿದಮೇಲೆ ನಾವು ಈ ರಿಪೋರ್ಟನ್ನು ಅನುಷ್ಠಾನಕ್ಕೆ ತಂದರೆ ಅವರು ಪುನಃ ಜನರಲ್ ಬಾಡಿ ಮೀಟಿಂಗ್‌ಗಳನ್ನು ಮಾಡಬೇಕಾದ್ದರಿಂದ ಆ ಸೊಸೈಟಿಗಳಿಗೆ ಅದು ಆರ್ಥಿಕವಾಗಿ ಭಾರವಾಗಬಹುದು, ಇವತ್ತಿನ ಪರಿಸ್ಥಿತಿಯಲ್ಲಿ

ಅವರ ಒಂದು ಹಣಕಾಸಿನ ಪರಿಸ್ಥಿತಿಯಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡತಕ್ಕಂಥ ಶಕ್ತಿ ಇಲ್ಲ. ಆದ್ದರಿಂದ ಈ ರಿಪೋರ್ಟನ್ನು ಅನುಷ್ಠಾನಕ್ಕೆ ತಂದು ಚುನಾವಣೆಗಳನ್ನು ಮಾಡಿ ಆನಂತರ ಜನರಲ್ ಬಾಡಿ ಮೀಟಿಂಗ್‌ಗಳನ್ನು ಮಾಡಬೇಕು ಎನ್ನುವ ಉದ್ದೇಶವೇ ಹೊರತು ಬೇರೇನೂ ಇಲ್ಲ. ನಮ್ಮ ಮಾನ್ಯ ರಾಮದೇವ್‌ರವರು ಹೇಳುತ್ತಿದ್ದರು, ಶ್ರೀ ನಲ್ಲೂರೇಗೌಡರನ್ನು ಮುಂದುವರಿಸಬೇಕೆನ್ನುವ ಉದ್ದೇಶದಿಂದ ಮುಂದಕ್ಕೆ ಹಾಕುತ್ತಿದ್ದಾರೆ ಎಂದು. ಆ ಉದ್ದೇಶವಂತೂ ಅಲ್ಲವೇ ಅಲ್ಲ. ಕೆಲವು ಮಾರ್ಕೆಟಿಂಗ್ ಫೆಡರೇಷನ್‌ಗಳಲ್ಲಿ ವಿರೋಧಪಕ್ಷದ ಸದಸ್ಯರುಗಳೂ ಅಧ್ಯಕ್ಷರಾಗಿದ್ದಾರೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇದರಲ್ಲಿ ನಮ್ಮ ಸ್ನೇಹಿತರಲ್ಲಿ ಯಾರನ್ನಾದರೂ ಮುಂದುವರಿಸಿಕೊಂಡು ಹೋಗಬೇಕೆನ್ನುವ ವೈಯಕ್ತಿಕ ಕಾರಣ ಇಲ್ಲವೇ ಇಲ್ಲ. ಈ ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕು ಎನ್ನತಕ್ಕಂಥಾದ್ದು ನನ್ನೊಬ್ಬನ ಏಕಾಭಿಪ್ರಾಯವಲ್ಲ; ಇದು ನಮ್ಮ ಸರ್ಕಾರದ ಒಟ್ಟಭಿಪ್ರಾಯ. ಇದರಲ್ಲಿ ಶ್ರೀಕಂಠಯ್ಯನವರೊಬ್ಬರೇ ಈ ಚುನಾವಣೆಗಳನ್ನು ಒಂದು ವೇಳೆ ಮುಂದಕ್ಕೆ ಹಾಕಿದ್ದರೆ, ಅವರ ಸ್ವಂತದವರಲ್ಲಿ ಯಾರನ್ನೋ ಮುಂದುವರಿಸುವುದಕ್ಕೆ ಈ ರೀತಿ ಮಾಡಿದ್ದಾರೆ ಎಂದು ದೂರು ಸಲ್ಲಿಸಬಹುದಾಗಿತ್ತು. ಆದರೆ ಆ ತರಹ ಇಲ್ಲ. ನಾವೆಲ್ಲರೂ ಸೇರಿ ಮಾತನಾಡಿ, ಶ್ರೀ ಕೆ ಹೆಚ್. ಪಾಟೀಲರು ಕೊಟ್ಟಿರತಕ್ಕಂಥ ರಿಪೋರ್ಟನ್ನು ಅನುಷ್ಠಾನಕ್ಕೆ ತರಬೇಕು, ಆಮೇಲೆ ಚುನಾವಣೆಗಳನ್ನು ಮಾಡಬೇಕು ಎನ್ನುವ ಕಾರಣಕ್ಕಾಗಿ ಅದನ್ನು ಮುಂದಕ್ಕೆ ಹಾಕಿದ್ದೇ ಹೊರತು ಇದರಲ್ಲಿ ಬೇರೇನೂ ದುರುದ್ದೇಶ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇವತ್ತು ಮಾನ್ಯ ಸದಸ್ಯರಾದ ದೇವೇಗೌಡರವರು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಅಪರೇಟಿವ್ ಸೊಸೈಟಿಗಳ ಬಗ್ಗೆ ಒಂದು ವಿಚಾರವನ್ನು ಹೇಳಿದರು. ಸುಮಾರು ೮ ಬ್ಯಾಂಕುಗಳಲ್ಲಿ ಇವತ್ತು ಸಾಲ ವಿತರಣೆಯ ಕೆಲಸ ನಡೆಯುತ್ತಾ ಇಲ್ಲ. ಅಲ್ಲಿ ಕ್ರೆಡಿಟ್ ಫೆಸಿಲಿಟೀಸ್ ಕೊಡತಕ್ಕಂಥಾದ್ದು ನಿಂತುಹೋಗಿದೆ. ಅವರಿಗೆ ರಿಸರ್ವ್‌ಬ್ಯಾಂಕ್‌ನವರು ಒಂದು ಕ್ರೆಡಿಟ್ ಲಿಮಿಟನ್ನು ಕೊಟ್ಟಿಲ್ಲ ಎಂದು ಹೇಳಿದರು. ನಾನು ಹೇಳುತ್ತೇನೆ. ಅವರಿಗೆ ಒಂದು ಕ್ರೆಡಿಟ್ ಲಿಮಿಟ್ಸ್ ಕೊಟ್ಟಿಲ್ಲ. ಆದರೆ ಅವರ ಒಂದು ಅಧಿಕಾರ ಕಕ್ಷೆಯಲ್ಲಿ ಬರತಕ್ಕಂಥ ಅಪೆಕ್ಸ್ ಮತ್ತಿತರ ಬ್ಯಾಂಕುಗಳಿಗೆ ಅವರು ಕ್ರೆಡಿಟ್ ಲಿಮಿಟ್ಸನ್ನು ಕೊಟ್ಟಿದ್ದಾರೆ. ಆದರೂ ಸಹ ಅವರಿಗೆ ಕೆಲವು ಕಂಡಿಷನ್ಸ್ ಹಾಕಿದ್ದಾರೆ. ಇವತ್ತು ಸರ್ಕಾರದ ಎರಡು, ಮೂರು ಬ್ಯಾಂಕ್‌ಗಳು ಬಹಳ ದುಸ್ಥಿತಿಯಲ್ಲಿವೆ. ಉದಾಹರಣೆಗೆ ಹಾಸನ, ಶಿವಮೊಗ್ಗ ಮತ್ತು ಕೋಲಾರದಲ್ಲಿರತಕ್ಕಂಥ ಈ ಬ್ಯಾಂಕುಗಳಿಗೆ ಸಾಧ್ಯವಾದಷ್ಟು ಸಾಫ್ಟ್ ಲೋನ್ ಕೊಟ್ಟು, ಯಾವ್ಯಾವ ಸಹಕಾರ ಸಂಘಗಳವರು ಸಾಲವನ್ನು ವಾಪಸ್ಸು ಕೊಟ್ಟಿದ್ದಾರೆಯೋ, ಯಾರ್ಯಾರು ಆ ಹಣವನ್ನು ಮರುಪಾವತಿ ಮಾಡಿದ್ದಾರೆಯೋ ಅವರಿಗೆ ಮೊದಲು ಹಣವನ್ನು ವಿತರಣೆ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ಈಗಾಗಲೇ ೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನು ಉಳಿದ ೪ ಬ್ಯಾಂಕುಗಳಿಗೂ ಕೂಡ ಇವತ್ತು ಆ ಒಂದು ಶಕ್ತಿ ಬರುತ್ತಾ ಇದೆ. ಅಪೆಕ್ಸ್ ಬ್ಯಾಂಕಿನ ನಾರ್ಮ್ಸ್ ಏನಿದೆ ಅದರ ಪ್ರಕಾರ ಜೂನ್ ಅಕ್ಸೈರಿಗೆ ೪೦ ಪರ್ಸೆಂಟ್‌ನಷ್ಟು ಸಾಲ ವಿತರಣೆ ಮಾಡತಕ್ಕಂಥ ಸಂದರ್ಭ ಬಂದಿದೆ. ಈ ವರ್ಷ ಇನ್ನೂ ಹೆಚ್ಚಿನ ರೀತಿಯಲ್ಲಿ ನಾವು ಅವಕ್ಕೆ ಹಣವನ್ನು ಕೊಡುತ್ತೇವೆ. ಇವತ್ತು ದೀರ್ಘಾವಧಿ ಸಾಲದ ವಸೂಲಾತಿ ಚೆನ್ನಾಗಿ ಇದೆ. ಹಾಗೆಯೇ ಅದರ ವಿತರಣೆಯೂ ಕೂಡ ಚೆನ್ನಾಗಿ ಇದೆ. ಈ ಅಲ್ಪಾವಧಿ ಸಾಲವನ್ನೂ ಕೂಡ ಇವತ್ತಿನ ದಿವಸ ಯಾವ ರೀತಿಯಲ್ಲಿ ವಿತರಣೆ ಮಾಡಬೇಕು ಎನ್ನುವ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಾ ಇದೆ. ಈ ಒಂದು ಯೋಚನೆ ಮಾಡಿ ಯಾವ ಬ್ಯಾಂಕುಗಳು ಇವತ್ತಿನ ದಿವಸ ದುಸ್ಥಿತಿಯಲ್ಲಿ ಇದೆ. ಆ ಬ್ಯಾಂಕುಗಳ ಆರ್ಥಿಕ ಕಷ್ಟವನ್ನು ಪರಿಹಾರ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ. ಅಪೆಕ್ಸ್ ಬ್ಯಾಂಕ್‌ಗಳು ಕೂಡ ಅವುಗಳ ನೆರವಿಗೆ ಬರುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ; ಆ ಬ್ಯಾಂಕುಗಳ ಮೂಲಕ ಹಣವನ್ನು ಕೊಡಿಸತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ ಎಂದು ನಾನು ಈ ಸಭೆಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇದೆಲ್ಲಕ್ಕಿಂತ ಬಹುಮುಖ್ಯವಾಗಿ ಸರ್ಕಾರ ಈ ಸ್ಮಾಲ್ ಮತ್ತು ಮಾರ್ಜಿನಲ್ ಫಾರ್ಮರ್ಸ್‌ಗೆ ಈಗಾಗಲೇ ಪೀನಲ್ ಇಂಟರೆಸ್ಟನ್ನು ವಜಾ ಮಾಡಿದೆ. ಅದರ ಒಂದು ಅವಧಿ ಜೂನ್ ಅಕ್ಸೈರಿಗೆ ಮುಗಿದುಹೋಗುತ್ತದೆ. ಆ ಒಂದು ಸಹಾಯವನ್ನು ಮುಂದುವರಿಸಬೇಕೇ ಅಥವಾ ಬೇಡವೇ ಎನ್ನತಕ್ಕಂಥ ವಿಚಾರವನ್ನು ಸರ್ಕಾರ ಈಗಾಗಲೇ ವಿಚಾರ ಮಾಡುತ್ತಿದೆ. ಏಕೆಂದರೆ ಈ ಸಾಲವನ್ನು ಜೂನ್ ತಿಂಗಳ ಅಖೈರಿನಲ್ಲಿ ಕೊಟ್ಟರೆ ಪೀನಲ್ ಇಂಟರೆಸ್ಟನ್ನು ಸರ್ಕಾರ ವೇವ್ ಮಾಡುತ್ತದೆ ಎಂದು ಹೇಳಿದರೂ ಕೂಡ ಸಾಲ ವಸೂಲಾತಿ ಸರಿಯಾಗಿ ಆಗುತ್ತಾ ಇಲ್ಲ. ಈ ಸಾಲ ವಸೂಲಾತಿ ಇನ್ನೂ ಉತ್ತಮ ಸ್ಥಿತಿಗೆ ಬಂದಿಲ್ಲ. ನಾವು ಯಾವುದೇ ಕನ್‌ಸೆಷನ್ ಕೊಡುತ್ತೇವೆ ಎಂದು ಹೇಳಿದರೂ ಕೂಡ ಸಾಲ ಮರುಪಾವತಿ ಮಾಡತಕ್ಕಂಥಾದ್ದು ಸರಿ

ಯಾಗಿ ಆಗುತ್ತಾ ಇಲ್ಲ. ಇದನ್ನು ಸುಮ್ಮನೆ ಮುಂದುವರಿಸುವುದರಿಂದ ಪ್ರಯೋಜನ ಉಂಟೇ ಇಲ್ಲವೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಆದರೆ ನನ್ನ ಅನೇಕ ಮಿತ್ರರು, ಅನೇಕ ಮಾನ್ಯ ಸದಸ್ಯರುಗಳು ಇದನ್ನು ಮುಂದುವರಿಸಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಸೂಕ್ತವಾಗಿ ಯೋಚನೆ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ದೇವೇಗೌಡರು ಮಾತನಾಡತಕ್ಕಂಥ ಸಂದರ್ಭದಲ್ಲಿ ತಮಿಳುನಾಡು ಹಾಗೂ ಮಹಾರಾಷ್ಟ್ರದಲ್ಲಿ ರೈತರು ತೆಗೆದುಕೊಂಡಿರ ತಕ್ಕಂಥ ಸಾಲವನ್ನು ವಜಾ ಮಾಡಿ, ಸುಮಾರು ೪೦ ಕೋಟಿ ರೂಪಾಯಿಗಳ ನೆರವು ಕೊಟ್ಟಿದ್ದಾರೆ ಎನ್ನ ತಕ್ಕಂಥ ಮಾತನ್ನು ಹೇಳಿದ್ದಾರೆ. ಆದರೆ ಇವತ್ತು ಅವರ ಪರಿಸ್ಥಿತಿ ಚೆನ್ನಾಗಿ ಇಲ್ಲ. ಅಲ್ಲಿ ಸಹಕಾರೀ ಕ್ಷೇತ್ರದಲ್ಲಿ ಆ ಸರ್ಕಾರದವರು ಆ ಸಾಲವನ್ನು ವೇವ್ ಮಾಡಿದಮೇಲೆ ಆ ಸಹಕಾರ ಸಂಘಗಳು ಇನ್ನು ಸಹ ದುಸ್ಥಿತಿಗೆ ಬಂದಿವೆ. ಇದು ಎಲ್ಲರ ಅಭಿಪ್ರಾಯ. ಆದರೆ ಅವರು ಹೇಳಿದಹಾಗೆ ಕೇರಳದಲ್ಲಿ ಏನೊಂದು ರೀಪೇ ಸಿಸ್ಟಂನ್ನು ಜಾರಿಗೆ ತಂದು ಆ ಮೂಲಕ ಹಣ ಕೊಟ್ಟಿದ್ದಾರೆ, ಅದರ ಬಗ್ಗೆ ನಾವು ರೀಎಗ್ಸಾಮ್ ಮಾಡಿಸುತ್ತೇವೆ. ಆದರೆ ಈ ಸ್ಮಾಲ್ ಫಾರ್ಮರ್ಸ್ ಆಗಲೀ, ಮಾರ್ಜಿನಲ್ ಫಾರ್ಮರ್ಸ್ ಆಗಲೀ, ಯಾರಿಗೇ ಆಗಲೀ ಈ ಸಾಲವನ್ನೇ ವೇವ್ ಮಾಡತಕ್ಕಂಥಾದ್ದು ಸರಿಯಾದ ನೀತಿಯಲ್ಲ. ಮಾನ್ಯ ಸದಸ್ಯರು ಹೇಳಿದಹಾಗೆ ಸಾಲದ ಮೇಲಿನ ಬಡ್ಡಿಯನ್ನು ಕಡಿಮೆ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡಬಹುದು. ಕೇರಳದ ತರಹ ರೀಪೇ ಸ್ಕೀಂ ಪ್ರಕಾರ ಕೊಡತಕ್ಕಂಥಾದ್ದು ಏನಿದೆ ಅದು ಬಹಳ ಸೂಕ್ತವಾದ ಸಲಹೆ. ಅದನ್ನು ನಾನು ರೀ ಎಕ್ಸಾಮಿನ್ ಮಾಡಿಸಿ ಅದನ್ನು ಇಲ್ಲಿ ಮಾಡುವುದಕ್ಕೆ ಸರ್ಕಾರದವರ ಮೇಲೆ ಒತ್ತಾಯ ಹಾಕುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆಮೇಲೆ ಮಾನ್ಯ ಸದಸ್ಯರಾದ ಶ್ರೀ ರಾಮಭಟ್‌ರವರು ಇಲ್ಲಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ಬಹುಮುಖ್ಯವಾಗಿ ಈ ಕಾಮನ್ ಕೇಡರ್ ಅಥರಿಟಿಯನ್ನು ಮಾಡಿರತಕ್ಕಂಥ ಉದ್ದೇಶ ಬಹಳ ಒಳ್ಳೆಯದು ಎಂದು ಹೇಳಿದ್ದಾರೆ. ಆ ಒಳ್ಳೆಯ ಉದ್ದೇಶದಿಂದ ಅದನ್ನು ಮಾಡಿದ್ದೂ ಆಯಿತು. ಆದರೆ ಅದರಲ್ಲಿ ಲೋಪದೋಷಗಳು ಎದ್ದು ಕಾಣುತ್ತಾ ಇವೆ. ಆದ್ದರಿಂದ ಸೂಪರ್ ಕಂಟ್ರೋಲ್ ಯಾವ ರೀತಿಯಲ್ಲಿ ಮಾಡಬೇಕು ಎನ್ನು ವುದರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ನಾನು ಈ ಸಂದರ್ಭ ದಲ್ಲಿ ಹೇಳಬಯಸುತ್ತೇನೆ.

ಇನ್ನು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ನೌಕರರು ಮುಷ್ಕರವನ್ನು ಹೂಡಿದ್ದಾರೆ. ಈಗಾಗಲೇ ಸರ್ಕಾರದವರು ಅವರಿಗೆ ಟಿ.ಎ. ಮತ್ತು ಡಿ.ಎ. ಮಂಜೂರು ಮಾಡುವಂತೆ ಸರ್ಕಾರದ ಆಜ್ಞೆಯನ್ನು ಹೊರಡಿಸಲಾಗಿದೆ. ಮತ್ತೆ ಅವರ ವೇತನ ಶ್ರೇಣಿಯನ್ನು ಪುನರ್‌ಪರಿಶೀಲನೆ ಮಾಡ ಬೇಕೆಂದು ಒತ್ತಾಯ ಪಡಿಸುತ್ತಿದ್ದಾರೆ. ಆದರೆ ಅವರು ತಮ್ಮ ಮುಷ್ಕರವನ್ನು ಕೈಬಿಟ್ಟು ನ್ಯಾಯವಾದ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟರೆ ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ. ಅವರು ಮುಷ್ಕರವನ್ನು ಮುಂದುವರಿಸುವುದಾದರೆ ಯಾವ ಒಂದು ಬೇಡಿಕೆಯನ್ನು ಈಡೇರಿಸುವುದಕ್ಕೆ ಸರ್ಕಾರಕ್ಕೆ ಕಷ್ಟವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರಿಗೆ ಕೊಡ ಬೇಕಾದಂತಹ ಟಿ.ಎ. ಮತ್ತು ಡಿ.ಎ. ಯನ್ನು ಈಗಾಗಲೇ ತೀರ್ಮಾನ ಮಾಡಿ ಕೊಟ್ಟಿದ್ದೇವೆ. ಆದ್ದರಿಂದ ಅವರು ಮುಷ್ಕರವನ್ನು ನಿಲ್ಲಿಸಿದರೆ ಮಾತ್ರ ಅವರ ಬೇಡಿಕೆಗಳನ್ನು ಪರಿಗಣಿಸಲು ಸಾಧ್ಯ. ಸಹಕಾರ ಸಂಘಗಳಲ್ಲಿ ಯಾವಾಗಲು ಮುಷ್ಕರವನ್ನು ಮಾಡುತ್ತಿದ್ದರೆ ಆ ನೌಕರರಿಗೆ ವೇತನ ಶ್ರೇಣಿಯನ್ನು ಬದಲಾವಣೆ ಮಾಡಲು ಅಥವಾ ಹೆಚ್ಚು ಸಂಬಳವನ್ನು ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ? ಮತ್ತು ಯಾವ ರೀತಿಯಲ್ಲಿ ಹೆಚ್ಚು ಬೋನಸ್ ಕೊಡುವುದಕ್ಕೆ ಸಾಧ್ಯವಾಗುತ್ತದೆ.? ಸಹಕಾರ ಸಂಘ ಗಳಲ್ಲಿ ಹೆಚ್ಚು ಲಾಭ ಸಂಪಾಧನೆ ಮಾಡಿದರೆ ಮಾತ್ರ ಕೊಡಬಹುದು ಇಲ್ಲದಿದ್ದರೆ ಹೇಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ.? ಇವತ್ತು ಸಹಕಾರ ಸಂಘಗಳ ಪರಿಸ್ಥಿತಿ ಏನಾಗಿದೆ ಎಂದರೆ ಬಹಳ ಅಧೋಗತಿಗೆ ಇಳಿದಿದೆ. ಅದ್ದರಿಂದ ಯಾವ ರೀತಿ ತೀರ್ಮಾನ ತೆಗೆದುಕೊಳ್ಳಬೇಕು ಎಂಬುದು ಬಹಳ ಕಷ್ಟವಾಗಿದೆ. ಈ ಸಹಕಾರ ಸಂಘಗಳ ನೌಕರರು ಮುಷ್ಕರವನ್ನು ಯಾವಾಗಲು ಜೂನ್ ತಿಂಗಳಿನಲ್ಲಿಯೇ ಪ್ರಾರಂಭ ಮಾಡುತ್ತಾರೆ. ಜೂನ್ ತಿಂಗಳಿನಲ್ಲಿ ಯಾವಾಗಲೂ ವಸೂಲಾತಿಯನ್ನು ಮಾಡುವ ಕಾಲ. ಈ ಕಾಲ ದಲ್ಲಿ ಇವರು ಮುಷ್ಕರವನ್ನು ಮಾಡಿದರೆ ಹೇಗೆ? ಇದು ಅವರಿಗೆ ಸಾಧುವಾದುದ್ದಲ್ಲ. ಆದ್ದರಿಂದ ಮಾನ್ಯ ಸದಸ್ಯರು ತಮ್ಮ ತಮ್ಮ ಕ್ಷೇತ್ರಗಳ ಸಹಕಾರ ಸಂಘಗಳ ನೌಕರರಿಗೆ ಹೇಳಬೇಕು. ಸರ್ಕಾರಕ್ಕೆ ಬರಬೇಕಾದಂತಹ ಬಾಕಿಯನ್ನು ಹೆಚ್ಚು ಶ್ರದ್ಧೆವಹಿಸಿ ವಸೂಲಾತಿಯನ್ನು ಮಾಡಿ ಹೆಚ್ಚು ಲಾಭ ಸಂಪಾಧನೆ

ಮಾಡಿದರೆ ಬೋನಸ್ಸ್ ಕೊಡಬಹುದು ಮತ್ತೇ ಹೆಚ್ಚು ಸಂಬಳವನ್ನು ಕೊಡಬಹುದು, ಆದರೆ ವಸೂಲಾತಿಯನ್ನು ಮಾಡದಿದ್ದರೆ ಕೊಡುವುದು ಹೇಗೆ ಎನ್ನುವುದನ್ನು ತಾವು ಹೇಳಬೇಕು. ಈ ನೌಕರರ ವೇತನ ಶ್ರೇಣಿಯನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ಅವರ ಮನವಿಯನ್ನು ಪರಿಶೀಲನೆ ಮಾಡುತ್ತೇನೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯುಸುತ್ತೇನೆ.

ಇನ್ನು ಮಾರ್ಕೆಟಿಂಗ್ ಸೊಸೈಟಿಗಳ ಬಗ್ಗೆ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಎ.ಜಿ. ಕೊಡಗಿಯವರು ಪ್ರಸ್ತಾಪ ಮಾಡುತ್ತಾ ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ರೈತರಿಗೆ ಬೇಕಾದಂತಹ ಗೊಬ್ಬರದ ಬೆಲೆ ಜಾಸ್ತಿ ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಇಲ್ಲ ಎಂದು ನಾನು ಹೇಳುವುದಕ್ಕಾಗುವುದಿಲ್ಲ. ಈಗ ಸರ್ಕಾರದವರು ಸುಮಾರು ೫೦ ಟನ್ ಗೊಬ್ಬರವನ್ನು ದಾಸ್ತಾನು ಮಾಡಬೇಕು. ಇದಕ್ಕೆ ಸುಮಾರು ೧೦-೧೨ ಕೋಟಿ ರೂಪಾಯಿಗಳು ಆಗುತ್ತದೆ ಆದರೆ ಖಾಸಗಿಯವರು ಸುಮಾರು ೨ ರೂಪಾಯಿಗಳ ಕಡಿಮೆ ಬೆಲೆಗೆ ಕೊಟ್ಟರೆ ಅವರು ತೂಕದಲ್ಲಿ ಬೇಕಾದರೆ ಮೋಸ ಮಾಡಬಹುದು, ಇಲ್ಲವೇ ಅದರ ಗುಣ ಮಟ್ಟ ಕಡಿಮೆ ಇರಬಹುದು. ಆದರೆ ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ಒಳ್ಳೆಯ ಉತ್ತಮವಾದಂತಹ ಗೊಬ್ಬರ ಕೊಡುತ್ತಾರೆ. ಅಳತೆಯಲ್ಲಿಯೂ ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಎರಡು ರೂಪಾಯಿಗಳ ಜಾಸ್ತಿ ಕೊಟ್ಟು ಬೇಕಾದರೂ ತಾವು ತೆಗೆದುಕೊಂಡು ಹೋಗಬಹುದು. ಈಗ ಮಾರುತ್ತಿರುವ ಬೆಲೆಗೆ ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಹೆಚ್ಚು ಬೆಲೆ ಕೊಟ್ಟರೆ ಒಳ್ಳೆಯದು, ಆದರೆ ಕಡಿಮೆ ಮಾಡಿ ಎಂದು ಹೇಳುವಂತದ್ದು ಸಾಧುವಾದುದ್ದಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯುಸುತ್ತೇನೆ. ನಮ್ಮ ಸಹಕಾರ ಸಂಘಗಳಿಗೆ ಬಂದ ಲಾಭಾಂಶವನ್ನು ಎಲ್ಲಾ ಷೇರುದಾರರಿಗೂ ಹಂಚುವ ವ್ಯವಸ್ಥೆಯನ್ನು ಸಹ ಮಾಡಿದ್ದೇವೆ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಬಂದಂತಹ ಲಾಭಾಂಶವನ್ನು ಸಹ ಷೇರುದಾರರಿಗೆ ಹಂಚುವ ವ್ಯವಸ್ಥೆಯನ್ನು ಮಾಡಿದ್ದೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯುಸುತ್ತೇನೆ. ಮತ್ತೆ ರೈತರಿಗೆ ಯಾವುದಾದರೂ ಗೊಬ್ಬರಗಳು ಸಿಗಲಿಲ್ಲ ಎನ್ನುವ ವಾದವಿದ್ದರೆ ಅಂತಹ ವಾದವನ್ನು ಪರಿಶೀಲನೆ ಮಾಡೋಣ.

ಇನ್ನು ಕೆಲವು ಜನ ಸ್ನೇಹಿತರುಗಳು ಮಾತನಾಡುವಾಗ ಇಲ್ಲಿನ ಅವ್ಯವಹಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸುಮಾರು ೫೪೦ ಕೇಸ್‌ಗಳಲ್ಲಿ ಅವ್ಯವಹಾರ ನಡೆದಿದೆ, ಇದರಲ್ಲಿ ಒಟ್ಟು ಸರ್ಕಾರಕ್ಕೆ ಬರಬೇಕಾದ ಹಣ ೧,೫೦,೯೩, ರೂಪಾಯಿಗಳು. ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಗಂಗಾಧರನ್‌ರಂತಹ ವಕೀಲರು ಅವ್ಯವಹಾರ ಮಾಡಿದವರಿಗೆ ರಕ್ಷಣೆ ಕೊಟ್ಟು ಬಿಡಿಸಿಕೊಂಡು ಬರುತ್ತಾರೆ. ಮತ್ತು ಅವರಿಗೆ ಸ್ಟೇ ಆರ್ಡರ್ ತೆಗೆದುಕೊಡುತ್ತಾರೆ.

ಶ್ರೀ ಎಂ. ಸಿ. ನಾನಯ್ಯ.—ಅದು ಅವರ ವೃತ್ತಿ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅವ್ಯವಹಾರವನ್ನು ಮಾಡಿದವರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬಾರದು ಎನ್ನುವಂತಹ ಉದ್ದೇಶ ಯಾವ ಸರ್ಕಾರಕ್ಕೂ ಇಲ್ಲ. ಈ ಬಗ್ಗೆ ನಿಮ್ಮ ಪಾತ್ರವೇ ನಮ್ಮ ಪಾತ್ರ ಆದುದರಿಂದ ಐ.ಜಿ. ಆಫ್ ಪೋಲೀಸ್ ಮತ್ತು ಎಸ್.ಪಿ. ಅವರ ಜೊತೆ ನಮ್ಮ ಅಧಿಕಾರಿಗಳು, ರಿಜಿಸ್ಟ್ರಾರ್‌ರವರು, ನಮ್ಮ ಸೆಕ್ರೆಟರಿಗಳು ಚರ್ಚೆ ಮಾಡಿ ಆದಷ್ಟು ಜಾಗ್ರತೆ ಯಾವ ರೀತಿ ಈ ಕೇಸುಗಳನ್ನು ವಿಲೇವಾರಿ ಮಾಡಬೇಕು, ಯಾವ ರೀತಿ ಈ ಕೇಸುಗಳನ್ನು ತೀರ್ಮಾನಿಸಬೇಕು ಎನ್ನುವುದರ ಬಗ್ಗೆ ಪ್ರತಿ ಕ್ವಾರ್ಟರ್‌ನಲ್ಲೂ ಮೀಟಿಂಗ್ ನಡೆಸಿ, ಮಿಸ್ ಅಪ್ರೋಪ್ರಿಯೇಷನ್ ಕೇಸುಗಳನ್ನು ಆದಷ್ಟು ಜಾಗ್ರತೆ ವಿಲೇವಾರಿ ಮಾಡುವುದರಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ಮತ್ತೆ ಬೀಡಿ ವರ್ಕರ್ಸ್‌ಗೆ ಪ್ರತ್ಯೇಕವಾಗಿ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಬೇಕು, ಏಕೆಂದರೆ, ಈ ಸಹಕಾರ ಸಂಘಗಳ ಸಂಖ್ಯೆ ಕಡಿಮೆಯಾಗುತ್ತಾ ಇದೆ ಎಂದು ಯಾವುದೋ ಫಿಗರನ್ನು ನೋಡಿಬಿಟ್ಟು ಮಾನ್ಯ ರಾಂಭಟ್ಟರು ಭಾಷಣ ಮಾಡಿದರು. ಸಹಕಾರ ಸಂಘಗಳ ಸಂಖ್ಯೆ ವರ್ಷೇ ವರ್ಷೇ ಕಡಿಮೆಯಾಗುತ್ತಾ ಇದೆ ಎಂದು ಹೇಳಿದರು. ಕಡಿಮೆಯಾಗತಕ್ಕಂಥಾದ್ದು ಏನು ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಇವತ್ತು ಅಮಾಲ್ಗಮೇಷನ್ ಆದಮೇಲೆ ಕೆಲವು ಸೊಸೈಟಿಗಳ ಸಂಖ್ಯೆ ಕಡಿಮೆಯಾಗಿದೆ, ಲಿಕ್ವಿಡೇಷನ್ ಆಗಿದೆ. ಎಷ್ಟೋ ಸೊಸೈಟಿಗಳು ಡಿಫಂಕ್ಟ್ ಆಗಿವೆ. ಆ ದೃಷ್ಟಿಯಿಂದ ಸೊಸೈಟಿಗಳ ಸಂಖ್ಯೆ ಕಡಿಮೆಯಾಗತಕ್ಕಂಥಾದ್ದೇ ಹೊರತು ಇನ್ಯಾವುದೇ ಕಾರಣಕ್ಕೆ ಅಲ್ಲ. ಇವತ್ತು ಬೀಡಿ ವರ್ಕರ್ಸ್ ಸೊಸೈಟಿಗಳನ್ನು ಫಿರ್ಕಾ ಲೆವೆಲ್

ನಲ್ಲಿ ಮಾಡಬೇಕು ಎನ್ನುಥ ಮಾತನ್ನು ಹೇಳಿದ್ದೀರಿ, ಬಹಳ ಸಂತೋಷ. ತಂಬಾಕು ಬೆಳೆಗಾರರ ಸೊಸೈಟಿಗಳನ್ನು ನಾವು ಮಾಡಿದೆವು. ಹಿಂದೆ ಮಧ್ಯವರ್ತಿಗಳಿಂದಾಗಿ ರೈತನಿಗೆ ಸರಿಯಾದ ತೂಕ ಸಿಗುತ್ತಾ ಇರಲಿಲ್ಲ, ಸರಿಯಾದ ಬೆಲೆ ಸಿಗುತ್ತಾ ಇರಲಿಲ್ಲ. ಯಾವ ರೇಟು ಕೊಡುತ್ತಾ ಇದ್ದಾರೆಂದು ಗೊತ್ತಿರಲಿಲ್ಲ. ರೇಟು ೧೦ ರೂಪಾಯಿ ಇದ್ದರೆ, ಅವರಿಗೆ ಕೆ.ಜಿ.ಗೆ ೫ ರೂಪಾಯಿ ಕೂಡ ಸಿಗುತ್ತಾ ಇರಲಿಲ್ಲ. ಇವತ್ತು ಒಳ್ಳೆಯ ರೇಟನ್ನು ಕೊಟ್ಟಿದ್ದೇವೆ, ತಾವು ಒಂದು ಕೋಟಿ ರೂಪಾಯಿ ಎಂದು ಹೇಳಿದಿರಿ, ೬ ಕೋಟಿ ರೂಪಾಯಿಗಳನ್ನು ಸರ್ಕಾರ ಕೊಟ್ಟಿದೆ, ಇವತ್ತು ೬ ಕೋಟಿ ರೂಪಾಯಿನ ತಂಬಾಕು ಸ್ಟಾಕ್ ಇದೆ. ಇವತ್ತು ಮಂಗಳೂರಿನ ಬೀಡಿ ಮ್ಯಾನುಫ್ಯಾಕ್ಚರರ್ಸ್ ನಮ್ಮ ಸೊಸೈಟಿ ಹತ್ತಿರ ಕೊಳ್ಳುತ್ತಾ ಇಲ್ಲ. ಈ ಒಂದು ಸ್ಕೀಂ ಏನಿದೆ ಅದನ್ನು ಸಂಪೂರ್ಣವಾಗಿ ಹಾಳು ಮಾಡಬೇಕು ಎಂದು ಇವತ್ತು ವ್ಯಾಪಾರಗಾರರೆಲ್ಲಾ ಜೊತೆಯಾಗಿದ್ದಾರೆ ನಾವು ಒಳ್ಳೆಯ ತಂಬಾಕು ಕೊಡುತ್ತೇವೆ ಸುಲಭ ದರದಲ್ಲಿ ಕೊಡುತ್ತೇವೆ. ಮತ್ತು ಅವರು ಹೇಳಿದಂಥ ಕ್ರೆಡಿಟ್ ಲಿಮಿಟ್ ಕಂಡೀಷನ್‌ಗೂ ನಾವು ಒಪ್ಪಿಕೊಂಡಿದ್ದೇವೆ. ಆದರೂ ಸಹ ತಮ್ಮ ಏಜೆಂಟರನ್ನು ಬಿಟ್ಟು ಪುನಃ ಅವರು ಮಾಲು ಕೊಳ್ಳುವುದಕ್ಕೆ ಶುರು ಮಾಡಿದ್ದಾರೆ. ನಮ್ಮ ಸೊಸೈಟಿಯಿಂದ ತಂಬಾಕನ್ನು ಕೊಳ್ಳುತ್ತಾ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಅವರನ್ನು ಕರೆಸಿ ಸಭೆ ಮಾಡಿದರು, ನಾನು ಮತ್ತು ಕಾರ್ಮಿಕ ಮಂತ್ರಿಗಳು, ಫೈನಾನ್ಸ್ ಮಿನಿಸ್ಟರ್ ಸಭೆ ಮಾಡಿದ್ದು ಆಯಿತು. ಆ ಸಭೆಯಲ್ಲಿ ಒಪ್ಪಿಕೊಳ್ಳುತ್ತಾರೆ, ಆದರೆ ತಂಬಾಕನ್ನು ಕೊಳ್ಳುವುದಿಲ್ಲ. ಇವತ್ತು ೬ ಕೋಟಿ ರೂಪಾಯಿನ ತಂಬಾಕು ಸ್ಟಾಕ್ ಇದೆ. ಪುನಃ ಹೊಗೆಸೊಪ್ಪು ಬರುತ್ತಾ ಇದೆ. ಅದನ್ನು ಕೊಳ್ಳತಕ್ಕ ವ್ಯವಸ್ಥೆ ಮಾಡಬೇಕು. ಇದು ಮಾರಾಟವಾಗದೆ ಕೊಳ್ಳತಕ್ಕ ವ್ಯವಸ್ಥೆ ಹೇಗೆ ಮಾಡುವುದು. ಇವತ್ತು ಬೆಳೆಯ ತಕ್ಕವನಿಗೆ ತೊಂದರೆ ಕೊಡತಕ್ಕ ವ್ಯವಸ್ಥೆ ಇನ್ನೂ ನಡೆಯುತ್ತಾ ಇದೆ, ಅದು ತಪ್ಪಿಲ್ಲ. ನನ್ನು ಕ್ಯಾಂಕೊ ಸಂಸ್ಥೆಯನ್ನು ಪ್ರಾರಂಭ ಮಾಡದೇ ಇದ್ದಿದ್ದರೆ ಇವತ್ತು ಅಡಿಕೆ ಬೆಳೆಗಾರರ ಪರಿಸ್ಥಿತಿ ಏನಾಗುತ್ತಿತ್ತು? ಇವತ್ತು ಕೊಕೋಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟು ವಿದೇಶಕ್ಕೆ ಕಳಿಸಿ, ಮೆಷಿನರಿ ಪರ್ಚೇಸ್ ಮಾಡಿಸಿ, ಕಾರ್ಖಾನೆ ಹಾಕಿದ್ದೇವೆ. ಕಾಡ್ಬೈರೀಸ್ ಒಬ್ಬರನ್ನು ಬಿಟ್ಟರೆ ಇನ್ನಾರೂ ತಲೆ ಮೇಲೆ ಹೊತ್ತು ಕೊಂಡು ಮಾರಾಟ ಮಾಡುವುದಕ್ಕೆ ಹೋದರೂ ಕೂಡ ಕೆ.ಜಿ.ಗೆ ೪ ರೂಪಾಯಿಗೆ ಕೊಳ್ಳುತ್ತಾ ಇರಲಿಲ್ಲ, ಕೆ.ಜಿ. ೩ ರೂಪಾಯಿಗೆ ಕೊಳ್ಳುತ್ತಾ ಇರಲಿಲ್ಲ. ಇದರಿಂದ ಇವತ್ತು ಅಡಿಕೆ ಬೆಳೆಯುತಕ್ಕವರ ಪರಿಸ್ಥಿತಿ, ಕೋಕೋ ಬೆಳೆಯುತಕ್ಕವರ ಪರಿಸ್ಥಿತಿ ಎಷ್ಟು ಸುಧಾರಣೆಯಾಗಿದೆ. ತಾವು ಬಹಳ ಚನ್ನಾಗಿ ಮಾತ ನಾಡಿದ್ದೀರಿ, ಆದರೆ ಇದರ ಬಗ್ಗೆ ಹೇಳಲಿಲ್ಲ, ಸೌತ್ ಕೆನರಾದವರೇ, ಮಾನ್ಯ ರಾಮಭಟ್ಟರ ಊರಿನವರೇ ಅದರಿಂದ ಅನುಕೂಲ ಹೊಂದಿದವರು. ಅಡಿಕೆ ಬೆಳೆದವರಿಗೂ ಲಾಭ, ಕೋಕೋ ಬೆಳೆದವರಿಗೂ ಲಾಭ.

ಶ್ರೀ ಬಿ. ವಿ. ಕಕ್ಕಿಲಾಯ.—ಶಿವಮೊಗ್ಗದವರೂ ಇದ್ದಾರೆ.

ಶ್ರೀ ಕೆ. ರಾಮಭಟ್.—ಕೇರಳದವರೂ ಇದ್ದಾರೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಕೇರಳ–೫೦, ಕರ್ನಾಟಕ––೫೦.

ಶ್ರೀ ಬಿ. ವಿ. ಕಕ್ಕಿಲಾಯ.—ತಂಬಾಕು ಸರಿಯಾಗಿಲ್ಲ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದು ಸರಿಯಾಗಿಲ್ಲ ಅಂದರೆ ಅದಕ್ಕೆ ನಿಮ್ಮವರೇ ಕಾರಣ. ನಿಮ್ಮ ಸೌತ್ ಕೆನರಾದವರು ಬೀಡಿ ಮ್ಯಾನುಫ್ಯಾಕ್ಚರರ್ಸ್ ಕಾರಣ, ಇವತ್ತು ಬೀಡಿ ಮ್ಯಾನುಫ್ಯಾಕ್ಚರರ್ಸ್ ದೊಡ್ಡ ರೀತಿಯಲ್ಲಿರತಕ್ಕಂಥಾವರು ಎಂದರೆ ಮಂಗಳೂರಿನವರು. ಭಾರತ್ ಬೀಡಿ, ಗಣೇಶ ಬೀಡಿ, ಇವೆಲ್ಲವೂ ಇರತಕ್ಕಂಥಾದ್ದು ಮಂಗಳೂರಿನಲ್ಲಿ, ಸಾವಿರಾರು ಜನ ಕೊಳ್ಳುತ್ತಾರೆ. ನಮ್ಮ ಸೊಸೈಟಿಯಿಂದ ತೆಗೆದುಕೊಳ್ಳಿರಿ ಅಂದರೆ ಒಲ್ಲರು, ಅವರಿಗೆ ದಯವಿಟ್ಟು ತಾವು ತಿಳಿಸಬೇಕು. ಇವತ್ತು ಬೀಡಿ ಸಹಕಾರ ಸಂಘಗಳನ್ನು ದೊಡ್ಡ ರೀತಿಯಲ್ಲಿ ಮಾಡಿ.

ಶ್ರೀ ಪಂಪಾಪತಿ.—ತಂಬಾಕನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಕೊಳ್ಳುತ್ತಾರೆಂದು ಮಾನ್ಯ ಸಚಿವರು ಹೇಳಿದರು, ಆದರೆ ನಮ್ಮ ಕಾರ್ಮಿಕ ಸಚಿವರು ಕನಿಷ್ಟ ಕೂಲಿ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯ ರಾಮಭಟ್ಟರು ಮತ್ತು ಮಾನ್ಯ ಕಕ್ಕಿಲಾಯರವರು ಹೇಳಿದ ಹಾಗೆ ಸೌತ್ ಕೆನರಾದಲ್ಲಿ ದೊಡ್ಡ ಸೊಸೈಟಿ ಮಾಡಬೇಕು ಎಂದು ಹೊರಟಿದ್ದಾರೆ. ಇದರಿಂದ ಸಾವಿರಾರು ಜನಕ್ಕೆ ಕೂಲಿ ಕೊಡಬಹುದು. ಮಾನ್ಯ ಪಂಪಾಪತಿಯವರು ಹೇಳಿದ ರೇಟನ್ನೇ ಕೊಡಬಹುದು. ತಂಬಾಕು ಸೊಸೈಟಿಗೆ ಕೊಡುವಂತೆ ನಾವು ಸಾಲ ಬೇಕಾದರೆ ಕೊಡುತ್ತೇವೆ. ಇವರು ಬೀಡಿ ತಯಾರಕ

ಮಾಡಿ ಮಾರಲಿ. ಇವತ್ತು ಕೇರಳದಲ್ಲಿ ಬೀಡಿ ಮ್ಯಾನುಫ್ಯಾಕ್ಚರರ್ಸ್ ಸೊಸೈಟಿ ಮಾಡಿ ಒಳ್ಳೆಯ ಲಾಭವನ್ನು ಸಂಪಾದನೆ ಮಾಡಿದ್ದಾರೆ. ಇವರೂ ಸಹ ಅಂತಹ ಸೊಸೈಟಿಗಳನ್ನು ಪ್ರಾರಂಭಮಾಡಿದರೆ......

ಶ್ರೀ ಬಿ. ವಿ. ಕಕ್ಕಿಲಾಯ.—ತಂಬಾಕು ಬೆಳೆಗಾರರಿಗೆ ತೊಂದರೆಯಾಯಿತು ಎಂದು ಸೊಸೈಟಿ ಮಾಡಿದರೆ ಸಂತೋಷ. ಅದನ್ನು ಮಾಡುವಾಗ ಮಹಾರಾಷ್ಟ್ರ, ಗುಜರಾತ್, ಆಂಧ್ರ ಮತ್ತು ಕರ್ನಾಟಕ ಹೀಗೆ, ಕ್ಯಾಂಕೊ ಸೊಸೈಟಿ ಯಾವ ರೀತಿ ಮಾಡಿದ್ದೀರಿ ಹಾಗೆ ಎರಡು ರಾಜ್ಯಗಳು ಸೇರಿ ಮಾಡಿದರೆ ಮತ್ತು ಸೆಂಟ್ರಲ್ ಸೊಸೈಟಿ ಯಾವ ರೀತಿ ಮಾಡಿದ್ದೀರಿ ಅದೇ ರೀತಿ ತಂಬಾಕು ಬೆಳೆಯುವವರನ್ನೂ ಸೇರಿಸಿಕೊಂಡು ಒಂದು ಸೊಸೈಟಿ ಮಾಡಿದರೆ, ತಂಬಾಕಿಗೆ ಒಳ್ಳೆಯ ಬೆಲೆ ಕೊಟ್ಟು ರೈತರಿಂದ ತೆಗೆದುಕೊಂಡರೆ, ಕ್ಯಾಂಕೋದವರಿಂದಲೇ ಕೊಂಡುಕೊಳ್ಳಬೇಕಾಗುತ್ತದೆ. ಅದೇ ರೀತಿ ಬೀಡಿ ಮಾಲೀಕರನ್ನೂ ಹದ್ದುಬಸ್ತಿಗೆ ತರಬಹುದಾಗಿತ್ತು. ಅವರೇ ಸ್ಟಾಕ್ ಮಾಡುವುದಕ್ಕಾಗುವುದಿಲ್ಲ ಮಾಲೀಕರು ತಂಬಾಕು ಬೇಡ ಎಂದು ಹೇಳುತ್ತಾರೆ. ಆದ್ದರಿಂದ ಸೊಸೈಟಿಗೆ ಹೆಚ್ಚಿನ ಸಹಾಯ ಮಾಡಿ ಅದನ್ನು ವಿಸ್ತರಿಸಲಿಕ್ಕೆ ಬೇಕಾದಂಥ ವ್ಯವಸ್ಥೆ ಮಾಡಿ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದನ್ನು ಉತ್ತಮವಾದಂಥ, ವ್ಯವಸ್ಥಿತವಾದಂಥ ರೀತಿಯಲ್ಲಿ ಮಾಡಬೇಕು ಎನ್ನುವುದೇ ನಮಗೆ ಆಸೆ. ಯಾವುದಾದರೂ ಒಂದು ಸಂಸ್ಥೆ ಪ್ರಾರಂಭಮಾಡಿ ಬೆಳೆಯತಕ್ಕವನಿಗೆ ಅನುಕೂಲವಾಗಲಿ ಎಂದು ಹೊರಟರೆ, ಅದರಿಂದ ಸಣ್ಣ ಸಣ್ಣ ಕಿರುಕುಳ, ತೊಂದರೆಯಾಗುತ್ತಿದೆ. ಶ್ರೀಮಾನ್ ದೇವೇಗೌಡರು ನಿನ್ನೆ ಮಾತನಾಡುತ್ತಾ, ಇವತ್ತಿನ ದಿವಸ ಕರ್ನಾಟಕದಲ್ಲಿ ಕೋಆಪರೇಟೀವ್ ಸ್ಪಿನ್ನಿಂಗ್ ಮಿಲ್‌ಗಳು, ಕೋಆಪರೇಟೀವ್ ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರದ ಮಂಜೂರಾತಿಯನ್ನು ಪಡೆಯುವುದರಲ್ಲಿ ವಿಫಲವಾಗಿವೆ, ಈ ಸರ್ಕಾರ ಕೇಂದ್ರ ಸರ್ಕಾರದಲ್ಲಿ ಸಾಕಷ್ಟು ಪ್ರಭಾವವನ್ನು ಬೀರಲಿಕ್ಕೆ ಆಗಿಲ್ಲ ಎನ್ನತಕ್ಕ ಮಾತನ್ನು ಹೇಳಿದರು. ಅದು ಸರಿಯಾದುದಲ್ಲ. ಇವತ್ತು ೧೪ ಕೋಆಪರೇಟೀವ್ ಸ್ಪಿನ್ನಿಂಗ್ ಮಿಲ್‌ಗಳನ್ನು ಆರನೇ ಪ್ಲಾನ್‌ನಲ್ಲಿ ಮಾಡಬೇಕು ಎಂದು ಸರ್ಕಾರ ತೀರ್ಮಾನಮಾಡಿದೆ. ಈಗಾಗಲೇ ೮ ಕೊ ಆಪರೇಟೀವ್ ಸ್ಪಿನ್ನಿಂಗ್ ಮಿಲ್‌ಗಳಿಗೆ ಎನ್ ಸಿ.ಡಿ ಸಿ. ಕಾರ್ಪೊರೇಷನ್ನಿನ ಹಣ ಸಹಾಯ ಕೋರಿ ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ ಬೇರೆ ರಾಜ್ಯಗಳಲ್ಲಿ ಅದನ್ನು ತೆಗೆದುಕೊಂಡು ಹೋಗಿದ್ದಾರೆ ಎನ್ನತಕ್ಕ ಮಾತನ್ನು ಹೇಳಿದರು, ಮಹಾರಾಷ್ಟ್ರದಲ್ಲಿ ಐದಾರು ತಿಂಗಳ ಹಿಂದೆ ಐದಾರು ಸ್ಪಿನ್ನಿಂಗ್ ಮಿಲ್‌ಗಳಿಗೆ ಪರ್ಮಿಷನ್ ಕೊಟ್ಟಿದ್ದಾರೆ. ಆದರೆ ಎನ್.ಸಿ ಡಿ.ಸಿ. ಬಡ್ಜೆಟ್‌ನಲ್ಲಿ ಇದು ಇಲ್ಲದ್ದರಿಂದ ಈ ವರ್ಷ ಕೊಡುತ್ತೇವೆ ಎಂಬ ಭರವಸೆಯನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ಇವತ್ತು ರೈತರು ಬೆಳೆಯುತಕ್ಕ ಹತ್ತಿಯಲ್ಲಿ ಕೇವಲ ೨೦ ಪರ್ಸೆಂಟ್ ನಾವು ಕನ್‌ಸ್ಯೂಂ ಮಾಡುತ್ತಾ ಇಲ್ಲ. ೮೦ ಪರ್ಸೆಂಟ್ ನೆರೆ ರಾಜ್ಯಗಳಿಗೆ ಹೋಗುತ್ತಾ ಇದೆ. ಮಹಾರಾಷ್ಟ್ರ, ಗುಜರಾತಿಗೆ ಹೋಗುತ್ತಾ ಇದೆ. ಇದಕ್ಕೆಲ್ಲಾ ಇಲ್ಲೇ ಹತ್ತಿ ಗಿರಣಿಗಳಾಗಬೇಕು. ಈಗಾಗಲೇ ಬಾಗಲಕೋಟೆ, ಬಿಜಾಪುರದಲ್ಲಿರುವುದನ್ನು ಎಕ್ಸ್‌ಪ್ಯಾನ್‌ಷನ್ ಮಾಡಿದ್ದೇವೆ.

ಆಮೇಲೆ ರಾಯಚೂರು ಮತ್ತು ಬೆಳಗಾಂನಲ್ಲಿ ೪ ಕೊ ಆಪರೇಟಿವ್ ಸ್ಪಿನ್ನಿಂಗ್ ಮಿಲ್‌ಗಳಲ್ಲಿ ೧೨ ಸಾವಿರ ಇದ್ದುದನ್ನು ೨೫ ಸಾವಿರಕ್ಕೆ ಹೆಚ್ಚು ಮಾಡಿ ಅದನ್ನು ವೈಯಬಲ್ ಯೂನಿಟ್ ಆಗಿ ಮಾಡುವುದಕ್ಕೆ ಸರ್ಕಾರ ೪ ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಇವತ್ತು ಹುಲುಕೋಟೆ ಸ್ಪಿನ್ನಿಂಗ್ ಮಿಲ್ ಮತ್ತು ಈಗಿರತಕ್ಕ ೮ ಸ್ಪಿನ್ನಿಂಗ್ ಮಿಲ್‌ಗಳಿಗೆ ಶೇರ್ ಬಂಡವಾಳವನ್ನು ಕೂಡಿಸಿ ರಿಜಿಸ್ಟರ್ ಮಾಡಿಸಿ ಇವತ್ತು ಕೇಂದ್ರ ಸರ್ಕಾರದಿಂದ ಕ್ಲಿಯರೆನ್ಸ್ ಪಡೆಯುವುದಕೋಸ್ಕರವಾಗಿ ಕಾತುರರಾಗಿದ್ದೇವೆ. ಇನ್ನು ಸಕ್ಕರೆ ಕಾರ್ಖಾನೆಗಳನ್ನು ೬ನೇ ಯೋಜನೆಯಲ್ಲಿ ೯-೧೦ ಹೆಚ್ಚು ಮಾಡಬೇಕೆಂದು ಈಗಾಗಲೇ ಕೇಂದ್ರ ಸರ್ಕಾರದವರಲ್ಲಿ ಕೇಳಿದ್ದೆವು. ಅದಕ್ಕೆ ಅವರು ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅಥಣಿ ಅಥವಾ ನಿಪ್ಪಾಣಿ ಮತ್ತು ಇನ್ನಿತರ ಕಡೆಗಳಲ್ಲಿ ಶೇರು ಬಂಡವಾಳವನ್ನು ಕಲೆಕ್ಟ್ ಮಾಡಿದ್ದಾರೆ. ಆದರೆ ಇವತ್ತು ಕೋ ಆಪರೇಟಿವ್ ಸ್ಪಿನ್ನಿಂಗ್ ಮಿಲ್‌ಗಳು ಮತ್ತು ಸಕ್ಕರೆ ಕಾರ್ಖಾನೆಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಸಕ್ಕರೆ ಕಾರ್ಖಾನೆಗಳು ಬಹಳ ನಷ್ಟವನ್ನು ಅನುಭವಿಸುತ್ತಿವೆ. ರೈತರಿಗೆ ಹೆಚ್ಚಿನ ರೇಟ್ ಕೊಡಬೇಕು ಎನ್ನತಕ್ಕ ಮಾತನ್ನು ಮಾನ್ಯ ಸದಸ್ಯರುಗಳು ಹೇಳಿದರು. ಮತ್ತೆ ಕೆಲವು ಕಡೆ ರೈತರಿಗೆ ಹೆಚ್ಚಿನ ರೇಟ್‌ನ್ನು ಕೊಟ್ಟಿದ್ದಾರೆ ಎನ್ನತಕ್ಕ ಮಾತನ್ನು ತಿಳಿಸಿದರು. ಆದರೆ ಅದು ಸತ್ಯಕ್ಕೆ ದೂರವಾದ ಮಾತು. ಏತಕ್ಕೆಂದರೆ ಕೆಲವು ಸಕ್ಕರೆ ಕಾರ್ಖಾನೆಗಳು ನಷ್ಟವನ್ನು ಅನುಭವಿಸಿವೆ. ಇನ್ನು ಕೆಲವು ಸಕ್ಕರೆ ಕಾರ್ಖಾನೆಗಳು ಉತ್ತಮವಾದ ಲಾಭವನ್ನು ಮಾಡಿವೆ. ರೈತರಿಗೆ ಹೆಚ್ಚಿನ ರೇಟ್‌ನ್ನು ಕೊಟ್ಟಿದ್ದಾರೆ. ಇವತ್ತು ಪಾಂಡವಪುರ ಸಕ್ಕರೆ ಕಾರ್ಖಾನೆಯವರು ಕಳೆದ ವರ್ಷ ೩೨೫ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಯಾರು ಲಾಭವನ್ನು ಹೇರಳವಾಗಿ ಸಂಪಾದನೆ ಮಾಡಿಕೊಂಡಿದ್ದಾರೆ ಅಂಥವರು ರೈತರಿಗೆ ಕೊಟ್ಟಿದ್ದಾರೆ ರೈತರಿಗೆ ಕೊಡಬಾರದು ಎಂದು ಯಾವ ಸರ್ಕಾರದವರೂ ಕೂಡ ಹೇಳುವುದಿಲ್ಲ. ಇವತ್ತು ಕೇಂದ್ರ ಸರ್ಕಾರ ಒಂದು ಬೆಲೆಯನ್ನು ನಿಗದಿ ಮಾಡಿದ್ದಾರೆ, ಆದರೆ ಅದಕ್ಕಿಂತ ಜಾಸ್ತಿ ಕೊಟ್ಟಿದ್ದುದರಿಂದ ಹೇಮಾವತಿ ಮತ್ತು ಹಾವೇರಿ ಸಕ್ಕರೆ ಕಾರ್ಖಾನೆಗೆ ಕೇಂದ್ರ ಸರ್ಕಾದವರು ಸಾಲವನ್ನು ಮಂಜೂರು ಮಾಡಲಿಲ್ಲ, ಕೇಂದ್ರ ಸರ್ಕಾರದವರ ಆಜ್ಞೆಯನ್ನು ಉಲ್ಲಂಘನೆ ಮಾಡಿದುದರಿಂದ ಮತ್ತು ಕೇಂದ್ರ ಸರ್ಕಾರದವರು ಕೊಟ್ಟಂಥ ಸಾಲವನ್ನು ವಾಪಸ್ಸು ಮಾಡದೇ ಇದ್ದುದಕ್ಕೆ ಪುನಃ ಕೇಂದ್ರ ಸರ್ಕಾರದವರು ಆ ಕಾರ್ಖಾನೆಗಳಿಗೆ ಸಾಲವನ್ನು ಮಂಜೂರು ಮಾಡಲಿಲ್ಲ. ಹೇಮಾವತಿ ಮತ್ತು ಹಾವೇರಿ ಕಾರ್ಖಾನೆಗಳವರಿಗೆ ಕೊಡಬೇಕಾಗಿದ್ದ ಐ.ಡಿ.ಬಿ. ಸಾಲವನ್ನು ಮಂಜೂರು ಮಾಡಲಿಲ್ಲ ಹೇಮಾವತಿ ಸಕ್ಕರೆ ಕಾರ್ಖಾನೆ ನಮ್ಮ ಜಿಲ್ಲೆಯಲ್ಲಿರತಕ್ಕುದು, ನಾನೇ ಹೋಗಿ ಕೇಂದ್ರ ಸರ್ಕಾರದ ವ್ಯವಸಾಯ ಮಂತ್ರಿಗಳವರ ಹತ್ತಿರ ಮಾತುಕತೆ ನಡೆಸಿದಾಗ, ಅವರು ನಮಗೆ ಹೇಳಿದರು, ನಿಮ್ಮ ಸರ್ಕಾರದವರು ಕಬ್ಬಿನ ಬೆಲೆ ನೀತಿಯನ್ನು ಸರಿಯಾಗಿ ಅನುಸರಿಸುತ್ತಾ ಇಲ್ಲ, ಕೇಂದ್ರ ಸರ್ಕಾರದ ಆಜ್ಞೆಯನ್ನು ಪಾಲಿಸುತ್ತಾ ಇಲ್ಲ ಮತ್ತೆ ಐ.ಡಿ ಬಿ. ಯಿಂದ ಪಡೆದಂಥ ಸಾಲವನ್ನು ಮರು ಪಾವತಿ ಮಾಡಿಲ್ಲ, ಸಿಕ್ಕ ಪಟ್ಟೆ ಲುಕ್ಸಾನನ್ನು ನಿಮ್ಮ ಕಾರ್ಖಾನೆಗಳು ಅನುಭವಿಸುತ್ತಿವೆ, ಆದುದರಿಂದ ನಿಮಗೆ ಸಾಲ ಕೊಡುವುದಿಲ್ಲವೆಂದು ಹೇಳಿದರು. ಆದಕ್ಕೆ ನಾನು ಹೇಳುತ್ತಿರುವುದು ಇವತ್ತು ರೈತರಿಗೆ ಹೆಚ್ಚಿನ ಬೆಲೆಯನ್ನು ಕೊಟ್ಟರೆ ಯಾರು ಬೇಡವೆಂದು ಹೇಳುತ್ತಾರೆ, ಕಾರ್ಖಾನೆಗಳವರು ಹೆಚ್ಚಿನ ಲಾಭವನ್ನು ಗಳಿಸಿದರೆ ರೈತರಿಗೆ ಕೊಡಲಿ. ಆದರೆ ಲಕ್ಷಾಂತರ ರೂಪಾಯಿಗಳ ಲುಕ್ಸಾನನ್ನು ಅನುಭವಿಸಿ ಕಬ್ಬಿಗೆ ಹೆಚ್ಚಿಗೆ ಬೆಲೆ ಕೊಡಬೇಕೆಂದು ಕಾರ್ಖಾನೆಗಳವರು ಹೊರಟಿರುವುದರಿಂದಲೇ ಈ ರೀತಿ ಆಗಿದೆ. ಇವತ್ತಿನ ದಿವಸ ಕೇಂದ್ರ ಸರ್ಕಾರದವರು ನಿಗದಿ ಮಾಡಿರುವುದಕ್ಕಿಂತ ಹೆಚ್ಚಾಗಿ ನಮ್ಮ ಸರ್ಕಾರ ಕೊಟ್ಟಿದೆ. ಹೆಚ್ಚಿನ ಲಾಭ ಬಂದರೆ ರೈತರಿಗೆ ಹೆಚ್ಚಿನ ಬೆಲೆಯನ್ನು ಕೊಡಿ ಎನ್ನತಕ್ಕ ಮಾತನ್ನು ಕೂಡ ಸರ್ಕಾರ ಹೇಳಿದೆ, ಆದರೆ ಯಾವ ಕಾರ್ಖಾನೆ ಲಾಭ ಮಾಡಿದೆ ಹೇಳಿ ? ಇವತ್ತು ೨೭೫ ರೂಪಾಯಿಗಳು ಕೊಡಬೇಕೆಂದು ಹೇಳುತ್ತಿರಿ, ಆ ರೀತಿ ಕೊಟ್ಟರೆ ಲಕ್ಷಾಂತರ ರೂಪಾಯಿಗಳ ನಷ್ಟವಾಗುತ್ತದೆ. ಲಾಭ ಮಾಡಿರತಕ್ಕ ಸಕ್ಕರೆ ಕಾರ್ಖಾನೆಗಳು ಕೊಟ್ಟರೆ ಕೊಡಲಿ, ಆ ರೀತಿ ಕೊಡಬಾರದು ಎನ್ನತಕ್ಕ ಆಸೆ ನಮ್ಮ ಸರ್ಕಾರಕ್ಕೆ ಏನೂ ಇಲ್ಲ. ಆದರೆ ಆ ರೀತಿಯಾಗಿ ಕೊಟ್ಟರೆ ಹೆಚ್ಚಿನ ರೀತಿಯಲ್ಲಿ ನಷ್ಟವನ್ನು ಅನುಭವಿಸಬೇಕಾಗುತ್ತದೆ ಅದು ಆಗಬಾರದು ಎನ್ನತಕ್ಕದ್ದೇ ನಮ್ಮ ಸರ್ಕಾರದ ಆಸೆಯಾಗಿದೆ. ಇವತ್ತು ಮಹದೇಶ್ವರ ಸಕ್ಕರೆ ಕಾರ್ಖಾನೆ ಒಟ್ಟು ಎಷ್ಟು ನಷ್ಟವನ್ನು ಅನುಭವಿಸುತ್ತಿದೆ ಎಂದರೆ, ೪ ಕೋಟಿ ರೂಪಾಯಿಗಳಷ್ಟು, ನಷ್ಟವನ್ನು ಅನುಭವಿಸುತ್ತಿದೆ. ಡಾ. ತಿಮ್ಮೇಗೌಡರವರಿಗೆ ಅದು ಗೊತ್ತಿದೆ. ಅದೇ ರೀತಿಯಾಗಿ ಇವತ್ತು ಕೆ.ಆರ್. ನಗರದ ಸಕ್ಕರೆ ಕಾರ್ಖಾನೆ ಕೂಡ ಸುಮಾರು ೨½, ೩ ಕೋಟಿ ರೂಪಾಯಿಗಳಷ್ಟು ನಷ್ಟವನ್ನು ಅನುಭವಿಸಿದೆ. ಹೀಗೆ ನಷ್ಟವನ್ನು ಅನುಭವಿಸುತ್ತಿರುವಾಗ ಹೆಚ್ಚಿನ ಬೆಲೆಯನ್ನು ಕೊಟ್ಟರೆ ಆ ಸಕ್ಕರೆ ಕಾರ್ಖಾನೆಗಳನ್ನು ಹೇಗೆ ನಡೆಸಬೇಕು?

ಶ್ರೀ. ಎಚ್. ಎಲ್. ತಿಮ್ಮೇಗೌಡ.—ಎಲ್ಲರೂ ಕೊಡಲಿ ಎಂದು ಹೇಳುತ್ತಿಲ್ಲ, ಯಾರು ಲಾಭ ಮಾಡಿದ್ದಾರೆ ಅಂಥವರು ಕೊಡಲಿ...

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಲಾಭ ಮಾಡಿರತಕ್ಕವರು ಕೊಡಬಾರದೆಂದು ಏನೂ ಸರ್ಕಾರ ಹೇಳುತ್ತಿಲ್ಲವಲ್ಲಾ. ಲಾಭ ಮಾಡಿರುವವರು ಹೆಚ್ಚಿಗೆ ಬೆಲೆಯನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕು ಎನ್ನುವುದೇ ಸರ್ಕಾರದ ಉದ್ದೇಶವಾಗಿದೆ, ಅದನ್ನೇ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಲುಕ್ಸಾನು ಆಗುತ್ತಿರತಕ್ಕಂಥ ಸಕ್ಕರೆ ಕಾರ್ಖಾನೆಗಳವರೂ ಕೊಡಿ ಎಂದು ಕೆಲವು ಮಾನ್ಯ ಸದಸ್ಯರುಗಳು ಹೇಳಿದರು. ಮಾನ್ಯ ಪಂಪಾಪತಿಯವರು ಬಹಳ ಬಿರುಸಾಗಿಯೇ ೨೭೫ ರೂ.ಗಳ ಹಾಗೆ ಕೊಡಲು ಕಂಟ್ರಾಕ್ಟ್ ಮಾಡಿಕೊಂಡಿದ್ದರು ಎಂದು ಹೇಳಿದರು. ೨೭೫ ರೂ.ಗಳ ಹಾಗೆ ಕೊಟ್ಟರೆ ಆ ಸಕ್ಕರೆ ಕಾರ್ಖಾನೆಯನ್ನು ಹರಾಜು ಹಾಕಬೇಕಾಗಿ ಬರುತ್ತದೆ, ಅಲ್ಲಿರತಕ್ಕ ಮಿಷನ್‌ಗಳನ್ನೆಲ್ಲಾ ಕಿತ್ತು ಹಾಕಬೇಕಾಗಿ ಬರುತ್ತದೆ ಅಷ್ಟೆ...

ಶ್ರೀ ಎಂ. ಪಂಪಾಪತಿ.—ಆ ರೀತಿ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ ಸ್ವಾಮಿ.

ಶ್ರೀ ಎಚ್, ಸಿ. ಶ್ರೀಕಂಠಯ್ಯ.—ನೀವು ಅವರು ಆ ರೀತಿಯಾಗಿ ಅಗ್ರಿಮೆಂಟ್ ಮಾಡಿಕೊಂಡಿರಬಹುದು.

ಶ್ರೀ ಎಂ. ಪಂಪಾಪತಿ.—ನಾವು ಅವರೇನೂ ಮಾಡಿಕೊಂಡಿಲ್ಲ. ಅದರಲ್ಲಿ ನಿಮ್ಮ ಅಧಿಕಾರಿಗಳೂ ಕೂಡ ಇದ್ದಾರಲ್ಲಾ.ಅವರಿಗೇನು ಮಾಡುತ್ತೀರಿ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದಕ್ಕೇ ಸರ್ಕಾರ ಬೇಡವೆಂದು ಹೇಳುತ್ತಿರುವುದು, ೨೮೫ ರೂ.ಗಳ ಹಾಗೆ ಕೊಟ್ಟರೆ ಆ ಸಕ್ಕರೆ ಕಾರ್ಖಾನೆಯ ಪರಿಸ್ಥಿತಿ ಏನು? ಅದು ಮುಂದೆ ತನ್ನ ಕಾರ್ಯ ಚಟುವಟಿಕೆಗಳನ್ನು ಮಾಡುವುದಕ್ಕೆ ಸಾಧ್ಯವೇ?

ಶ್ರೀ ಎಂ. ಪಂಪಾಪತಿ.—ಆ ರೀತಿಯಾಗಿ ಮುಂದಾಲೋಚನೆ ಇಲ್ಲದೇ ಇರತಕ್ಕಂಥ ಅಧಿಕಾರಿಗಳನ್ನೇನು ಮಾಡುತ್ತೀರಿ? ಅಗ್ರಿಮೆಂಟ್ ಮಾಡಿಕೊಂಡಿದ್ದಾರಲ್ಲಾ ಅದಕ್ಕೆ ಬೆಲೆ ಏಸಿದೆ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅಧಿಕಾರಿಗಳೇ ಆ ರೀತಿ ಅಗ್ರಿಮೆಂಟ್ ಮಾಡಿಕೊಂಡಿದ್ದರೆ, ಅಂಥವರ ಮೇಲೆ ಸೂಕ್ತವಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ, ಆದರೆ ಆ ಪ್ರಶ್ನೆ ಇಲ್ಲಿ ಇಲ್ಲ. ತಾವು ಒಂದು ಮಾತನ್ನು ಹೇಳುತ್ತಿದ್ದೀರಿ, ಏನೆಂದರೆ, ಅಷ್ಟು ಕೂಡಲೇ ಬೇಕು, ಇಲ್ಲದಿದ್ದರೆ ಕೋರ್ಟಿಗೆ ಹೋಗುತ್ತೇವೆಂದು, ಆದರೆ ಇವತ್ತು ಅದರ ಪೂರ್ಣ ಚಿತ್ರವನ್ನು ತಾವು ಅರಿತುಕೊಳ್ಳಬೇಕು. ಅವರು ೨೮೫ ರೂಪಾಯಿಗಳ ಹಾಗೆ ಕೊಟ್ಟರೆ ಅದರ ಮುಂದಿನ ಗತಿ ಏನು? ಆ ಸಕ್ಕರೆ ಕಾರ್ಖಾನೆಯ ಪರಿಸ್ಥಿತಿ ಏನಾಗುತ್ತದೆ? ಅದನ್ನು ಯೋಚನೆ ಮಾಡದೇ ಅಲ್ಲಿ ಯಾರನ್ನೋ ಮೆಚ್ಚಿಸುವುದಕ್ಕೋಸ್ಕರವಾಗಿ ಮಾತನಾಡಿದರೆ ಆ ಸಂಸ್ಥೆಯ ಗತಿ ಏನು? ಆ ಸಂಸ್ಥೆಯ ಅಳಿವು ಉಳಿವಿನ ಗತಿ ಏನು? ಇದನ್ನು ಸಹ ತಾವು ಯೋಚನೆ ಮಾಡಬೇಕು. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಡಾ. ತಿಮ್ಮೇಗೌಡರವರು ಲಾಭವನ್ನು ಪಡೆದಿರತಕ್ಕಂಥ ಕಾರ್ಖಾನೆಗಳೂ ಕೂಡ ಕೊಡುತ್ತಿಲ್ಲವೆಂದು ಹೇಳಿದರು, ಅದು ಸೂಕ್ತವಾದ ಸಲಹೆ ಅದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕಾಗಿದೆ, ಆದರೆ ಲುಕ್ಸಾನು ಆಗಿರತಕ್ಕಂಥವುಗಳಿಗೆ ಸರ್ಕಾರ ಏತಕ್ಕೆ ಹೆಚ್ಚಿಗೆ ಬೆಲೆ ಕೊಡುವ ಬಗ್ಗೆ ಅನುಮತಿ ಕೊಡಬೇಕು? ಹಾಗೆ ಕೊಟ್ಟರೆ ಬಹಳ ಕಷ್ಟವಾಗುತ್ತದೆ. ಇದನ್ನು ತಾವು ಯೋಚನೆ ಮಾಡಬೇಕು. ಆದುದರಿಂದ ಇವತ್ತಿನ ದಿವಸ ನಾವು ಈ ನೀತಿಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ಕೇಂದ್ರ ಸರ್ಕಾರದವರು ಪ್ರತಿಯೊಂದನ್ನೂ ನೋಡುತ್ತಿದ್ದಾರೆ. ಇವತ್ತು ಪಕ್ಕದ ಮಹಾರಾಷ್ಟ್ರದಲ್ಲಿ ಏನು ರೇಟ್‌ನ್ನು ಕೊಟ್ಟಿದ್ದಾರೆ? ಅವರು ಮೊದಲು ಕೊಟ್ಟಿರತಕ್ಕದ್ದು ಬಹಳ ಕಡಿಮೆ. ಅವರು ಕಬ್ಬನ್ನೆಲ್ಲಾ ಅರೆದು ಲಾಭವನ್ನು ನೋಡಿಕೊಂಡು ಅನಂತರ ರೈತರಿಗೆ ಹಣವನ್ನು ಕೊಡುತ್ತಾರೆ. ಅದೇ ರೀತಿ ನಾವು ಸಹ ಇಲ್ಲಿ ಮಾಡಬೇಕು ಎನ್ನತಕ್ಕಂಥ ಆಶೆಯನ್ನಿಟ್ಟುಕೊಂಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅನೇಕ ಮಾನ್ಯ ಸದಸ್ಯರುಗಳು ಆಹಾರ ಸಂಗ್ರಹಣೆಯ ಬಗ್ಗೆ ಮಾತನಾಡಿದ್ದಾರೆ. ರೈತ ಬೆಳೆಯತಕ್ಕ ೬೦ ಲಕ್ಷ ಟನ್ ಆಹಾರದಲ್ಲಿ ೩೦ ಲಕ್ಷ ಟನ್‌ಗಳನ್ನಾದರೂ ಶೇಖರಣೆ ಮಾಡತಕ್ಕ ವ್ಯವಸ್ಥೆ ಗೋಡೌನ್‌ಗಳಲ್ಲಿ ಆಗಬೇಕು ಎಂದು ಹೇಳಿದ್ದಾರೆ. ಅದು ಒಳ್ಳೆಯ ಸಲಹೆ, ಸರ್ಕಾರ ನ್ಯಾಷನಲ್ ಗ್ರಿಡ್ ಎಂದು ೧೦೦೦ ಟನ್ ಕೆಪಾಸಿಟಿಯುಳ್ಳಂಥ ೫೦೦ ಗೋಡೌನ್‌ಗಳನ್ನು ಕಟ್ಟತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಅದಕ್ಕೆ ಈಗಾಗಲೇ ಎಲ್ಲ ಹಣಕಾಸಿನ ವ್ಯವಸ್ಥೆಯಾಗಿ ಗೋಡೌನ್‌ಗಳನ್ನು ಸಹ ಸರ್ಕಾರ ಮಂಜೂರ್ಮಾಡಿದೆ. ವೇರ್ ಹೌಸಿಂಗ್ ಕಾರ್ಪೊರೇಷನ್ ಮತ್ತಿತರ ಎ.ಪಿ.ಎಂ.ಸಿ.ಗಳಲ್ಲಿ ೧೦ ಲಕ್ಷ ಟನ್ ಆಹಾರವನ್ನು ಶೇಖರಿಸತಕ್ಕ ವ್ಯವಸ್ಥೆ ಈಗಾಗಲೇ ಇದೆ. ಆದುದರಿಂದ ಅದಕ್ಕೇನು ತೊಂದರೆಯಾಗುವುದಿಲ್ಲ. ಸಾಮಾನ್ಯವಾಗಿ ಎಲ್ಲ ಪ್ರೈಮರಿ ಸೊಸೈಟಿಗಳ ಹಂತದಲ್ಲೂ ದಾಸ್ತಾನು ಮಳಿಗೆಗಳನ್ನು ಮಾಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಮಾನ್ಯ ಗಂಗಾಧರನ್‌ರವರು, ನಂಜನಗೂಡು ಟಿ.ಎ.ಪಿ.ಸಿ.ಎಂ.ಎಸ್.ನಲ್ಲಿ ೬ ಸಾವಿರ ಕ್ವಿಂಟಾಲ್ ಭತ್ತವನ್ನು ಅಪವ್ಯಯ ಮಾಡಿದ್ದಾರೆಂಬ ಮಾತನ್ನು ಹೇಳಿದರು. ಅದನ್ನು ಆ ಸಹಕಾರ ಸಂಘದವರು ಮಾಡಿಲ್ಲ, ಅವರು ಸ್ಟೇಟ್ ಫುಡ್ ಕಾರ್ಪೊರೇಷನ್‌ರವರ ಭತ್ತವನ್ನು ಶೇಖರಣೆ ಮಾಡಿದ್ದರು. ಅದನ್ನು ಬೇರೆ ಖಾಸಗಿ ಮಿಲ್‌ನವರಿಗೆ ಮಿಲ್ ಮಾಡುವುದಕ್ಕೆ ಫುಡ್ ಕಾರ್ಪೊರೇಷನ್‌ನವರು ನಿರ್ದೇಶನ ಕೊಟ್ಟ ಮೇಲೆಯೇ ಕೊಟ್ಟಿದ್ದಾರೆ. ಆದರೆ ಕೊಡಬೇಕಾದರೆ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಟ್ಟಿಲ್ಲ ಎಂಬುದು ದೂರು. ಅವರಿಂದ ಸರಿಯಾದ ಬ್ಯಾಂಕ್ ಗ್ಯಾರಂಟಿ ತೆಗೆದುಕೊಂಡಿಲ್ಲ. ಅಕ್ಕಿಯನ್ನು ನಿಗದಿಯಾದ ದಿವಸದಲ್ಲಿ ಕೊಡಬೇಕೆಂಬ ಷರತ್ತು ಹಾಕಿಲ್ಲ. ಅವರಿಂದ ಅಕ್‌ನಾಲೆಡ್ಜ್‌ಮೆಂಟ್ ಮಾತ್ರ ತೆಗೆದುಕೊಂಡು ಭತ್ತವನ್ನು ಅವರಿಗೆ ವಹಿಸಿದ್ದಾರೆ. ಈಗಾಗಲೇ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ರಿಜಿಸ್ಟ್ರಾರ್‌ರವರು ಸಸ್ಪೆಂಡ್ ಮಾಡಿ ತನಿಖೆ ಮಾಡು

ತ್ತಿದ್ದಾರೆ. ಒಬ್ಬರು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರನ್ನು ಸಹ ಇದಕ್ಕಾಗಿ ನೇಮಿಸಿ ಯಾರು ಭತ್ತವನ್ನು ತೆಗೆದುಕೊಂಡು ಹೋಗಿದ್ದಾರೆ ಅವರ ಮೇಲೂ ಸಹ ಕಾನೂನು ರೀತ್ಯ ಕ್ರಮ ಜರುಗಿಸುವುದಕ್ಕ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಹೆಚ್. ಗಂಗಾಧರನ್.—ಸೊಸೈಟಿ ಏನೂ ತಪ್ಪು ಮಾಡಿಲ್ಲವೆನ್ನುತ್ತೀರಿ. ಆದರೆ ಸೊಸೈಟಿಯ ಅಧಿಕಾರಿಗಳನ್ನು ಏತಕ್ಕೆ ಸಸ್ಪೆಂಡ್ ಮಾಡಿದ್ದೀರಿ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅವರು ಸೂಕ್ತ ಷರತ್ತುಗಳನ್ನು ಹಾಕದೆ ಕೊಟ್ಟರು ಎಂಬ ಕಾರಣಕ್ಕಾಗಿ ಅವರನ್ನು ಸಸ್ಪೆಂಡ್ ಮಾಡಲಾಗಿದೆ. ಬೇರೆಯವರಿಗೆ ಭತ್ತ ಕೊಡಬೇಕಾದರೆ ಕಾನೂನು ಪ್ರಕಾರ ಏನೇನು ಷರತ್ತುಗಳನ್ನು ಹಾಕಿಕೊಡಬೇಕೋ ಅದರಲ್ಲಿ ಕೆಲವು ಷರತ್ತುಗಳನ್ನು ಬಿಟ್ಟು ಮಾಡಿದ್ದಾರೆ. ಫುಡ್ ಕಾರ್ಪೊರೇಷನ್‌ನವರು ಭತ್ತವನ್ನು ಇಂಥ ಮಿಲ್ಲಿಗೆ ಕೊಡಬೇಕೆಂದು ನಿರ್ದೇಶನ ಕೊಟ್ಟ ಮೇಲೆಯೇ ಕೊಟ್ಟಿದ್ದಾರೆ. ಆದರೆ ಕೊಡಬೇಕಾದರೆ ಇಷ್ಟು ದಿವಸದಲ್ಲಿ ಅಕ್ಕಿಯನ್ನು ಮಾಡಿಕೊಡಬೇಕೆಂದು ನಿಗದಿ ಮಾಡಿಲ್ಲ, ಬ್ಯಾಂಕ್ ಗ್ಯಾರಂಟಿ ತೆಗೆದುಕೊಂಡಿಲ್ಲ. ಹಾಗೆಯೇ ಹ್ಯಾಂಡ್ ಓವರ್ ಮಾಡಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದೆ. ಈ ಬಗ್ಗೆ ಸೂಕ್ತ ತನಿಖೆ ನಡೆಯುತ್ತಿದೆ. ಭತ್ತವನ್ನು ತೆಗೆದುಕೊಂಡು ಹೋಗಿರುವವರ ಮೇಲೂ ಕೇಸ್ ದಾಖಲು ಮಾಡಿ ಕ್ರಮ ಕೈಗೊಳ್ಳುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸಹಕಾರ ಸಂಘಗಳ ಆಡಿಟ್ ಬಗ್ಗೆ ದೇವೇಗೌಡರು ಮತ್ತಿತರರು ಮಾತನಾಡುತ್ತಾ ಆಡಿಟ್ ಸರಿಯಾಗಿ ಆಗುತ್ತಿಲ್ಲವೆಂದರು. ಪ್ರತಿಯೊಂದು ಸಹಕಾರ ಸಂಘಗಳ ಆಡಿಟ್ ಆದ ಮೇಲೆ ಅವುಗಳ ಜನರಲ್ ಬಾಡಿ ಮೀಟಿಂಗನ್ನು ಮಾಡಿ, ಅದರಲ್ಲಿ ಆಗಿರತಕ್ಕ ಅವ್ಯವಹಾರಗಳನ್ನು ಆ ಸಭೆಯ ಗಮನಕ್ಕೆ ತಂದರೆ ಅದರಿಂದ ಉತ್ತಮವಾದ ವ್ಯವಸ್ಥೆ ಮಾಡಬಹುದೆಂದರು. ಅದು ನಿಜವಾಗಿ ಒಪ್ಪತಕ್ಕ ಮಾತು. ಪ್ರತಿ ವರ್ಷಕ್ಕಿಂತ ಈ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ಸೊಸೈಟಿಗಳನ್ನು ಆಡಿಟ್ ಮಾಡಿದ್ದೇವೆ. ಈಗಾಗಲೇ ೧೨ ಸಾವಿರ ಚಿಲ್ಲರೆ ಸೊಸೈಟಿಗಳ ಆಡಿಟ್ ಆಗಿದೆ ಪ್ರತಿಯೊಂದು ಸಹಕಾರ ಸಂಘಗಳ ಆಡಿಟ್ ಆದ ಮೇಲೆ ಜನರಲ್ ಬಾಡಿ ಮೀಟಿಂಗನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗ ಆಡಿಟ್ ವಿಂಗ್ ಪ್ರತ್ಯೇಕವಾಗಿರುವುದರಿಂದ ಅದು ಪ್ರತಿಯೊಂದು ಸಹಕಾರ ಸಂಘಗಳನ್ನು ಚಾಚೂ ತಪ್ಪದೆ ಆಡಿಟ್ ಮಾಡತಕ್ಕ ವ್ಯವಸ್ಥೆಯನ್ನು ಮಾಡುತ್ತಿದೆ.

ಶ್ರೀ ಕೆ. ರಾಮಭಟ್.—ಅಲ್ಲಿ ಸಿಬ್ಬಂದಿ ಕೊರತೆ ಇದೆ ಎಂದು ತಿಳಿದು ಬಂದಿದೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ನಮ್ಮ ಇಲಾಖೆಗೆ ೪೦೦ ಮಂದಿ ಆಡಿಟರ್ಸ್ ಬೇಕಾಗಿದ್ದಾರೆ. ಅದಕ್ಕೆ ಸರ್ಕಾರ, ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರ ಅಧ್ಯಕ್ಷತೆಯಲ್ಲಿ ನೇಮಕಾತಿ ಸಮಿತಿಯನ್ನು ಮಾಡಿ ಆದಷ್ಟು ಜಾಗ್ರತೆ ಅರ್ಜಿಗಳನ್ನು ಕರೆದು ನೇಮಕಾತಿಗಳನ್ನು (ಆಡಿಟರ್ಸ್) ಮಾಡಿ ಆ ಕಾರ್ಯ ತ್ವರಿತವಾಗಿ ನಡೆಯುವಂಥ ವ್ಯವಸ್ಥೆ ಮಾಡುತ್ತೇವೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು)

ಶ್ರೀ ಎಸ್. ಆರ್. ಬೊಮ್ಮಾಯಿ.—ಕಂಪನಿ ಆಕ್ಟ್ ಪ್ರಕಾರ ಯಾವ ರೀತಿ ಅಲ್ಲಿ ಪ್ರತಿ ವರ್ಷ ಬ್ಯಾಲೆನ್ಸ್ ಷೀಟನ್ನು ಮತ್ತು ಆಡಿಟ್ ರಿಪೋರ್ಟನ್ನು ಸರ್ವಸಾಧಾರಣವಾದ ವಾರ್ಷಿಕ ಸಭೆಯಲ್ಲಿ ಒಪ್ಪತಕ್ಕ ನಿಯಮ ಇದೆಯೋ, ಅದೇ ರೀತಿ ಇಲ್ಲಿಯೂ ಮಾಡಿದರೆ ಒಳ್ಳೆಯದೆಂದು ನಾವು ಬಹಳ ಸಾರಿ ಹೇಳಿದ್ದೇವೆ. ಪ್ರತಿ ವರ್ಷವೂ ನಾವು ಈ ಸಲಹೆಯನ್ನು ಕೊಡುತ್ತಲೇ ಬಂದಿದ್ದೇವೆ. ಪ್ರತಿ ವರ್ಷ ಆಡಿಟ್ ಮಾಡಿ ಅದರ ವರದಿಯನ್ನು ಸರ್ವಸದಸ್ಯರ ಮಹಾಸಭೆಯಲ್ಲಿ ಇಡುವಂತೆ ಕಾನೂನು ಮಾಡಿದರೆ ಕಡ್ಡಾಯವಾಗಿ ಆಡಿಟ್‌ನ್ನು ಮಾಡಿಯೇ ಮಾಡುತ್ತಾರೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಕಂಪನಿ ಆಡಿಟ್ ಮತ್ತು ಸಹಕಾರ ಸಂಘಗಳ ಆಡಿಟ್ ಒಂದೇ ರೀತಿ ಆಗುತ್ತದೆಯೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಕಂಪನಿಯ ಆಡಿಟ್ಟೇ ಬೇರೆ ಮತ್ತು ಸಹಕಾರ ಸಂಘಗಳ ಆಡಿಟ್ಟೇ ಬೇರೆ ಪ್ರತಿ ವರ್ಷ ಆಡಿಟ್ ಆಗಬೇಕೆಂಬುದನ್ನು ಒಪ್ಪುತ್ತೇನೆ ಪ್ರತಿ ವರ್ಷ ಜನರಲ್ ಬಾಡಿ ಮೀಟಿಂಗ್ ಆಗಬೇಕಾದರೆ ಆಡಿಟ್ ರಿಪೋರ್ಟ್ ರೆಡಿಯಾಗಿರಬೇಕು. ಅದಕ್ಕೆ ಬೇಕಾದ ವ್ಯವಸ್ಥೆ ಮಾಡಿಸೋಣ. ಇಲಾಖೆಯನ್ನು ವಿಸ್ತೀರ್ಣ ಮಾಡಿಯೂ ಆಡಿಟ್ ಆಗದೆ ಹೋದರೆ ಲೆಕ್ಕಾಚಾರ ಅರ್ಥವಾಗುವುದಿಲ್ಲ. ಜನರಲ್ ಬಾಡಿ ಮೀಟಿಂಗ್‌ನಲ್ಲಿ ಪ್ರತಿಯೊಬ್ಬರಿಗೆ ಸಂಘದ ವ್ಯವಹಾರ ತಿಳಿಯಬೇಕೆಂಬುದನ್ನು ನಾನು ಒಪ್ಪುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ನಾನೂ ಕೂಡ ಹೋಲ್‌ಸೇಲ್ ಸ್ಟೋರ್ಸ್‌ನ ಅಧ್ಯಕ್ಷನಾಗಿದ್ದೆ. ನಾನು ನಿವೃತ್ತನಾದ ೬ ವರ್ಷದ ಮೇಲೆ ಆಡಿಟ್ ವರದಿ ಬಂದಿದೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಶ್ರೀ ನಾಣಯ್ಯನವರು ಕ್ರಾಪ್ ಇನ್‌ಶ್ಯೂರೆನ್ಸ್ ಸ್ಕೀಂ ಮಾಡಬೇಕೆಂದು ಹೇಳಿದ್ದಾರೆ. ಕಳೆದ ವರ್ಷ ಬಹಳ ಅಲ್ಪ ಹಣವನ್ನು ಅಂದರೆ ೫ ಲಕ್ಷ ರೂಪಾಯಿಗಳನ್ನು ಈ ಯೋಜನೆಗಾಗಿ ಸರ್ಕಾರ ನಿಗದಿ ಮಾಡಿದ್ದು ಅದೂ ಸಹ ಖರ್ಚಾಗಲಿಲ್ಲ. ಈ ಸಾರಿ ಸಂಬಂಧಪಟ್ಟ ಅಧಿಕಾರಿಗಳೊಡನೆ ಮುಂಬೈಗೆ ಹೋಗಿ ಜನರಲ್ ಇನ್‌ಶ್ಯೂರೆನ್ಸ್ ಕಂಪನಿಯವರೊಡನೆ ಮಾತನಾಡಿ ಒಂದು ಕೋಟಿ ರೂಪಾಯಿಗಳನ್ನು ನಿಗದಿ ಮಾಡಿಸಿದ್ದೇವೆ. ಇದೇ ತಿಂಗಳ ೨೮ರಂದು ನನ್ನ ಛೇಂಬರ್‌ನಲ್ಲಿ ಇನ್‌ಶ್ಯೂರೆನ್ಸ್ ಕಂಪನಿಯವರ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಸಭೆ ಏರ್ಪಾಡಾಗಿದೆ. ಭತ್ತ, ರಾಗಿ, ಜೋಳ, ನೆಲಗಡಲೆ, ಕಬ್ಬು—ಹೀಗೆ ಎಲ್ಲ ಬೆಳೆಗಳ ಮೇಲೂ ಸಹ ಈ ವರ್ಷ ಎಲ್ಲ ಕಡೆ ಇನ್‌ಶ್ಯೂರೆನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕಳೆದ ಸಾರಿ ಇರಿಗೇಟೆಡ್ ಬೆಳೆಗಳಿಗೆ ಮಾತ್ರ ಮಾಡಿದ್ದೆವು. ಮಳೆಯನ್ನಾಶ್ರಯಿಸಿ ಬೆಳೆಯುತಕ್ಕ ಬೆಳೆಗಳಿಗೂ ಮಾಡಬೇಕಾಗುತ್ತದೆ. ನೀರಾವರಿ ಜಾಗದಲ್ಲಾದರೆ ಬೆಳೆ ಬಂದೇ ಬರುತ್ತದೆ. ಆದರೆ ಮಳೆಯನ್ನಾಶ್ರಯಿಸಿ ಬೆಳೆಯುತಕ್ಕ ಬೆಳೆಗಳು ಒಂದು ವೇಳೆ ಅತಿವೃಷ್ಟಿ ಅಥವಾ ಅನಾವೃಷ್ಟಿಯಾದರೆ ಹೋಗುತವೆ. ಆದರೆ ಬೇರೆ ಕಡೆ ಬಿರುಗಾಳಿ ಅಥವಾ ಪ್ರವಾಹ ಬಂದು ಹೋಗಬೇಕೇ ಹೊರತು ನೀರಿನ ಅಭಾವದಿಂದೇನು ಬೆಳೆಗಳು ಹೋಗುವುದಕ್ಕೆ ಸಾಧ್ಯವಿಲ್ಲ. ಸಾಮಾನ್ಯವಾಗಿ ಡ್ರೈ ಏರಿಯಾದಲ್ಲೇ ಬೆಳೆಗಳು ನಾಶವಾಗುವುದು ಜಾಸ್ತಿ. ಸಕಾಲಕ್ಕೆ ಸರಿಯಾಗಿ ಮಳೆ ಬಾರದೆ ಬೆಳೆಗಳು ಹಾಳಾಗುತ್ತವೆ. ಅಲ್ಲಿ ಇನ್‌ಶ್ಯೂರೆನ್ಸ್ ಮಾಡತಕ್ಕದ್ದು ಬಹಳ ಮುಖ್ಯ. ಅದನ್ನು ಈ ಸಾರಿ ಜಯಪ್ರದವಾಗಿ ಮಾಡುವುದಕ್ಕೆ ಏನೇನು ಪ್ರಯತ್ನಗಳನ್ನು ಮಾಡಬೇಕೋ ಅವನ್ನು ಮಾಡುತ್ತೇನೆ.

೧-೩೦ ಪಿ. ಎಂ.

ಶ್ರೀ ಎಂ. ಸಿ. ನಾಣಯ್ಯ (ಮಡಿಕೇರಿ).—ತಾವು ಈ ಬಗ್ಗೆ ನೇಮಕ ಮಾಡಿರತಕ್ಕ ಸಮಿತಿಯಲ್ಲಿ ಪೂರ್ತಿ ಅಧಿಕಾರಿಗಳು ಏಕೆ ಸ್ವಾಮಿ? ಇದರ ಬಗ್ಗೆ ಬೆಳಕು ಚೆಲ್ಲುತ್ತಿರುವ ಖಾಸಗಿ ವ್ಯಕ್ತಿಗಳು, ಉತ್ತಮವಾಗಿ ಬೆಳೆಯುತ್ತಿರತಕ್ಕ ರೈತರನ್ನು ಇದರಲ್ಲಿ ತೆಗೆದುಕೊಂಡು ಮಾಡಿದರೆ ಏನಾಗುತ್ತದೆ? ಈ ಬಗ್ಗೆ ಅಖಿಲ ಭಾರತ ಅಪೆಕ್ಸ್ ಬ್ಯಾಂಕ್ ಅಸೋಶಿಯೇಷನ್‌ನಲ್ಲಿ ಈ ಬಗ್ಗೆ ಚರ್ಚೆ ನಡೆದಿದೆ. ಇವುಗಳಿಗೆ ಕೆಲವು ಶಾಸಕರನ್ನು ತೆಗೆದುಕೊಂಡು ವಿಸ್ತಾರ ಮಾಡಿ ಎಂದು ನಾನು ಕೇಳುತ್ತಿದ್ದೇನೆ. ಇದರಿಂದ ಅವರೂ ಕೂಡ ಹೆಚ್ಚಿನ ಬೆಳಕನ್ನು ಚೆಲ್ಲುವುದಕ್ಕೆ ಸಾಧ್ಯವಿದೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದನ್ನು ಪರಿಶೀಲನೆ ಮಾಡಿಸುತ್ತೇನೆ. ಇನ್ನು ಮಾನ್ಯ ಗಂಗಾಧರನ್ ಅವರು ಡೈವರ್ಸಿಫಿಕೇಷನ್ ಆಫ್ ಲೋನಿಂಗ್ ಆಪರೇಷನ್ ಬಗ್ಗೆ ಹೇಳಿದರು. ಡೈವರ್ಸಿಫಿಕೇಷನ್ ಎಂದರೆ, ನಾವೇನೂ ಟಾಟಾ, ಬಿರ್ಲಾಗಳಿಗೆ ಸಾಲವನ್ನು ಕೊಡುತ್ತಿಲ್ಲ. ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡತಕ್ಕವರಿಗೆ, ನೇಯ್ಗೆ ಮಾಡತಕ್ಕವರಿಗೆ ಕೊಡುವುದರಿಂದ ಡೆಪಾಸಿಟ್ ಮಾಬಿಲೈಜ್ ಆಗುವುದಕ್ಕೆ ಬಹಳ ಸಹಾಯಕವಾಗುತ್ತದೆ. ಇದಕ್ಕೆ ತಾವು ಶಹಬಾಸ್‌ಗಿರಿ ಕೊಡಬೇಕು. ಟೀಕೆ ಮಾಡುವುದಲ್ಲ, ಇದು ನಿಜವಾಗಿಯೂ ಒಳ್ಳೆಯ ಕೆಲಸ.

ಶ್ರೀ ಎಚ್. ಗಂಗಾಧರನ್.—ಅಗ್ರಿಕಲ್ಚರ್ ಬೇಸ್ಡ್ ಇಂಡಸ್ಟ್ರೀಸ್ ಅಭಿವೃದ್ಧಿಗೆ ನೀವು ಸೊಸೈಟಿ ಮಾಡಿ ಅವಕ್ಕೆ ಸಾಲ ಕೊಡಬೇಕೆಂದೂ, ವ್ಯವಸಾಯಗಾರರಿಗೆ ಸಹಾಯ ಆಗುವಂತೆ ಸಾಲ ಕೊಡಿ ಎಂದು ಹೇಳಿದೆ ಅಷ್ಟೇ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ವ್ಯವಸಾಯಗಾರರಿಗೆ ಸಹಾಯವಾಗುವಂತಹ ಸಾಲವನ್ನು ನಾವು ಕೊಡುತ್ತಿದ್ದೇವೆ. ಅಗ್ರಿಕಲ್ಚರ್ ಬೇಸ್ಡ್ ಇಂಡಸ್ಟ್ರೀಸ್‌ಗೂ ನಾವು ಸಹಾಯ ಮಾಡುತ್ತಿದ್ದೇವೆ. ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಸಹಾಯ ಮಾಡಬೇಕೆಂದು ಈ ಸಹಕಾರ ಬ್ಯಾಂಕುಗಳು, ಜಮೀನು ಮೇಲೆ ಸಾಲ, ಬೆಳೆ ಮೇಲೆ ಸಾಲವನ್ನು ಕೊಟ್ಟು ಉತ್ತಮವಾದ ಕಾರ್ಯವನ್ನು ಮಾಡುತ್ತಿವೆ ಸಣ್ಣ ಪುಟ್ಟ ಕೈಗಾರಿಕೆ ಮಾಡುವವರಿಗೆ ಹೆಚ್ಚು ಸಹಾಯ ವಾಗುತ್ತಿದೆ. ಹಾಗೂ ಮಾನ್ಯ ಗಂಗಾಧರನ್ ಅವರು ಶ್ವೇತ ಪತ್ರವನ್ನೂ ಹೊರಡಿಸಿ ಎಂದು ಹೇಳಿದರು. ಇದು ಸಾಧ್ಯವೇ ಎನ್ನುವುದನ್ನು ಮಾನ್ಯ ಸದಸ್ಯರು ನಿಧಾನವಾಗಿ ಕುರಿತು ಯೋಚನೆ ಮಾಡಬೇಕು. ಒಂದು ಶ್ವೇತಪತ್ರವನ್ನು ಹೊರಡಿಸಿ ಈ ಸಹಕಾರ ಸಂಘಗಳಲ್ಲಿ

ಹಣವನ್ನು ದುರುಪಯೋಗ ಮಾಡಿರವವರ ಬಗ್ಗೆ ಸಹಕಾರ ಸಂಘಗಳಲ್ಲಿ ನಡೆಯುತ್ತಿರತಕ್ಕ ಅವ್ಯವಹಾರ ಗಳ ಬಗ್ಗೆ ತಿಳಿಸಬೇಕೆಂದು ಹೇಳಿದರು. ಶ್ವೇತಪತ್ರಕ್ಕೆ ಯಾವ ಸ್ಟೇಜ್ ಬಂತು ಎಂದರೆ, ಇದು ಎಷ್ಟರ ಮಟ್ಟಿಗೆ ಸಾದುವಾದುದು ಎನ್ನುವುದನ್ನು ನಿಧಾನವಾಗಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ವಿಳಂಬ ಮಾಡದೇ ದುರ್ವ್ಯವಹಾರ ನಡೆಸಿದವರ ಮೇಲೆ ವಿಚಾರಣೆ ನಡೆಸಿ ತಕ್ಕ ಶಿಕ್ಷೆ ಮಾಡುವುದಕ್ಕೆ ಪ್ರಯತ್ನ ಮಾಡಿ, ಆ ಬಗ್ಗೆ ಕಾನೂನು ಬಲಪಡಿಸಿ ಎಂದು ತಾವು ತಿಳಿಸಬೇಕೆನ್ನುವುದೇ ನನ್ನ ಆಸೆ. ಶ್ವೇತಪತ್ರವನ್ನು ಏನು ಬಿಡುಗಡೆ ಮಾಡುವುದು ?

ಶ್ರೀ ಎಚ್. ಗಂಗಾಧರನ್.—ನಾವು ಹೇಳುತ್ತಲೇ ಇರುತ್ತೇವೆ. ನೀವು ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆಂದು ಹೇಳುತ್ತಲೇ ಇರುತ್ತೀರಿ. ಆದರೆ ಅವು ಹಾಗೇ ನಿಂತಿರುತ್ತವೆ. ಕಳೆದ ೨೫ ವರ್ಷ ಗಳಲ್ಲಿ ಏನೇನಾಗಿದೆ, ಇದಕ್ಕೆ ಕಾರಣಕರ್ತರು ಯಾರು, ಯಾವ ಯಾವ ಪಕ್ಷದವರು ಇದರಲ್ಲಿ ಇದ್ದಾರೆ, ಎಷ್ಟೆಷ್ಟು ಹಣ ದುರ್ವಿನಿಯೋಗವಾಗಿದೆ ಎಂದು ಅದರಲ್ಲಿ ತಿಳಿಸಿ ತಾವು ಹೇಳಿದಿರಿ, ೧ ಕೋಟಿ ರೂ ಪಾಯಿ ಉಳಿಸಿದೆ ಎಂದು. ಆದರೆ ಅಕೌಂಟೆಂಟ್ ಜನರಲ್ ವರದಿಯಲ್ಲಿ ಬಂತು, ಶ್ರೀಮಾನ್ ದೇವೇ ಗೌಡರ ಅಧ್ಯಕ್ಷತೆಯಲ್ಲಿ ಆದಂತಹ......

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದನ್ನೇ ನಾನು ಹೇಳಿದ್ದು.

ಶ್ರೀ ಎಚ್. ಗಂಗಾಧರನ್.—ನಾವು ಹೊಸಬರಿದ್ದೇವೆ. ನಿಮ್ಮಲ್ಲಿರುವ ಸತ್ಯವನ್ನು, ನಿಮ್ಮ ಹೃದಯದಲ್ಲಿ ಇರುವುದನ್ನು ನಾವು ಹೇಗೆ ನೋಡುವುದು ? ಆದ್ದರಿಂದಲೇ ಶ್ವೇತಪತ್ರವನ್ನು ಹೊರತನ್ನಿ ಎಂದಿದ್ದು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ತಾವೇನೂ ಹೊಸಬರಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಬ್ಬರು ಮುಖ್ಯಮಂತ್ರಿಗಳಾದರು. ಅವರೇನೂ ಈ ಬಗ್ಗೆ ಶ್ವೇತಪತ್ರ ಹೊರತರಲಿಲ್ಲ. ನೀವು ಮುಖ್ಯಮಂತ್ರಿ ಗಳಾದಾಗ ಅದನ್ನು ತರುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆಗ ನೀವು ಕೇಳುವುದೇ ಇಲ್ಲ.

ಶ್ರೀ ಎಚ್. ಗಂಗಾಧರನ್.—ನಾನು ಈ ಮಂತ್ರಿಗಳದ್ದಷ್ಟೇ ಅಲ್ಲ ಕೇಳಿದ್ದು. ಮುಖ್ಯ ಮಂತ್ರಿ ಗಳ ಮೇಲೂ ಆಪಾದನೆ ಇದೆ. ಏಕೆ ಆಪಾದನೆಗಳನ್ನು ಮುಚ್ಚಿಡಬೇಕು ? ಸತ್ಯಾಂಶ ಹೊರಗೆ ಬರಲಿ ಎಂದು, ಎಲ್ಲಾ ಲಿಖಿತವಾಗಿ ಹೊರಬರಲಿ ಎಂದು,...

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಹೊರಗೆ ಬರಬೇಕೆನ್ನುವುದೇ ನಮ್ಮ ಆಸೆ, ಇದೇ ಆಪಾದನೆ ಯನ್ನು ಗ್ರೋವರ್ ಕಮೀಷನ್‌ಗೆ ಕೊಟ್ರು. ಆಪಾದನೆ ನಿರಾಧಾರವಾದುದೆಂದು ತಿಳಿದು ಬಂತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಗ್ರೋವರ್ ಕಮೀಷನ್ ಮುಂದೆ ಚಾರ್ಜ್ ಮಾಡಿದ್ದು ಟೆಕ್ನಿ ಕಲ್ಲಾಗಿ, ಮಂತ್ರಿಗಳು ಇರಲಿಲ್ಲ. ಕಮೀಷನ್ ಆಫ್ ಎನ್‌ಕ್ವಯರಿ ಎಂದರೆ, ವಿಚಾರ ಮಾಡುವುದಕ್ಕೆ ಬರುವುದಿಲ್ಲ. ಆದುದರಿಂದ ಥೇರ್ಮನ್ ಇದ್ರು ಎಂದು ಹೇಳಿದ್ದಾರೆ. ಅದು ಟೆಕ್ನಿಕಲ್ ಇದೆ. ಆದರೆ ಸಿ. ಬಿ. ಐ. ಎನ್‌ಕ್ವಯರಿ ಏನಾಗಿದೆಯೋ ನನಗೆ ಗೊತ್ತಿಲ್ಲ.

ಶ್ರೀ ಎಚ್ ಸಿ. ಶ್ರೀಕಂಠಯ್ಯ.—ಆಪಾದನೆಗಳೇ ನಿರಾಧಾರವಾದವು ಎಂದು ಬರೆದರು. ಇನ್ನೇ ನಾಗಬೇಕು ? ಟೆಕ್ನಿಕಲ್, ನಾನ್‌ಟೆಕ್ನಿಕಲ್ ಎನ್ನುವುದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಂ. ಸಿ. ನಾಣಯ್ಯ.—ಈ ಒಂದು ಗ್ರೋವರ್‌ಕಮೀಷನ್‌ನ ನೇಮಕ ಆದಮೇಲೆ, ನಾನರಿ ಫೆಡರೇಷನ್‌ನ ಅಧ್ಯಕ್ಷ ಆದಮೇಲೆ ಈ ಪ್ರಶ್ನೆ ಬಂದಾಗ ಈ ಗ್ರೋವರ್ ಕಮೀಷನ್ ರಿಪೋರ್ಟ್ ನಮ್ಮ ಹತ್ತಿರ ಬಂತು. ಅದರಲ್ಲಿ ಮಾನ್ಯ ಬೊಮ್ಮಾಯಿಯವರು ಹೇಳಿರುವಂತೆ ಟೆಕ್ನಿಕಲ್ ಪ್ರಶ್ನೆ ಅಲ್ಲ. ಆದರೆ ಅದರಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ. 'In respect of these charges no nepotlsm is involved.'' This is what the Grover Commission has said. This report, I have. To set the record ftraight I have to put this, because I happen to be the president at the moment.

SRI S. R. BOMMAI.—I was a complainant before the Grover Commission. I have attended the case. To set the record straight,

I have the report. Tomorrow I will produce it. ಇದಾದಮೇಲೆ ಸಿ. ಬಿ. ಐ. ಎನ್‌ಕ್ವಯರಿ ಏತಕ್ಕೆ ಮಾಡಬೇಕಾಗಿತ್ತು ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದನ್ನು ಮೊದಲೇ ಕೊಟ್ಟಿತ್ತಲ್ಲಾ ? ಎಲ್ಲಾ ಹೊರಗಡೆ ಬರಲಿ, ಕೇಳಿ ವರದಿಯನ್ನು.

ಇನ್ನು ಮಾನ್ಯ ಗಂಗಾಧರನ್ ಅವರು ಶ್ವೇತಪತ್ರದ ಬಗ್ಗೆ ಒತ್ತಾಯವನ್ನು ಮಾಡುವುದು ಬೇಕಾಗಿಲ್ಲ. ಯಾರು ಅವ್ಯವಹಾರ ಮಾಡಿದರೂ ಅವರುಹೊರಗಡೆ ಬರಲೇಬೇಕಾಗುತ್ತದೆ. ಸ್ವಲ್ಪ ದಿನ ತಡವಾಗಬಹುದು. ಆದರೆ ಯಾರನ್ನೂ ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅಧಿಕಾರಿಗಳಿಗೆ ಶಿಕ್ಷೆ ಆಗಲೇಬೇಕು. ಇವತ್ತು ಅವರಿಗೆ ನ್ಯಾಯಾಲಯ ಅವಕಾಶವನ್ನು ಕೊಟ್ಟಿರಬಹುದು. ಆದುದರಿಂದ, ಅವರಿಗೆ ಸ್ವಲ್ಪ ಸಮಯ ಸಿಕ್ಕಿರಬಹುದು. ಆದುದರಿಂದ, ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವರಿಗೆ ತಕ್ಕ ಶಿಕ್ಷೆ ಆಗೇ ಆಗುತ್ತದೆ. ಆದ್ದರಿಂದ ಮಾನ್ಯ ಮಿತ್ರರಾದ ಗಂಗಾಧರನ್‌ರವರು ಈ ಬಗ್ಗೆ ಒತ್ತಾಯ ಮಾಡುವುದು ಬೇಕಾಗಿಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಮಾನ್ಯ ಪಿ. ಎನ್. ರೆಡ್ಡಿ ಹಾಗೂ ಹಲವು ಮಿತ್ರರು ಪೀನಲ್ ಇಂಟರೆಸ್ಟನ್ನು ವೇವ್ ಮಾಡಬೇಕೆಂದು ಹೇಳಿದರು. ಅದನ್ನು ನಾನು ಪರಿಶೀಲನೆ ಮಾಡಿಸುತ್ತಿದ್ದೇನೆ. ಎಷ್ಟು ಮಟ್ಟಿಗೆ ಪೀನಲ್ ಇಂಟರೆಸ್ಟ್‌ನಲ್ಲಿ ರೈತರಿಗೆ, ಬಡ ರೈತರಿಗೆ ಸಹಾಯ ಮಾಡಬಹುದು. ಕೆಲವು ರಿಯಾಯಿತಿಗಳನ್ನು ಕೊಡುವುದಕ್ಕೆ ಹೇಗೆ ಸಾಧ್ಯವಿದೆ ಎನ್ನುವುದನ್ನು ನೋಡಬೇಕಾಗುತ್ತದೆಂದು ತಿಳಿಸಿ, ಭದ್ರಾ ಸಕ್ಕರೆ ಕಾರ್ಖಾನೆ ಬಗ್ಗೆ ಮಾನ್ಯ ಸದಸ್ಯರಾದ ಪಂಪಾಪತಿಯವರು ಹೇಳಿದರು. ಅಲ್ಲಿನ ಆಡಳಿತ ಮಂಡಲಿಯವರು ಮೂರನೇ ಒಂದು ಭಾಗ ರಿಟೈರ್ ಆದಾಗ ಉಚ್ಚನ್ಯಾಯಾಲಯದಲ್ಲಿ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆಂದೂ, ಈ ಹೊತ್ತು ಸ್ಟೇ.ವೇಕೆಟ್ ಆಗಿದ್ದರೂ ಸಹಾ ಅವರೇ ಮುಂದುವರಿಯುತ್ತಿದ್ದಾರೆಂದೂ, ಅವರನ್ನು ತೆಗೆಯತಕ್ಕ ಕ್ರಮವನ್ನು ಅನುಸರಿಸಿಲ್ಲವೆನ್ನುವ ಮಾತನ್ನು ಹೇಳಿದರು. ನಾನು ಅದನ್ನು ಪರಿಶೀಲಿಸುತ್ತೇನೆ. ತಡೆಯಾಜ್ಞೆ ವೇಕೇಟ್ ಆದರೂಕೂಡಮುಂದಿನ ಜನರಲ್‌ಬಾಡಿ ಮೀಟಿಂಗ್ ಆಗಿ ನೂತನ ಬೋರ್ಡು ಆರಿಸಿ ಬರುವವರೆಗೂ ಅವರು ಮುಂದುವರಿಯುತ್ತಾರೆ.

ಶ್ರೀ ಪಂಪಾಪತಿ.—ತಡೆಯಾಜ್ಞೆ ವಜಾದ ಮೇಲೆ ಅವರು ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಅವಕಾಶ ಇಲ್ಲ. ಕಾನೂನು ಇಲ್ಲದೇ ಇದ್ದರೂ ಮುಂದುವರಿಸುವುದು ನ್ಯಾಯವೇ ? ನೀವು ಕೋರ್ಟಿಗೆ ಏನು ಮಾನ್ಯತೆ ಕೊಡತಕ್ಕಂಥಾದ್ದು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮುಂದಿನ ಚುನಾವಣೆಯಾಗಿ ಹೊಸ ಬೋರ್ಡು ಬರುವವರೆಗೆ ಹಳೇ ಬೋರ್ಡ್‌ೇ ಇರಬೇಕೆನ್ನುವುದು ನಮ್ಮ ಸಹಕಾರಿ ಕಾಯಿದೆಯಲ್ಲಿದೆ. ಹೊಸ ಬೋರ್ಡು ಬಂದ ತಕ್ಷಣ ಇವರು ನಿವೃತ್ತಿಯಾಗುತ್ತಾರೆ.

ಶ್ರೀ ಪಂಪಾಪತಿ.—ಅಲ್ಲಿಯವರೆಗೆ ಅಧಿಕಾರ ಇಲ್ಲದೇ ಇರತಕ್ಕವರು ಅಧಿಕಾರ ಚಲಾಯಿಸುವುದಕ್ಕೆ ಅವಕಾಶ ಕೊಡುತ್ತೀರಾ ? ಸುಮಾರು 10 ಕೋಟಿ ರೂಪಾಯಿ ಬಂಡವಾಳ ಹೂಡಿರತಕ್ಕ ಕೈಗಾರಿಕೆಯನ್ನು ನಡೆಸತಕ್ಕ ಜವಾಬ್ದಾರಿಯನ್ನು ಅವರ ಕೈಗೆ ಏತಕ್ಕೆ ಕೊಡುತ್ತೀರಿ ? ಸರ್ಕಾರದಲ್ಲಿ ದಕ್ಷ ಆಡಳಿತಗಾರರಿಲ್ಲವೆ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸರ್ಕಾರದಲ್ಲಿ ದಕ್ಷ ಆಡಳಿತಗಾರರುಇಲ್ಲ. ಅಂತ ಅಲ್ಲ ಅದನ್ನು ನಾನು ಪರಿಶೀಲನೆ ಮಾಡಿಸುತ್ತೇನೆ. ಕಾನೂನು ಇಲಾಖೆಯೊಂದಿಗೆ ವ್ಯವಹರಿಸಿ ಯಾವ ರೀತಿ ಮಾಡಬೇಕೆಂದು ಯೋಚನೆ ಮಾಡಿ ಈ ಬಗ್ಗೆ ಕ್ರಮ ಜರುಗಿಸುತ್ತೇನೆ.

ಶ್ರೀ ಕೆ. ರಾಂಭಟ್.—ತಾವು ಸ್ಪಷ್ಟವಾಗಿ ಇಷ್ಟು ಅವಧಿಯೊಳಗೆ ಚುನಾವಣೆ ಮಾಡುತ್ತೇವೆಂದು ಆಶ್ವಾಸನೆ ಕೊಡಬೇಕೆಂದು ಕೇಳಿದ್ದರೂ, ಹಾರಿಕೆ ಉತ್ತರ ಕೊಡುತ್ತಿದ್ದೀರಿ ಇದು ಗಂಭೀರವಾದ ವಿಷಯವಲ್ಲವೇ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ನಗರಾಡಳಿತ ಮಂತ್ರಿಗಳಾಗಿದ್ದಾಗಲೂ ಶ್ರೀಕಂಠಯ್ಯನವರು ಚುನಾವಣೆಗಳನ್ನು ನಡೆಸುತ್ತೇವೆ, ನಡೆಸುತ್ತೇವೆಂದು ಹೇಳಿಕೊಂಡೇ ಹೋದರು. ಈಗ ಸಹಕಾರ ಮಂತ್ರಿಗಳಾಗಿ ಹೇಳಿಕೊಂಡೇ ಮುಂದಕ್ಕೆ ಹಾಕುತ್ತಿದ್ದಾರೆ. ಎಂದು ಮಾನ್ಯ ಸದಸ್ಯರುಗಳು ಹೇಳಿದರು. ಚುನಾ

ವಣೆ ಮಾಡುತ್ತೇವೆ ? ಮಾಡಬಾರದೆಂದು ಇಲ್ಲ. ಈಗ ಶ್ರೀ ಕೆ ಹೆಚ್. ಪಾಟೀಲರ ವರದಿ ಇದೆ ? ಆ ವರದಿ ಬಗ್ಗೆ ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುವಾಗ ಇದನ್ನೆಲ್ಲಾ ಪರಿಶೀಲನೆ ಮಾಡುತ್ತೇವೆ.

ಶ್ರೀ ಪಿ. ರಾಂದೇವ್ —ಇನ್ನು ಎಷ್ಟು ದಿವಸ ಬೇಕು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸ್ವಾಮಿ, ಈ ರಾಂದೇವ್‌ರವರಿಗೆ ಯಾವುದೋ ಒಂದು ಸೊಸೈಟಿಯ ಮೇಲೆ ಕಣ್ಣಿದೆ. ಕೆ ಹೆಚ್. ಪಾಟೀಲರ ವರದಿಯನ್ನು ಪರಿಶೀಲನೆ ಮಾಡಬೇಕೆಂಬುದೇ ಸಭೆಯ ಒಟ್ಟು ಅಭಿಪ್ರಾಯ. ಅದರಂತೆ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಯಾವ ಡೇಟ್ ಅಂತ ಹೇಳಿದರೆ ಹೇಗೆ ?

ಶ್ರೀ ಪಿ. ರಾಂದೇವ್.—ಈ ಸೆಪ್ಟಂಬರ್‌ನಲ್ಲೂ ಆಗುವುದಿಲ್ಲವೆಂದು ತಿಳಿದು ಕೊಂಡು, ಹೈಕೋರ್ಟಿನಲ್ಲಿ ರಿಟ್ ಫೈಲ್ ಮಾಡಿ ಬಂದಿದ್ದೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ರಾಂದೇವ್ ಅವರಿಗೆ ಚುನಾವಣೆ ನಡೆಸಿಬಿಟ್ಟರೆ ಏನು ಬದಲಾವಣೆ ಮಾಡುತ್ತಾರೋ ಅರ್ಥವಾಗುತ್ತಿಲ್ಲ. ಯಾವುದೋ ಒಂದು ಸೊಸೈಟಿ ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ ಇದೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ —ಶ್ರೀ ಪಾಟೀಲರ ವರದಿಯನ್ನು ಸರ್ಕಾರ ಗಣನೆಗೆ ತೆಗೆದುಕೊಳ್ಳುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಪದೇ ಪದೇ ಹೇಳುತ್ತಿದ್ದೀರಿ. ವರದಿ ಸರಕಾರಕ್ಕೆ ಬಂದು ಎಷ್ಟು ತಿಂಗಳಾಯಿತು ? ಅದನ್ನು ಅಭ್ಯಾಸ ಮಾಡಲಿಕ್ಕೆ ಸರ್ಕಾರಕ್ಕೆ ಇನ್ನು ಎಷ್ಟು ದಿವಸ ಬೇಕು ? ಸರ್ಕಾರವೇ ತರಾತುರಿಯಿಂದ ಸಮಿತಿ ನೇಮಕ ಮಾಡಿತು ? ಸಮಿತಿ ಕೂಡ ತೀವ್ರಗತಿಯಿಂದ ಅಧ್ಯಯನ ಮಾಡಿ ವರದಿ ಕೊಟ್ಟಿದೆ ಹೋದವಸಲವೇ ಒಂದು ತಿದ್ದುಪಡಿ ಮಸೂದೆಯನ್ನು ತರತಕ್ಕಂಥ ಒಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಈ ವರದಿ ಆಧಾರದಮೇಲೆ ಕಾನೂನು ಬದಲಾವಣೆ ಮಾಡಿ ಈ ಸೆಪ್ಟಂಬರ್ ಅಥವಾ ಮುಂದಿನ ತಿಂಗಳೊಳಗೆ ಚುನಾವಣೆ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಬಾಪೂ ರಾವ್ ದೇಶಪಾಂಡೆ.—ಈ ಅಧಿವೇಶನದಲ್ಲಿ ತರದೇಹೋದರೆ, ನಿಮ್ಮ ಕೈಯಲ್ಲಿ ತರುವುದಕ್ಕಾಗುವುದಿಲ್ಲ. ೮–೧೦ ದಿವಸಗಳಲ್ಲಿ ರಾಜ್ಯಗಳೇ ಬದಲಾವಣೆ ಯಾಗುತ್ತವೆ. ಸುಮ್ಮನೆ ಚುನಾವಣೆಗಳನ್ನು ಮುಂದುವರಿಸಿಕೊಂಡು ಹೋಗುವುದು ಬೇಡ. ತಾವು ಸುಮ್ಮನೆ ಕೆ. ಹೆಚ್. ಪಾಟೀಲ್ ರಿಪೋರ್ಟ್ ಎಂದು ಹೇಳಿಕೊಂಡು ಕಾಲಕಳೆಯಬೇಡಿ. ಆ ವರದಿಯನ್ನು ಕೊನೆಗೆ ಕಸದ ಬುಟ್ಟಿಗೆ ಹಾಕುತ್ತೀರಾ. ನೀವು ಇರುವಾಗಲೇ ಮಾಡಿ ; ಮತ್ತೆ ತಾವು ಮಂತ್ರಿಯಾಗುವುದಿಲ್ಲ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯ ದೇಶಪಾಂಡೆಯವರು ಮಂತ್ರಿಗಳಾಗಿ ಮಾತನಾಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ಯಾರು ಬೇಕಾದರೂ ಮಂತ್ರಿಗಳಾಗುವುದಕ್ಕೆ ಮುಖ್ಯ ಮಂತ್ರಿಗಳಾಗುವುದಕ್ಕೆ ಅವಕಾಶ ಇದೆ.

ಶ್ರೀ ಪಿ. ರಾಂದೇವ್.—ಎಷ್ಟು ದಿವಸ ಬೇಕು ಹೇಳಿ,

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಕಾಲಾವಕಾಶ ಕೊಡಿ. ತಾವು ಏತಕ್ಕೆ ಒತ್ತಾಯ ಮಾಡುತ್ತೀರಿ ?

ಶ್ರೀ ಕೆ. ರಾಂಭಟ್.—ತಾವು ಕೊಟ್ಟ ಆಶ್ವಾಸನೆಯಂತೆ ಸೆಪ್ಟಂಬರ್ ಒಳಗೆ ಚುನಾವಣೆಗಳನ್ನು ಖಂಡಿತವಾಗಿಯೂ ನಿಮ್ಮಿಂದ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸಾಧ್ಯವಾದಷ್ಟು ಜರೂರಾಗಿ ಶೀಘ್ರವಾಗಿ ಮಾಡುತ್ತೇವೆ.

ಶ್ರೀ ಪಿ. ರಾಂದೇವ್.—ಷೇರುದಾರರಿಗೆ ಡಿವಿಡೆಂಟ್ ಬರತಕ್ಕಂಥಾದ್ದು ನಿಂತು ಹೋಗಿದೆ. ಸೊಸೈಟಿಯವರು ಮಾತ್ರ ಹೋಗಿ ವಸೂಲು ಮಾಡುತ್ತಾರೆ. ಅದನ್ನಾದರೂ ಕೊಡಿಸಿ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಒಂದೇ ಸಾರಿ ತೆಗೆದುಕೊಳ್ಳಬಹುದು. ಆದರಿಂದ ಯಾವ ಲಾಭವನ್ನು ಮಾಡುವುದಕ್ಕೆ ಹೋಗಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸುಗ್ರೀವಾಜ್ಞೆ ತನ್ನಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಶ್ರೀ ಬೊಮ್ಮಾಯಿಯವರಲ್ಲಿ ನನ್ನ ವಿನಯ ಪ್ರಾರ್ಥನೆ ಎಂದರೆ ಚುನಾವಣೆಯನ್ನು ಅತಿಶೀಘ್ರವಾಗಿ ಸರ್ಕಾರ ಮಾಡುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೊನೇ ಪಕ್ಷ ಮೂರು ತಿಂಗಳೊಳಗೆ ಮಾಡುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮೂರು ತಿಂಗಳಾಗಬಹುದು ; ೬ ತಿಂಗಳಾಗ ಬಹುದು, ಒಂದು ತಿಂಗಳಾಗಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಬಹಳ ಗಂಭೀರವಾದ ವಿಷಯ, ತಾವು ಹಗುರವಾಗಿ ತೆಗೆದುಕೊಳ್ಳಬೇಡಿ. ಸಹಕಾರ ಚಳುವಳಿ ಮುಖಾಂತರ ಈ ರಾಜ್ಯದ ಅಭಿವೃದ್ಧಿಯಾಗಬೇಕು. ಅದರಲ್ಲಿಯೂ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯಾಗಬೇಕಾಗಿದೆ. ಸರ್ಕಾರ ಕೂಡ ಸಹಕಾರ ತತ್ವದಲ್ಲಿ ನಂಬಿಕೆಯಿಟ್ಟುಕೊಂಡು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇದರ ಮೂಲಕ ಜನತೆಯ ಅಭಿವೃದ್ಧಿ ಕಾರ್ಯವೂ ಮುಂದುವರಿಯಬೇಕಾಗಿದೆ. ಅದಕ್ಕೋಸ್ಕರ ಇಂಥ ಮಹತ್ವದ ವರದಿಯನ್ನು ತೀವ್ರಗತಿಯಿಂದ ಜಾರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕಾಗುತ್ತದೆ. ಹೋದಸಲ ಈ ಅಧಿವೇಶನದಲ್ಲಿಯೇ ಕಾನೂನು ತರುತ್ತೇವೆಂದು ಹೇಳಿದ್ದಿರಿ. ಇನ್ನು ಮೂರು ತಿಂಗಳೊಳಗಾದರೂ ಕೂಡ ಇದರ ಬಗ್ಗೆ ನಿರ್ಣಯ ತೆಗೆದುಕೊಂಡು ಸಹಕಾರ ಸಂಘಗಳಿಗೆ ಚುನಾವಣೆ ಮಾಡತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅತಿ ಶೀಘ್ರವಾಗಿ ಖಂಡಿತ ಮಾಡುತ್ತೇವೆ. ಮಾನ್ಯ ಸದಸ್ಯರಾದ ಬೊಮ್ಮಾಯಿಯವರು ಅನುಮಾನಪಡಬೇಕಾಗಿಲ್ಲ. ಮಾನ್ಯ ಸದಸ್ಯರಾದ ರಾಂದೇವ್ ಅವರು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರನ್ನು ಮುಂದುವರಿಸಲಿಕ್ಕೋಸ್ಕರ ಎಲೆಕ್ಷನ್ ಪೋಸ್ಟ್‌ಪೋನ್ ಮಾಡುತ್ತಿದ್ದಾರೆಂದು ಹೇಳಿದರು. ಆ ತರಹ ಉದ್ದೇಶ ನಮಗೆ ಇಲ್ಲ. ಮಾನ್ಯ ರಾಮ್‌ದೇವ್ ಅವರೇ ಪ್ರೆಸಿಡೆಂಟರಾಗಿದ್ದರೆ ಅವರೇ ಮುಂದುವರಿಯುತ್ತಿದ್ದರು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮಂತ್ರಿಗಳು ಇಷ್ಟು ಕಾಲಮಿತಿಯೊಳಗೆ ಮಾಡುತ್ತೇವೆ ಎನ್ನುವ ಭರವಸೆಯನ್ನು ಈ ಸಭೆಯಲ್ಲಿ ಕೊಡುತ್ತಾರೆಯೇ ? ತಾವು ಎಷ್ಟು ಸಮಯವನ್ನಾದರೂ ಹೇಳಿ. ಅದರ ನಂತರ ನೋಡೋಣ.

SRI H.C. SRIKANTAIAH.—It is a big report. That has to be studied.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಉಪಾಧ್ಯಕ್ಷರೆ, ಈ ಕುಂಟು ನೆಪ ಹೇಳಿರುವುದರಿಂದ ಹಾರಿಕೆ ಉತ್ತರದಿಂದ ಯಾರಿಗೂ ಸಮಾಧಾನವಾಗುವುದಿಲ್ಲ, ಸರ್ಕಾರದ ಧೋರಣೆಯ ಬಗ್ಗೆ ನಮ್ಮ ಮನಸ್ಸಿಗೆ ಸ್ಥಿರವಾದಂಥ ಕಲ್ಪನೆ ಆಗಬೇಕಾಗಿದೆ. ಆದ್ದರಿಂದ ಯಾವ ಒಂದು ಕಾಲಮಿತಿಯಲ್ಲಿ ಮಾಡುತ್ತಾರೆ ಎನ್ನುವುದನ್ನು ಈ ಸಭೆಗೆ ಹೇಳಲಿಕ್ಕೆ ಏನೂ ಅಭ್ಯಂತರವಿರಲಾರದು, ಬೇಕಾದರೆ ತಾವು ೧೦ ವರ್ಷದ ನಂತರ ಮಾಡುತ್ತೇವೆಂದು ಹೇಳಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧಿಕಾರದಲ್ಲಿದ್ದರೆ ?

ಶ್ರೀ ಎ. ಲಕ್ಷ್ಮೀಸಾಗರ್.—ಅದು ಬೇರೆ ವಿಚಾರ.

ಶ್ರೀ ಪಿ. ರಾಮಂದೇವ್.—ಇವರು ನಗರಾಡಳಿತ ಮಂತ್ರಿಗಳಾಗಿದ್ದಾಗ ಡೆಫನೆಟ್ ಆಗಿ ಹೇಳುತ್ತಿದ್ದರು, ಈ ಸಹಕಾರ ಸಚಿವರಾದ ಮೇಲೆ ಕಾಲಮಿತಿ ಬಿಟ್ಟಿದ್ದಾರೆ.

SRI H.C. SRIKANTAIAH.—That is an improvement. ಮಾನ್ಯ ಸದಸ್ಯರಾದ ಬೊಮ್ಮಾಯಿಯವರ ಹಾಗೂ ಮಾನ್ಯ ವಿರೋಧಪಕ್ಷದ ನಾಯಕರಾದ ಲಕ್ಷ್ಮೀಸಾಗರ್ ಅವರ ಅಭಿಪ್ರಾಯವನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಬಲ್ಲೆ. ಇವತ್ತು ಕಾಲಮಿತಿ ಇಷ್ಟೇ ಅಂತ ಹೇಳು ಹೇಳಲಿಕ್ಕೆ ಅದರಲ್ಲಿ ಬೇಕಾದಷ್ಟು ಬದಲಾವಣೆಯಾಗಬೇಕು, ಕಾನೂನು ಆಗಬೇಕು, ಆದ ಕಾರಣ ಟೈಮ್ ಲಿಮಿಟ್ ಹೇಳಲಿಕ್ಕೆ ಆಗುವುದಿಲ್ಲ. ಆದಷ್ಟು ಜಾಗ್ರತೆ ಮಾಡುತ್ತೇವೆ ಎನ್ನುವ ಪೂರ್ಣ ಭರವಸೆಯನ್ನು ಮಾನ್ಯ ಸದಸ್ಯರು ಇಟ್ಟುಕೊಳ್ಳಬಹುದು.

ಶ್ರೀ ಪಿ. ರಾಮ್‌ದೇವ್.—ಸರ್ಕಾರ ಬದಲಾವಣೆ ಆದಮೇಲೆ ಮಾಡುತ್ತೀರಾ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಕಾಲ ಮಿತಿಯ ಬಗ್ಗೆ ಅಷ್ಯೂರೆನ್ಸ್ ಕೊಡುವುದು ಬೇಡ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಮಾನ್ಯ ಮಂತ್ರಿಗಳು ನನಗೆ ಖಾಸಗಿಯಾಗಿ ಹೇಳಿದರು, ಯಾವ ಅನಿರೀಕ್ಷಿತ ಬದಲಾವಣೆಗಳೂ ಆಗದೇ ಹೋದರೆ ಡಿಸೆಂಬರ್ ತಿಂಗಳಿನಲ್ಲಿ ಚುನಾವಣೆ ಮಾಡುತ್ತೇವೆ ಅಂತ ನನಗೆ ಹೇಳಿದರು.

ಶ್ರೀ ಎ. ಲಕ್ಷ್ಮೀಸಾಗರ್. —ಮಾನ್ಯ ಸದಸ್ಯರಾದ ಎಚ್. ಟಿ. ಕೃಷ್ಣಪ್ಪನವರು ಶ್ರೀಕಂಠಯ್ಯನವರ ಮನಸ್ಸಿನೊಳಗೆ ಹೋಗಿ ಒಂದು ವಿಕ್ರಮ ಸಾಧಿಸಿದ್ದಾರೆಂದು ನಾವು ಅಂದುಕೊಳ್ಳಬೇಕಾಗಿದೆ, ನಮ್ಮ ಕೈಯಲ್ಲಿ ಆಗದೇ ಇರುವ ಕೆಲಸವನ್ನು ಅವರು ಸಾಧಿಸಿದ್ದಾರೆ.

ಶ್ರೀ ಎಚ್.ಸಿ ಶ್ರೀಕಂಠಯ್ಯ.—ಮಾನ್ಯ ವಿರೋಧ ಪಕ್ಷದ ನಾಯಕರ ಜೊತೆ ಮತ್ತು ಮಾನ್ಯ ಬೊಮ್ಮಾಯಿಯವರ ಹತ್ತಿರ ನಾನು ಈ ಬಗ್ಗೆ ಮಾತನಾಡುತ್ತೇನೆ. ಆದ ಕಾರಣ ಈ ಸಭೆಯಲ್ಲಿ ಅವರು ಕಾಲಮಿತಿ ಮಾಡಿಸುವುದು ಬೇಡ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದರ ಬಗ್ಗೆ ಒಂದು ಮೀಟಿಂಗ್ ಕರೆಯಿರಿ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಕರೆಯುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದು ದೊಡ್ಡ ರಿಪೋರ್ಟ್ ಇದೆ, ಕಾಲಮಿತಿ ನಮಗೆ ಹೆಚ್ಚು ಬೇಕು ಅಂತ ಹೇಳುವುದಾದರೆ ಮೊದಲಿನ ಕಾನೂನಿನ ಪ್ರಕಾರವೇ ಚುನಾವಣೆ ನಡೆಯಲಿ, ಏತಕ್ಕೆ ಮುಂದೆ ಹಾಕುತ್ತೀರಾ ? ತಮಗೆ ರಿಪೋರ್ಟ್ ಮೇಲೆ ಕಾನೂನು ಮಾಡಲಿಕ್ಕೆ ೬ ತಿಂಗಳು ಬೇಕು ಅಂತ ಹೇಳುವುದಾದರೆ ಈ ಸೆಪ್ಟೆಂಬರ್‌ನಲ್ಲಿ ಬರತಕ್ಕ ಚುನಾವಣೆಯನ್ನು ಹಳೆಯ ಕಾನೂನು ಪ್ರಕಾರ ಮಾಡಿ, ಅದಕ್ಕೆ ನಿಮಗೆ ತೊಂದರೆ ಏನಿದೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅವರು ಹೇಳಿದ ಹಾಗೆ keeping that report before us, it is not correct to hold elections. ರಿಪೋರ್ಟ್‌ನಲ್ಲಿ ನಾಲ್ಕು ವರ್ಷಕ್ಕೆ ಒಂದು ಸಾರಿ ಚುನಾವಣೆ ಮಾಡಬೇಕೆಂದು ಇದೆ. ಪುನಃ ಮತ್ತೆ ಮಾಡಲಿಕ್ಕೆ ಆಗುವುದಿಲ್ಲ. ಅದು ಸೊಸೈಟಿಗಳಿಗೆ ಅನ್‌ನೆಸಸರಿ ಬರ್ಡನ್ ಹಣಕಾಸಿನ ಪರಿಸ್ಥಿತಿ ಬಗ್ಗೆ ಬಹಳ ಕಷ್ಟವಾಗುತ್ತದೆ, ಆದಕಾರಣ ಈ ಬಗ್ಗೆ ತಮ್ಮ ಹತ್ತಿರ ಮಾತನಾಡುತ್ತೇನೆ ಬಿಡಿ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಸಾರ್ವತ್ರಿಕ ಚುನಾವಣೆಯಾಗುವವರೆಗೆ ಇದನ್ನು ಮಾಡಬಾರದು ಅಂಥ ತಮ್ಮ ಮನಸ್ಸಿನಲ್ಲಿದ್ದರೆ ದಯವಿಟ್ಟು ಹೇಳಿ,

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಆ ತರಹದ ಭಾವನೆ ನನ್ನ ಮನಸ್ಸಿನಲ್ಲಿ ಇಲ್ಲ. ಇನ್ನು ಎರಡು ಮೂರು ತಿಂಗಳಲ್ಲಿ ಮಾಡುತ್ತೇನೆಂದು ಸಭೆಗೆ ಭರವಸೆ ಕೊಡುವುದು ಸರಿಯಲ್ಲ.

MR. DEPUTY SPEAKER.—The Hon. Minister will call a meeting immediately where the Leader of the Opposition, Sri Bommai and others can discuss, not only this matter but also other matters.

SRI M.C. NANAIAH.—If they join together and do something, then what is to be done?

MR. DEPUTY SPEARER.—The Deputy Leader will also be there, in that meeting as one of the members.

SRI A. LAKSHMISAGAR.—My friend Sri Nanaiah need not have any apprehensions. So far as our commmitment to Sri Srikantaiah is concerned, we have marked each other and there cannot be any mistake in this regard. He is trying to avoid. That is all. Because what he is going to tell us in a meeting ? It will not be more than what he has said now. That is all. Therefore the discussion, the Hon'ble Minister wishes to have, will not lead us anywhere since no commitment has been made so far as holding of the election to the co-operative societies is concerned. He does not have the intention. It is apparent that the Government does not want to hold elections and he is only trying to dangle. They are holding out the cat before the people 'K.H Patil's report' and trying to postpone the elections indefinitely This is apparent. There is no point in having a meeting with the Hon'ble Minister and have private conversation about matters of public interest.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಆ ತರಹ ಭಾವನೆ ಏನೂ ಇಲ್ಲ, ಆದಷ್ಟು ಜಾಗ್ರತೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಈ ರಿಪೋರ್ಟ್ ಬಗ್ಗೆ ಆದಷ್ಟು ಜಾಗ್ರತೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎನ್ನುವ ಭರವಸೆಯನ್ನು ಕೊಡುತ್ತೇನೆ. ಇನ್ನು ಸಹಕಾರ ಖಾತೆ ಹಣಕಾಸಿನ ಬೇಡಿಕೆ ಬಗ್ಗೆ ಮಾನ್ಯ ಸದಸ್ಯರು ಏನು ವಿಷಯಗಳನ್ನು ಚರ್ಚೆ ಮಾಡಿದರು ಅದಕ್ಕೆಲ್ಲಾ ವಿವರಣೆ ಕೊಟ್ಟಿದ್ದೇನೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಕೇಂದ್ರ ಸರ್ಕಾರದಿಂದ ಬಂದ ಹಣದಲ್ಲಿ ನಾಲ್ಕನೇ ಒಂದು ಭಾಗ ದುಡ್ಡು ಖರ್ಚು ಮಾಡಿದ್ದಾರೆಯೋ ಹೇಗೆ ಎಂಬುದನ್ನು ಹೇಳಲಿಲ್ಲ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರಾದ ತಿಮ್ಮೇಗೌಡರು ಕೇಂದ್ರ ಸರ್ಕಾರದಿಂದ ಬಂದಂಥ ಹಣ ಲ್ಯಾಪ್ಸ್ ಆಗಿದೆ ಎಂದು ಹೇಳಿದರು, ಅದು ಲ್ಯಾಪ್ಸ್ ಆಗಿಲ್ಲ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಖರ್ಚು ಮಾಡದೇ ಇದ್ದರೆ ಲ್ಯಾಪ್ಸ್ ಆಗುವುದಿಲ್ಲವೇ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ದಾಸ್ತಾನು ಮಳಿಗೆಗೆ ಹಣ ಬರುತ್ತದೆ. ಅದು ವರ್ಷದ ಕೊನೆಯಲ್ಲಿ ಪೂರ್ಣ ಖರ್ಚಾಗುವುದಿಲ್ಲ. ಕೆಲವು ಸ್ಪಿಲ್ ಓವರ್ ವರ್ಕ್ಸ್ ಉಳಿದುಕೊಳ್ಳುತ್ತವೆ. ಆ ರೀತಿ ಆಗಿದೆಯೋ ಹೊರತು ಹಣ ಖಂಡಿತ ಲ್ಯಾಪ್ಸ್ ಆಗಿಲ್ಲ, ಅದನ್ನು ಪರಿಶೀಲನೆ ಮಾಡಿದ್ದೇವೆ. ಕೇಂದ್ರ ಸರ್ಕಾರದಿಂದ ಬರತಕ್ಕ ಹಣ ಷೇರು ರೂಪದಲ್ಲಿ, ಅಸಿಸ್ಟೆನ್ಸ್ ರೂಪದಲ್ಲಿ ಬರುತ್ತದೆ. ಈ ಹಣ ಆಯಾ ಸಂಬಂಧಪಟ್ಟಂತಾದ್ದಕ್ಕೆ ಖರ್ಚಾಗುತ್ತದೆ. ಹಣ ಏನಾಗುತ್ತದೆ ಅಂದರೆ, ಮಾರ್ಚಿ ಅಖೈರಿಗೆ ಖರ್ಚು ಆಗದೇ ಹೋದರೆ ಡ್ರಾ ಮಾಡಿ ಇಡುತ್ತಾರೆ. ನಮಗೆ ಬರತಕ್ಕ ಹಣ ಲ್ಯಾಪ್ಸ್ ಆಗುವ ಸನ್ನಿವೇಶವಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಕೋ-ಆಪರೇಟಿವ್ ಸಂಸ್ಥೆಗಳಿಗೆ ಸರ್ಕಾರ ೧೦೨ ಕೋಟಿ ೩೪ ಲಕ್ಷ ರೂಪಾಯಿ ಸಾಲ ಕೊಟ್ಟಿದೆ. ರಿಟರ್ನ್ ೧.೩೩ ಲಕ್ಷ ರೂಪಾಯಿ, ಇದರಲ್ಲಿ ಕ್ರೆಡಿಟ್ ಸೊಸೈಟಿಯಲ್ಲಿ ೬೦ ಕೋಟಿ ರೂ.ಗಳವರೆಗೆ ಮತ್ತು ಶುಗರ್ ಮಿಲ್ಸ್‌ನಲ್ಲಿ ೧೭ ಕೋಟಿ ರೂಪಾಯಿಗಳವರೆಗೆ ಸರ್ಕಾರದ ಸಾಲ ಇದೆ. ಗ್ಯಾರಂಟಿ ಕೊಟ್ಟಿದ್ದು ಬೇರೆ, ಇದು ೮೪ ಕೋಟಿ ರೂಪಾಯಿಗಳು ಲೇಟೆಸ್ಟ್ ಆಡಿಟ್ ರಿಪೋರ್ಟ್‌ನಲ್ಲಿ ಇದನ್ನು ಹೇಳಿದ್ದಾರೆ. ೧೦೨ ಕೋಟಿ ಸಾಲ ಕೊಟ್ಟಿದ್ದೀರಿ, ನಿಮ್ಮ ರಿಟರ್ನ್ಸ್ ೧ ಕೋಟಿ ೫ ಲಕ್ಷ, ಅದರಲ್ಲಿ ೬೪ ಲಕ್ಷ ಈ ರೈತರಿಂದ ಬಡ್ಡಿ ರೂಪದಲ್ಲಿ ಬಂದಿದೆ ಶುಗರ್ ಮಿಲ್ಸ್ ೧೭ ಕೋಟಿ ರೂಪಾಯಿ, ಗ್ಯಾರಂಟಿ ಕೊಟ್ಟಿದ್ದು ೨೧ ಕೋಟಿ ರೂಪಾಯಿ, ಡಿವಿಡೆಂಟ್ ೨೫ ಸಾವಿರ. ಈ ಒಂದು ಟೆಕ್ಸ್‌ಟೈಲ್ ಮಿಲ್‌ಗೆ ಕೊಟ್ಟಿರತಕ್ಕದ್ದು ೧೨ ಕೋಟಿ ರೂಪಾಯಿ ಸಾಲ. ಗ್ಯಾರಂಟಿ ೨೦ ಕೋಟಿ ರೂಪಾಯಿ. ರಿಟರ್ನ್ಸ್ ಎಷ್ಟು ೩೫ ಲಕ್ಷ ರೂಪಾಯಿ, ನಾಟ್ ಈವನ್ ೩೪ ಪರ್ಸೆಂಟ್. ಸರ್ಕಾರದ ಇನ್‌ವೆಸ್ಟ್‌ಮೆಂಟ್‌ನಲ್ಲಿ ರೈತರಿಂದ ಸುಸ್ತಿ ಬಡ್ಡಿ ವಸೂಲಿ ಮಾಡಿ, ಪೋಲೀಸರನ್ನು ಕಳುಹಿಸಿ

ಜಪ್ತಿ ಮಾಡುತ್ತಿದ್ದೀರಿ. ಇನ್‌ವೆಸ್ಟ್‌ಮೆಂಟ್ ಶುಗರ್ ಮಿಲ್ಸ್ ಅಂಡ್ ಟೆಕ್ಸ್‌ಟೈಲ್ಸ್ ಬೇರೆ ಅದರ್ ಇಂಡಸ್ಟ್ರೀಸ್‌ಗೆ ತಾವು ಏನೇನು ಕೊಟ್ಟಿದ್ದೀರಿ, ಅದಕ್ಕೆ ರಿಟರ್ನ್ಸ್ ಇಲ್ಲ, ಡಿವಿಡೆಂಟ್ ಇಲ್ಲ, ಇದು ನಿಮ್ಮ ಹಣ. ರೈತರು ಕೊಟ್ಟಂಥ ಷೇರು ಹಣ ಬೇರೆ ರಿಟರ್ನ್ಸ್ ಇಲ್ಲ ಇದರ ಬಗ್ಗೆ ಮಾನ್ಯ ಮಂತ್ರಿಗಳು ಕ್ರಮ ಕೈಗೊಳ್ಳುತ್ತೀರಾ ?

೨-೦೦ ಪಿ.ಎಂ.

ಮತ್ತೊಂದು ವಿಷಯ ಅನೇಕ ಸಲ ತಾವು ಒಪ್ಪಿಕೊಂಡಿರತಕ್ಕಂಥದ್ದು. ರೈತರಿಗೆ ಸಾಲ ಕೊಡುವುದ ಕ್ಕೋಸ್ಕರವಾಗಿ ಕಾರ್ಡ್ ಸಿಸ್ಟಂ ಇಂಟ್ರಡ್ಯೂಸ್ ಮಾಡುತ್ತೇವೆಂದು ಇದನ್ನು ಇಂಟ್ರಡ್ಯೂಸ್ ಮಾಡು ತ್ತೀರಾ ? ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿರುತ್ತೀರಿ ಎಂಬುದನ್ನು ನಾನು ಕೇಳುತ್ತೇನೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ, ರೈತರಿಗೆ ಕ್ರೆಡಿಟ್ ಕಾರ್ಡ್ಸ್‌ನ್ನು ಕೊಡುವ ಬಗ್ಗೆ ಸರ್ಕಾರ ಜಾರಿ ಮಾಡಬೇಕೆಂದು ಉದ್ದೇಶವಿಟ್ಟುಕೊಂಡಿರತಕ್ಕಂಥದ್ದು ಒಳ್ಳೆಯ ಉದ್ದೇಶ ವಾಗಿರುತ್ತದೆ. ರೈತರು ಅಧಿಕಾರಿಗಳ ಮನೆಯ ಬಾಗಿಲಿಗೆ ಹೋಗಿ ಸಲಾಂ ಮಾಡುವುದು ಬೇಡವೆಂದು ರೈತರ ಮನೆಯ ಬಾಗಿಲಿಗೆ ಬ್ಯಾಂಕ್‌ಗಳ ಮೂಲಕ ಚೆಕ್‌ಗಳು ಹೋಗುವಂತೆ ವ್ಯವಸ್ಥೆಯನ್ನು ಮಾಡುತ್ತೇವೆ. ಇದರಿಂದ ರೈತರಿಗೆ ಸುಲಭವಾಗಿ ಸಾಲ ದೊರೆಯುತ್ತದೆ ಎಂದು ಹೇಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಯಾವ ವರ್ಷದಿಂದ ಮಾಡುತ್ತೀರಿ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಈ ವರ್ಷದಿಂದಲೇ ಪ್ರಾರಂಭ ಮಾಡುತ್ತೇವೆ. ಅದನ್ನು ಕೆಲವು ತಾಲ್ಲೂಕುಗಳಲ್ಲಿ ಎಕ್ಸ್‌ಪಿರಿಮೆಂಟಲ್ ಬೇಸಿಸ್ ಮೇಲೆ ಪ್ರಾರಂಭ ಮಾಡಬೇಕೆಂದಿದ್ದೇವೆ. ಇದನ್ನು ಸಾರ್ವತ್ರಿಕವಾಗಿ ಈ ಕೂಡಲೇ ಮಾಡುವುದಕ್ಕೆ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ.

ಇನ್ನು ಶುಗರ್ ಫ್ಯಾಕ್ಟರಿಗಳಿಗೆ ಡಿವಿಡೆಂಟ್ ಕೊಡುವ ಬಗ್ಗೆ ಹೇಳಿರುತ್ತಾರೆ. ಡಿವಿಡೆಂಟ್ ಕೊಟ್ಟಿದ್ದೇವೆ. ಕೆಲವೊಂದು ಸಕ್ಕರೆ ಕಾರ್ಖಾನೆಗಳಲ್ಲಿ ಡಿವಿಡೆಂಟ್ ಕೊಡಲು ಆಗುತ್ತಿಲ್ಲ. ಬಹುಪಾಲು ಸಕ್ಕರೆ ಕಾರ್ಖಾನೆಗಳು ಲುಕ್ಸಾನಿನಿಂದ ನಡೆಯುತ್ತಿವೆ. ಅವರೂ ಕೂಡ ಡಿವಿಡೆಂಟ್ ಕೊಡಬೇಕೆಂದು ಸರ್ಕಾರದ ಮುಂದೆ ಮನವಿ ಇಟ್ಟಿದ್ದಾರೆ. ಲಾಭ ಮಾಡಿರತಕ್ಕಂಥ ಸಕ್ಕರೆ ಕಾರ್ಖಾನೆಗಳಿಗೆ ಡಿವಿಡೆಂಟ್ ಕೊಡುತ್ತಿದ್ದೇವೆ. ಲುಕ್ಸಾನ್, ಆಗುತ್ತಿರುವ ಫ್ಯಾಕ್ಟರಿಗಳಿಗೂ ಡಿವಿಡೆಂಟ್ ಕೊಡುವ ಬಗ್ಗೆ ನಮ್ಮ ಸೆಕ್ರೆಟರಿಯವರು, ರಿಜಿಸ್ಟ್ರಾರ್‌ರವರು ಕೂತು ಪರಿಶೀಲನೆ ಮಾಡಬೇಕಾಗಿರುತ್ತದೆ, ಈಗಾಗಲೇ ತಿಳಿಸಿದ್ದೇನೆ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಸಹಕಾರಿ ಸಂಸ್ಥೆಗಳಲ್ಲಿ ಅದರಲ್ಲೂ ಮುಖ್ಯವಾಗಿ ಸಕ್ಕರೆ ಕಾರ್ಖಾನೆ ಗಳು ಸಹಕಾರಿ ಸಂಸ್ಥೆಗಳಾಗಿ ಇರುವುದಕ್ಕೆ ಬದಲಾಗಿ ಸರ್ಕಾರಿ ಸಂಸ್ಥೆಗಳಾಗಿರುತ್ತವೆಂದು ದೂರು ಇದೆ. ಅನೇಕ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿರುವ ಪದಾಧಿಕಾರಿಗಳು. ಸರ್ಕಾರಿ ಅಧಿಕಾರಿಗಳು ಆಗಿದ್ದಾರೆ. ಇದರಿಂದ ಯಾವ ಉದ್ದೇಶಕ್ಕಾಗಿ ಸಹಕಾರಿ ಸಂಸ್ಥೆಗಳು ನಿರ್ಮಾಣವಾದವೋ ಆ ತತ್ವಕ್ಕೆ ತಿಲಾಂಜಲಿ ಕೊಟ್ಟಿರತಕ್ಕಂಥ ಪರಿಸ್ಥಿತಿ ಈಗ ಉದ್ಭವವಾಗಿದೆ. ಇದನ್ನು ಬದಲಾವಣೆ ಮಾಡುವುದಕ್ಕೋಸ್ಕರವಾಗಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅಂದರೆ ನಾಮಕರಣ ಮಾಡಿ ಎಂದು ತಮ್ಮ ಉದ್ದೇಶವೇ ?

ಶ್ರೀ ಎಚ್.ಟಿ. ಕೃಷ್ಣಪ್ಪ.-ನಾಮಕರಣ ಮಾಡಿ ಎನ್ನುವ ಉದ್ದೇಶದಿಂದ ಹೇಳಲಿಲ್ಲ. ದಯಮಿಟ್ಟು ತಪ್ಪು ಕಲ್ಪನೆ ಮಾಡಿಕೊಳ್ಳಬೇಡಿ. ನಾಮಕರಣವಾದರೂ ಮಾಡಿ. ಚುನಾವಣೆಯಾದರೂ ಮಾಡಿ, ಒಟ್ಟಿನಲ್ಲಿ ಖಾಸಗಿ ವ್ಯಕ್ತಿಗಳು ಅಲ್ಲಿ ಇರಬೇಕೆಂಬುದೇ ನನ್ನ ಉದ್ದೇಶ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ, ನಮ್ಮ ಸ್ನೇಹಿತರಾದ ಶ್ರೀ ಕೃಷ್ಣಪ್ಪನವರು ನಮ್ಮ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಗೆ ಸೇರಿದ್ದಾರೆ. ಷೇರುದಾರರನ್ನು ಕೂಡಿ ಎಂದರೆ ೫೦ ಜನ ಷೇರು ದಾರರನ್ನು ಮಾಡಿಕೊಟ್ಟಿದ್ದಾರೆ. ಇನ್ನು ಎಲೆಕ್ಷನ್ ಮಾಡಿದರೆ ಏನಾಗುತ್ತದೆ?.

(ನಗು)

ಶ್ರೀ ಎಚ್.ಟಿ. ಕೃಷ್ಣಪ್ಪ.—ನಾನು ಸಂಕುಚಿತ ದೃಷ್ಟಿಯನ್ನು ಇಟ್ಟುಕೊಂಡು ಕೇಳುವ ಪ್ರಶ್ನೆಯಲ್ಲ ನನ್ನದು ಇಡೀ ಕರ್ನಾಟಕಕ್ಕೆ, ಕರ್ನಾಟಕ ರಾಜ್ಯಕ್ಕೆ ಸಂಬಾಂಧಪಟ್ಟ ವ್ಯಾಪಕವಾದ ಪ್ರಶ್ನೆ. ಇದರ ಬಗ್ಗೆ ಪ್ರಾಮಾಣಿಕವಾಗಿ ಚಿಂತಿಸಿ ಸರಿಯಾದ ತೀರ್ಮಾನಕ್ಕೆ ಬನ್ನಿ ಸಹಕಾರಿ ಸಂಸ್ಥೆಗಳು ಸರ್ಕಾರಿ ಸಂಸ್ಥೆಗಳಾಗಿ ಮಾರ್ಪಾಡಾಗಿರುತ್ತವೆ. ಇಲ್ಲದಿದ್ದರೆ ಸರ್ಕಾರಿ ಅಧಿಕಾರಿಗಳನ್ನೇ ನೇಮಕಮಾಡಿಬಿಡಿ. ಚುನಾವಣೆಯೂ ಬೇಡ, ಏನುಬೇಡ ಈ ಸಂಸ್ಥೆಗಳನ್ನು ಸರ್ಕಾರಿ ಅಧಿಕಾರಿಗಳು ನಡೆಸುವುದಕ್ಕೆ ಏನೂ ಕಷ್ಟವಿಲ್ಲ. ಅವರೇ ನಡೆಸುತ್ತಾರೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ, ಕೆಲವು ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಚುನಾವಣೆ ಮಾಡತಕ್ಕಂಥದ್ದರ ಬಗ್ಗೆ ಯಾವುದೇ ನಂಬಿಕೆ ಇಲ್ಲ. ಕೆಲವು ಹೊಸ ಕಾರ್ಖಾನೆಗಳು ಸ್ಥಾಪನೆಯಾಗಿರುವಂಥದ್ದು ಲುಕ್ಸಾನಿನಲ್ಲಿ ನಡೆಯುತ್ತಿರುವುದಕ್ಕೆ ಆಡಳಿತ ಮಂಡಳಿಯವರನ್ನು ತೆಗೆದುಹಾಕಿ ತಾವು ಹೇಳಿದ ಹಾಗೆ ಚುನಾವಣೆ ನಡೆಸಬೇಕಾದರೆ ಬೋರ್ಡನ್ನು ರಚನೆ ಮಾಡಬೇಕು. ಅದನ್ನು ಶೀಘ್ರವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ.—ನಾನು ಮಾನ್ಯ ಮಂತ್ರಿಗಳನ್ನು ಎರಡು ಪ್ರಶ್ನೆ ಕೇಳುತ್ತಿದ್ದೇನೆ, ಒಂದನೆಯದು ಶೇಕಡ ಒಂದೂವರೆ ಕೋಟಿ ರೂಪಾಯಿ ಷಾರ್ಟೇಜ್ ಏನು ಇದೆ, ಅದರ ಬಗ್ಗೆ ಸರ್ಕಾರದವರು ತೀರ್ಮಾನ ತೆಗೆದುಕೊಂಡಿಲ್ಲ ಈ ಒಂದು ಹಣ ಮಾರ್ಕೆಟಿಂಗ್ ಸಂಘ ಸಂಸ್ಥೆಗಳಿಗೆ ಹೋಗಬೇಕಾದಂಥ ಹಣ. ಇದಕ್ಕೆ ಕಾರಣವೇನು ? ಮಾರ್ಕೆಟಿಂಗ್ ಸಂಘ ಸಂಸ್ಥೆಗಳಿಗೆ ಸರ್ಕಾರದವರು ಎರಡುಕೋಟಿ ರೂಪಾಯಿಗಳ ಷಾರ್ಟ್‌ಲೋನ್ ಕೊಡುತ್ತೇವೆಂದು ಹೇಳಿದ್ದಾರೆ. ಅಪೆಕ್ಸ್‌ಬ್ಯಾಂಕ್ ಮತ್ತು ಡಿ.ಸಿ.ಸಿ. ಬ್ಯಾಂಕ್ ಮುಖಾಂತರ ಕೊಡುತ್ತೇವೆಂದರೆ ಅವರ ಕೈಯಿಂದ ಹಣ ಶೇಖರಣೆ ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ. ಇದು ಸಾಧ್ಯವಿಲ್ಲ. ಇವೆರಡರಬಗ್ಗೆ ಸರ್ಕಾರ ಉತ್ತರ ಕೊಡಬೇಕು.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಸಹಕಾರಿ ಮಾರ್ಕೆಟಿಂಗ್ ಫೆಡರೇಷನ್‌ಗೆ ಸುಮಾರು ೬೬ ಲಕ್ಷ ರೂಪಾಯಿಗಳನ್ನು ಒಂದೂವರೆ ಪರ್ಸೆಂಟ್ ಮಾರ್ಜಿನ್ ಮೇಲೆ ಕೊಡಬೇಕೆಂದು, ಅಂದರೆ ಹ್ಯಾಂಡ್ಲಿಂಗ್ ಚಾರ್ಜಸ್, ಕನ್‌ಸೈನ್‌ಮೆಂಟ್ ಫರ್ಟಿಲೈಸರ್ಸ್ ಮುಂತಾದವುಗಳಿಗೆ ಕೊಡಬೇಕೆಂದು ರಿಜಿಸ್ಟ್ರಾರ್, ಸೆಕ್ರೆಟರಿ, ಮತ್ತು ಅಗ್ರಿಕಲ್ಚರ್ ಸೆಕ್ರೆಟರಿ ಅವರುಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಅದನ್ನು ಆದಷ್ಟು ಬೇಗ ಕೊಡಿಸುತ್ತೇವೆ. ೬೬ ಲಕ್ಷ ರೂಪಾಯಿ ಮತ್ತು ೨ ಕೋಟಿ ಷಾರ್ಟ್ ಲೋನ್ ಬಗ್ಗೆ ಹೇಳಿದ್ದೀರಿ ಅದನ್ನು ಅಪೆಕ್ಸ್ ಬ್ಯಾಂಕಿನಿಂದ ಮತ್ತು ಡಿಸಿಸಿ ಬ್ಯಾಂಕ್‌ನಿಂದ ಕೊಡಿಸುತ್ತೇವೆಂದು ಹೇಳಿದರೆ ಅದರ ಅರ್ಥ ಏಳು ಪರ್ಸೆಂಟ್ ನಂತೆ ಎರಡು ಕೋಟಿ ರೂಪಾಯಿ ಇಂಟರೆಸ್ಟ್ ಕೊಡಬೇಕಾಗಿರುತ್ತದೆ.

ಶ್ರೀ ಎಂ.ಸಿ. ನಾಣಯ್ಯ.—ಎರಡು ಕೋಟಿ ಬಡ್ಡಿ ತುಂಬ ತ್ತೇವೆಂದು ಹೇಳಿದರೆ, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಯಾವ ಮಾರ್ಕೆಟಿಂಗ್ ಸಹಕಾರಿ ಸಂಘಸಂಸ್ಥೆಗಳಿಗೆ ಕೊಟ್ಟಿದ್ದಾರೆ, ಆ ಹಣ ಇನ್ನೂ ಮರುಪಾವತಿಯಾಗಿಲ್ಲ. ಹೊಸದಾಗಿ ಹಣ ಕೊಡುವುದಕ್ಕೆ ಎಲ್ಲಿ ಶಕ್ತಿ ಇದೆ. ಲೋನ್‌ಗಳನ್ನು ಅವರೇ ತುಂಬಬೇಕು ಎಂದರೆ ಶಕ್ತಿ ಎಲ್ಲಿ ಇದೆ. ಆದ್ದರಿಂದ ಸರ್ಕಾರ ಹಣವನ್ನು ನೇರವಾಗಿ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಸರ್ಕಾರ ನೇರವಾಗಿ ಕೊಟ್ಟರೆ ಏನು ? ಸರ್ಕಾರ ಬೇರೆಯುವರಿಂದ ಕೊಡಿಸಿದರೆ ಏನು ? ಬಡ್ಡಿ ಕೊಟ್ಟರೆ ಏನು ? ಎಲ್ಲ ಸರ್ಕಾರದ್ದು ಹಣ.

ಶ್ರೀ ಎಂ.ಸಿ. ನಾಣಯ್ಯ.—ಸರ್ಕಾರದ ಹಣ ಅಪೆಕ್ಸ್ ಬ್ಯಾಂಕ್, ಡಿಸಿಸಿ ಬ್ಯಾಂಕ್ ಮುಖಾಂತರ ಕೊಡುತ್ತೇವೆ ಎನ್ನುವುದು ಸರ್ಕಾರದ ವಾದವೇ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅಪೆಕ್ಸ್ ಬ್ಯಾಂಕ್ ಕೊಡತಕ್ಕಂಥ ಹಣಕ್ಕೆ ಬಡ್ಡಿ ನಾವು ಕೊಡುತ್ತೇವೆಂದರೆ ನಾವೇ ಕೊಟ್ಟಂತಾಗುವುದಿಲ್ಲವೇ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಪಿನಲ್ ಇಂಟರೆಸ್ಟನ್ನು ಹಾಕಬೇಕೆನ್ನುವ ಸರ್ಕಾರದ ಉದ್ದೇಶ ಏನಿದೆ, ಇದು ರೈತರ ಹಿತ ಆಗಬೇಕು ಎನ್ನುವ ಉದ್ದೇಶದಿಂದ ಮಾಡಿದ್ದು ಎಂಬುದು ಸ್ವೀಕಾರವಾಯಿತು, ಈವಾಗ ಜೂನ್ ೩೦ನೇ ತಾರೀಖಿಗೆ ಇದು ಮುಕ್ತಾಯವಾಗಿದೆ. ಇಷ್ಟು ಕಡಿಮೆಕಾಲದಲ್ಲಿ ಹಣ ಕಲೆಕ್ಟ್ ಮಾಡಲಿಕ್ಕೆ ಸಾಧ್ಯವಾಗದ ಕಾರಣ ಡಿಸೆಂಬರ್ ೩೧ನೇ ತಾರೀಖುವರೆಗೆ ಮುಂದುವರೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರು ಗಮನಕ್ಕೆ ತಂದಿದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಪ್ರತಿಯೊಂದು ಶುಗರ್ ಫ್ಯಾಕ್ಟರಿಯಿಂದಲೂ ಒಂದು ಕೋಟಿ ರೂಪಾಯಿನಿಂದ ಹಿಡಿದು ನಾಲ್ಕು ಕೋಟಿ ರೂಪಾಯಿಗಳವರೆಗೆ ಪರ್ಚೇಸಿಂಗ್ ಟ್ಯಾಕ್ಸ್ ಎಂದು ತೆಗೆದು ಕೊಂಡಿರುತ್ತಾರೆ. It is an understanding between the Chairman of the Sugar factories that 4 per cent will be spent on the roads connacting sugar factories. ಅದಕ್ಕಾಗಿ ಸ್ಪಷ್ಟವಾಗಿ ಕೇಳುತ್ತಿದ್ದೇನೆ, ಸಹಕಾರಿ ಮಂತ್ರಿಗಳಾದ ತಾವು ನಮಗೆ ಪ್ರೊಟೆಕ್ಷನ್ ಕೊಡಬೇಕು. ಸಹಕಾರಿ ಶುಗರ್ ಫ್ಯಾಕ್ಟರಿಯ ಸುತ್ತಮುತ್ತ ಊರುಗಳು ಏನು ಇರುತ್ತವೆ, ಅಲ್ಲಿನ ರಸ್ತೆಗಳಿಗೆ ಈವರ್ಷ ಹಣವನ್ನು ಖರ್ಚುಮಾಡಲಿಕ್ಕೆ ಪಿ.ಡಬ್ಲ್ಯುಡಿಗೆ ಹೇಳಬೇಕು. ಎರಡನೆಯದಾಗಿ, ಕ್ರಾಪ್ ಇನ್‌ಶೂರೆನ್ಸ್ ಸ್ಕೀಮ್‌ನ್ನು ಜಾರಿಗೆ ಕೊಡುವಾಗ ಬೀದರ್ ಡಿಸ್ಟ್ರಿಕ್ಟ್‌ನ್ನು ತೆಗೆದುಕೊಂಡಿಲ್ಲ, ಬೀದರ್ ಡಿಸ್ಟ್ರಿಕ್ಟ್‌ನ ಒಂದು ತಾಲ್ಲೂಕನ್ನು ತೆಗೆದುಕೊಳ್ಳಬೇಕು. ಎಕ್ಸ್‌ಪೆರಿಮೆಂಟ್ ಮಾಡುವಾಗ ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲಿ ಎಷ್ಟು ತಾಲ್ಲೂಕ್‌ಗಳನ್ನು ಯಾವ ಆಧಾರದ ಮೇಲೆ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಮ್ಮ ಉತ್ತರದಲ್ಲಿ ತಿಳಿಸಬೇಕು.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಈಗ ಶುಗರ್ ಸೆಸ್‌ನಿಂದ ಬರತಕ್ಕಂಥ ಹಣವನ್ನು ಉಪಯೋಗ ಮಾಡಿಕೊಳ್ಳಲು ಪಿಡಬ್ಲ್ಯುಡಿ ಮಿನಿಸ್ಟರ್.ಹತ್ತಿರ ಮಾತನಾಡಬೇಕೆಂದು ಹೇಳಿದರು. ನಾನು ಪಿಡಬ್ಲ್ಯುಡಿ ಮಂತ್ರಿಗಳ ಮತ್ತು ಅರ್ಥಮಂತ್ರಿಗಳೊಡನೆ ಮಾತನಾಡಿ ಯಾವ ಯಾವ ರಸ್ತೆಗಳನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ. ಇದು ಒಂದು ಪಾಲಿಸಿ ಮ್ಯಾಟರ್, ನನ್ನಲ್ಲಿ ಹಣವಿಲ್ಲ. ನನ್ನಲ್ಲಿ ಹಣವಿದ್ದಿದ್ದರೆ ಆಯಾ ಶುಗರ್ ಫ್ಯಾಕ್ಟರಿಗಳಿಗೆ ರಸ್ತೆಗಳ ರಿಪೇರಿ. ನಿರ್ಮಾಣ ಕಾರ್ಯಕ್ಕೆ ಕೊಡಬಹುದಾಗಿತ್ತು. ಆದ್ದರಿಂದ ಈ ಬಗ್ಗೆ ಅರ್ಥಮಂತ್ರಿಗಳ ಜೊತೆ ಮಾತನಾಡಿ ಯಾವರೀತಿ ಮಾಡಬೇಕು ಅದನ್ನು ಮಾಡುತ್ತೇನೆ. ಮತ್ತು ತಾವು ಹೇಳಿದಹಾಗೆ ಪೀನಲ್ ಇಂಟರೆಸ್ಟ್ ಹಾಸ್ಯಾಸ್ಪದ ಸ್ಥಿತಿಯಂಥದ್ದು ಇರುತ್ತದೆ. ಅದನ್ನು ಸರ್ಕಾರದವರು ಮುಂದುವರಿಸ ಬೇಕೆ ಅಥವಾ ಬೇಡವೇನ್ನುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದಾರೆ. ಇನ್ನು ಕ್ರಾಪ್ ಇನ್‌ಶೂರೆನ್ಸ್ ಬಗ್ಗೆ ಯಾವ ಯಾವ ತಾಲ್ಲೂಕ್‌ಗಳಲ್ಲಿ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಕೂಡ ತೀರ್ಮಾನವಾಗಿರುತ್ತದೆ. ಮೊದಲನೆಯ ಮೀಟಿಂಗ್ ಈ ತಿಂಗಳ ೨೮ನೇ ತಾರೀಖು ಕರೆದಿದ್ದೇನೆ. ಯಾವ ಯಾವ ಜಿಲ್ಲೆಗೆ ತೆಗೆದುಕೊಳ್ಳಬೇಕು, ಯಾವ ಯಾವ ನಾರಮ್ಸ್ ಇವೆ. ಅದನ್ನು ಕನ್‌ಸಿಡರ್ ಮಾಡಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಾರಿಗೌಡ ಶಂಕರಗೌಡ ಪಾಟೀಲ್.—ಹೊಗೆಸೊಪ್ಪಿಗೆ ೬ ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಲು ಸರ್ಕಾರ ಒಪ್ಪಿಕೊಂಡಿತ್ತು. ಆ ಹಣವನ್ನು ಕೊಡದಿದ್ದರೆ ಯಾವಾಗ ಕೊಡುತ್ತೀರಿ ?.

MR. DEPUTY SPEAKER.—I request the Hon'ble Minister for Co-operation to make a note of suggestions of all the Members and then reply at once.

ಶ್ರೀ ಎಚ್. ಶಿವಪ್ಪ.—ಈಗಿನ ಕಾನೂನು ಪ್ರಕಾರ ಸಹಕಾರ ಸಂಸ್ಥೆಗಳಲ್ಲಿ ಸಾಲ ತೆಗೆದುಕೊಂಡು ಬಾವಿ ತೆಗೆಸಿ ೫೦೦ ಗ್ಯಾಲನ್ ನೀರು ಬಂದರೆ ಸಕ್ಸಸ್‌ಫುಲ್ ಬಾವಿಯೆಂದು ತೀರ್ಮಾನವಾಗುತ್ತದೆ. ೫೦೦ ಗ್ಯಾಲನ್ ನೀರನ್ನು ಉಪಯೋಗಿಸಿಕೊಂಡು ಯಾವ ರೈತನೂ ನೀರಾವರಿ ವ್ಯವಸಾಯ - ಮಾಡುವುದಕ್ಕಾಗುವುದಿಲ್ಲ. ಆದಕಾರಣ ೫೦೦ ಗ್ಯಾಲನ್‌ನಿಂದ ೧ ಸಾವಿರ ಗ್ಯಾಲನ್ ನೀರು ಬಂದರೆ ಅಂತಹ ಬಾವಿಗಳು ಸಕ್ಸಸ್‌ಫುಲ್ ಬಾವಿಗಳೆಂದು ಒಂದು ತೀರ್ಮಾನ ಮಾಡಬೇಕೆಂದು ಸಹಕಾರ ಮಂತ್ರಿಗಳಿಗೆ ಕೇಳಿದ್ದೇನೆ ಅದಕ್ಕೆ ವಿವರಣೆ ಹೇಳಿಲ್ಲ.

ಶ್ರೀ ಆನಂದಕುಂದ ಹೆಗ್ಡೆ.—ಸಕ್ಕರೆ ಕಾರ್ಖಾನೆಗಳನ್ನು ಎಲ್ಲೆಲ್ಲಿ ಮಾಡಿದ್ದೀರಿ ? ಅವುಗಳು ಯಾವ ಸ್ಟೇಜ್‌ನಲ್ಲಿವೆ ಎಂಬುದನ್ನು ಹೇಳಬೇಕು.

ಶ್ರೀ ಎಚ್.ಟಿ. ಕೃಷ್ಣಪ್ಪ.—ಸಹಕಾರ ಸಂಘಗಳಿಂದ ಬಾವಿ ತೋಡಿಸಲು ಸಾಲ ತೆಗೆದುಕೊಂಡು ಬಾವಿಗಳು ಫೇಲಾದರೆ ಅವುಗಳಿಗೆ ಏನು ರಿಯಾಯಿತಿ ಕೊಡುತ್ತೀರಿ ? ರಿಯಾಯಿತಿ ಕೊಡುವುದಾದರೆ ಅದು ರೈತನಿಗೆ ಇನ್ನೂ ತಲುಪಿಲ್ಲ, ಈ ಬಗ್ಗೆ ಸ್ಪಷ್ಟವಾದ ನಿರೂಪವನ್ನು ಹೊರಡಿಸಿ, ಯಾವ ಬಾ

ಗುಲ್ಲಿ ನೀರು ಬರುತ್ತಿಲ್ಲ, ಅಂತಹ ಬಾವಿಗಳ ಬಗ್ಗೆ ಏನು ತೀರ್ಮಾನಕ್ಕೆ ಬರುತ್ತೀರಿ ಎಂಬುದನ್ನು ಯೋಚನೆ ಮಾಡುತ್ತೀರಾ ?.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರುಗಳಾದ ಶಿವಪ್ಪ ಮತ್ತು ಕೃಷ್ಣಪ್ಪನವರು ಹೇಳಿದ ವಿಷಯದ ಬಗ್ಗೆ ದೀರ್ಘವಾಗ ಚರ್ಚೆಯಾಗಿದೆ. ಬಾವಿಗಳು ಫೇಲಾದಾಗ ಹೆಚ್ಚಿನ ರಿಯಾಯಿತಿ ದೊರೆತಿಲ್ಲ, ಇನ್ನೂ ಸಹಾಯಕ ದೊರೆತಿಲ್ಲ, ರಿಯಾಯಿತಿ ದೊರೆಯಬೇಕಾದರೆ ಪುನರ್ ಪರಿಶೀಲನೆ ಮಾಡಿಸಬೇಕು. ಸರ್ಕಾರದ ಆಜ್ಞೆ ಹೊರಡಿಸಿ ಪುನರ್ ಪರಿಶೀಲನೆ ಮಾಡಬೇಕಾದರೆ ವರ್ಷಾನುಗಟ್ಟಲೆ ಹಿಡಿಯುತ್ತದೆ. ರೈತರ ಮನೆಗಳ ಹತ್ತಿರ ಬ್ಯಾಂಕ್‌ಗಳವರು ಹೋಗಿ ತನಿಖೆ ಮಾಡಿ ಯಾವ ಮಟ್ಟದಲ್ಲಿದೆ ಎಂಬುದನ್ನು ವರದಿ ಮಾಡಬೇಕು, ಇದರಿಂದ ರಿಯಾಯಿತಿ ಕೊಡುವುದು ನಿಧಾನವಾಗಿದೆ. ಇನ್ನು ಬ್ಯಾಂಕ್‌ನವರು ರೈತರ ಮನೆಗಳ ಹತ್ತಿರ ಹೋಗಿ ಜಫ್ತಿ ಮಾಡಿ ರೈತರಿಗೆ ತೊಂದರೆಗಳನ್ನು ಕೊಡತಕ್ಕದ್ದರ ಬಗ್ಗೆ ಇವತ್ತು ಬಹಳಷ್ಟು ಚರ್ಚೆ ಮಾಡಿದ್ದಾರೆ. ಅದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ಎಷ್ಟರಮಟ್ಟಿಗೆ ಕಾನೂನನ್ನು ಮಾಡಬಹುದೆಂದು ನಾನು ಯೋಚನೆ ಮಾಡುತ್ತಿದ್ದೇನೆ. ಅದು ಡಿಟೈಲ್ ಆಗಿ ತೀರ್ಮಾನವಾಗಬೇಕಾದರೆ ನನ್ನ ಸಹದ್ಯೋಗಿ ಮಂತ್ರಿಗಳ ಹತ್ತಿರ ಮಾತುಕತೆ ನಡೆಸಬೇಕು.

ಶ್ರೀ ಎಚ್.ಟಿ. ಕೃಷ್ಣಪ್ಪ.—ತಾವು ಪರಿಶೀಲನೆ ಮಾಡುವ ತನಕ ವಸೂಲಾತಿ ಕ್ರಮವನ್ನು ತಡೆಹಿಡಿಯಬಹುದಲ್ಲ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಇವತ್ತು ಬಾವಿ ತೋಡಬೇಕಾದರೆ ಭೂಗರ್ಭ ತಜ್ಞರ ಶಿಫಾರಸ್ಸಿನ ಮೇಲೆ ಅವರು ಸರ್ಟಿಫಿಕೇಟ್ ಕೊಟ್ಟಮೇಲೆ ಬಾವಿ ತೋಡಲಾಗುತ್ತದೆ. ಆದರೂ ಬಾವಿಗಳು ಫೇಲಾದರೆ ಏನು ಮಾಡುವುದಕ್ಕೆ ಆಗುವುದಿಲ್ಲ ವಸೂಲಾತಿ ಕ್ರಮವನ್ನು ನಿಲ್ಲಿಸವುದಕ್ಕೆ ಪ್ರಯತ್ನ ಮಾಡುತ್ತೇನೆ. ಸೊಸೈಟಿಗಳವರಿಗೆ ಕೊಟ್ಟಿರತಕ್ಕ ಹಣ ಸರ್ಕಾರದ್ದು. ಸಹಕಾರ ಬ್ಯಾಂಕ್‌ಗಳು, ಅಪೆಕ್ಸ್‌ಬ್ಯಾಂಕ್ ಜಿಲ್ಲಾ ಬ್ಯಾಂಕ್‌ಗಳು ಪಡೆದಿರತಕ್ಕ ಹಣಕ್ಕೆ ಸರ್ಕಾರ ಗ್ಯಾರಂಟಿ ನಿಂತಿದೆ, ಆದ್ದರಿಂದ ಇದಕ್ಕೆ ತೊಂದರೆ ಏನೂ ಆಗುವುದಿಲ್ಲ.

ಶ್ರೀ ಎಂ.ಎಸ್. ಪಾಟೀಲ್.—ಸರ್ಕಾರ ಗ್ಯಾರಂಟಿ ನಿಂತು ಹಣವನ್ನು ಕೊಟ್ಟಿದ್ದಲ್ಲಿ ಇಂತಹ ಸಂದರ್ಭ ಬಂದಾಗ ವಜಾ ಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈಗಾಗಲೇ ಎನ್.ಸಿ.ಡಿ.ಸಿ ಯವರು ಇದನ್ನು ಪರಿಶೀಲನೆ ಮಾಡುತ್ತಿದ್ದಾರೆ, ಇದರಿಂದ ತೊಂದರೆ ಏನು ಆಗುವುದಿಲ್ಲ.

ಶ್ರೀ ಜಿ.ಕೆ. ತಕ್ಕೇದ್ —ನಾನು ನಿನ್ನೆ ಭಾಷಣ ಮಾತುವಾಗ ಮಾನ್ಯಮಂತ್ರಿಗಳವರಲ್ಲಿ ಬಹಳ ಕಳಕಳಿಯಿಂದ ಕೇಳಿಕೊಂಡಿದ್ದೇನೆ. ಸವದತ್ತಿಯಲ್ಲಿ ಸುಮಾರು ೫ ವರ್ಷಗಳಿಂದ ಪ್ರೆಸ್ಸಿಂಗ್ ಫ್ಯಾಕ್ಟರಿ ಮಾಡಬೇಕೆಂದು ಕೇಳಿದ್ದೆ. ಅದಕ್ಕೆ ಉತ್ತರ ಹೇಳಿಲ್ಲ ಈಗಾಗಲೇ ಅಲ್ಲಿ ಜಿನ್ನಿಂಗ್ ಫ್ಯಾಕ್ಟರಿ ಇದೆ. ಪ್ರೆಸ್ಸಿಂಗ್ ಫ್ಯಾಕ್ಟರಿ ಮಾಡಿದರೆ ಆ ಭಾಗದ ರೈತರಿಗೆ ಅನುಕೂಲವಾಗುತ್ತದೆ. ಫ್ಯಾಕ್ಟರಿ ಮಾಡಲಿಕ್ಕೆ ಸ್ಥಳ ಇದೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ —ಅದರ ಬಗ್ಗೆ ಈಗಾಗಲೇ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಲಾಗಿದೆ. ಫ್ಯಾಕ್ಟರಿಯನ್ನು ಮಂಜೂರು ಮಾಡಿಸುವ ಭರವಸೆಯನ್ನು ನಿಮಗೆ ಕೊಡುತ್ತೇನೆ.

ಶ್ರೀ ಟಿ. ತಿಮ್ಮಪ್ಪ ಹೆಗ್ಡೆ.—ಸಾಲ ಮರುಪಾವತಿ ಮಾಡಿರುವ ರೈತನಿಗೆ ಪುನಃ ಸಾಲ ಸಿಗುವ ವ್ಯವಸ್ಥೆಯಾಗಬೇಕೆಂದು ಶ್ರೀ ನಾಸಯ್ಯನವರು ಪ್ರಸ್ತಾಪ ಮಾಡಿದ್ದಾರೆ. ಅವರ ಬಗ್ಗೆ ಏನೂ ಹೇಳಿಲ್ಲ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈಗಾಗಲೇ ನಾನು ಉತ್ತರದಲ್ಲಿ ಹೇಳಿದ್ದೇನೆ. ಮಾನ್ಯ ಸದಸ್ಯರು ಇರಲಿಲ್ಲ. ನಮ್ಮ ಅರ್ಥ ಮಂತ್ರಿಗಳು ಇಲ್ಲೇ ಇದ್ದಾರೆ, ವೀಕ್ ಆಗಿರತಕ್ಕ ಬ್ಯಾಂಕ್‌ಗಳಿಗೆ ೨೫ ಲಕ್ಷ ರೂಪಾಯಿ ಸ್ಟಾಫ್ ಲೋನನ್ನು ಸರ್ಕಾರ ಕೊಡುವುದರಿಂದ, ಯಾರು ಹಣವನ್ನು ಮರುಪಾವತಿ ಮಾಡಿರುತ್ತಾರೆ ಅಂತಹವರಿಗೆ ಸಾಲ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಸರ್ಕಾರ ಸಾಫ್ಟ್ ಲೋನ್ ಮಂಜೂರು ಮಾಡಿದೆ.

ಶ್ರೀ ಎ. ಬಿ. ಪಾಟೀಲ್.—ಹೊಸದಾಗಿ ಸಕ್ಕರೆ ಕಾರ್ಖಾನೆಗಳು ಯಾವ್ಯಾವು ಆಗಿವೆ. ಅವು ಯಾವ ಸ್ಟೇಜ್‌ನಲ್ಲಿವೆ ಎಂಬುದನ್ನು ಹೇಳಬೇಕು ?

ಶ್ರೀ ಪಿ. ರಾಮದೇವ್.—ನಾನು ಮಾತನಾಡುವಾಗ ಸುಮಾರು ೬೦ ಸಾವಿರ ಸಹಕಾರ ಕ್ಷೇತ್ರದ ಸಿಬ್ಬಂದಿವರ್ಗಕ್ಕೆ ಯುನಿಫಾರಂ ಸ್ಕೇಲ್ ಅಂದರೆ ಎಚ್. ಆರ್. ಎ. ಸಿ. ಸಿ. ಎ. ಫ್ಯಾಮಿಲಿ ಬೆನಿಫಿಟ್ ಸ್ಕೀಮ್ ಗ್ರಾಚುಯಿಟಿ, ಫ್ರಾವಿಡೆಂಟ್ ಫಂಡ್ ಇವುಗಳಿಗೆಲ್ಲಾ ಇವರಿಗೂ ಅನ್ವಯವಾಗುವಂತೆ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ? ಅದರ ಬಗ್ಗೆ ತಮ್ಮ ಅಭಿಪ್ರಾಯ ಏನೆಂಬುದನ್ನು ನಾನು ಕೇಳಿದ್ದೇನೆ. ಅದಕ್ಕೆ ಉತ್ತರ ಹೇಳಿಲ್ಲ. ಲ್ಯಾಂಡ್ ಡೆವೆಲಪ್‌ಮೆಂಟ್ ನೌಕರರ ಬಗ್ಗೆ ಹೇಳಿದ್ದೇನೆ. ತಮ ಸಹಕಾರ ಇಲಾಖೆಯ ಕಾರ್ಯ ಚಟುವಟಿಕೆಯ ಬಗ್ಗೆ ಕಾಮೆಂಟ್ ಮಾಡಿದ್ದೇನೆ.

MR. DEPUTY SPEAKER.—I think, yesterday the Hon'ble Minister has replied on the floor of the House.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಪಟೇಲ್‌ರವರು ಕೇಳಿದ ವಿಷಯ ಪ್ರೋಸೆಸ್ ಆಗುತ್ತಿದೆ applications under process are to be sent to Government of India for issue of letter of intent.

ನಾರಾಯಣ್ ಜಾ ಎಸ್.ಎಸ್.ಕೆ. ಅಮರ್ ಜಾ, ಎಸ್.ಎಸ್.ಕೆ , ಬಿಜಾಪುರ ಜಿಲ್ಲಾ, ಭಾಗ್ಯಲಕ್ಷ್ಮಿ ಎಸ್.ಎಸ್.ಕೆ. ಬೆಳಗಾಂ ಜಿಲ್ಲಾ, ಅರ್ಕಾವತಿ ಎಸ್.ಎಸ್.ಕೆ. ಬೆಂಗಳೂರು ಜಿಲ್ಲಾ ಬಸವ ಕಲ್ಯಾಣ ಬೀದರ್ ಜಿಲ್ಲಾ, ಇಂಡಿ, ಸಿಂಧಗಿ, ಮುಧೋಳ್ ಬಿಜಾಪುರ ಜಿಲ್ಲಾ, ಸೋಮವಾರಪೇಟೆ ಮಡಿಕೇರಿ ಜಿಲ್ಲಾ, ಅರಕಲಗೂಡು, ಹಾಸನ ಜಿಲ್ಲಾ, ಪಿರಿಯಾಪಟ್ಟಣ, ಹೆಗ್ಗಡದೇವನಕೋಟೆ ಗುಂಡ್ಲುಪೇಟೆ, ಮೈಸೂರು ಜಿಲ್ಲಾ ಈ ಬಗ್ಗೆ Proposals are pending before the Government of Karnataka for collection of share capital etc.

ಮಾನ್ಯ ಅಧ್ಯಕ್ಷರೇ, ಇಷ್ಟು ಹೇಳಿ, ಮಾನ್ಯ ಸದಸ್ಯರು ಏನು ನಮ್ಮ ಇಲಾಖೆಯ ಬಗ್ಗೆ ಸಲಹೆ ಹಾಗೂ ತಿಳಿವಳಿಕೆಗಳನ್ನು ಕೊಟ್ಟಿದ್ದಾರೆ, ಅದನ್ನೆಲ್ಲಾ ಖಂಡಿತವಾಗಿಯೂ ಅನುಷ್ಠಾನದಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ಕಾರಣದಿಂದ ಈ ಒಂದು ಹಣಕಾಸಿನ ಬೇಡಿಕೆಯನ್ನು ಸರ್ವಾನುಮತದಿಂದ ಒಪ್ಪಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಸುಧೀಂದ್ರರಾವ್ ಕಸಬೆ (ಮಾರುಕಟ್ಟೆ ಮತ್ತು ಮುಜರಾಯಿ ಖಾತೆಗಳ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ಕ್ರಮಪಡಿಸಿದ ಮಾರುಕಟ್ಟೆ ಇಲಾಖೆಯ ಬಗ್ಗೆ ಮಂಡಿಸಿದಂಥ ಬೇಡಿಕೆಗಳ ಬಗ್ಗೆ ಕೆಲವು ಮಾನ್ಯ ಸದಸ್ಯರು ಒಳ್ಳೆಯ ಅಮೂಲ್ಯವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತೆ ಕೆಲವು ಮಾನ್ಯ ಸದಸ್ಯರು ಈ ಇಲಾಖೆಯ ಪ್ರಗತಿ ಬಹಳ ಕುಂಠಿತವಾಗಿದೆ, ಇದು ಇನ್ನೂ ಹೆಚ್ಚಿನ ಕ್ರಿಯಾಶೀಲವಾಗಬೇಕು ಎಂಬತಕ್ಕಂಥ ಸಲಹೆಯನ್ನು ಸಹ ಕೊಟ್ಟಿದ್ದಾರೆ. ಕೆಲವು ಮಾನ್ಯ ಸದಸ್ಯರು ನಾನು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಹೆಚ್ಚಿನ ಒಂದು ಕ್ರಿಯಾಶೀಲತೆಯಿಂದ ಕೆಲಸ ನಡೆದಿದೆ ಮತ್ತು ಪ್ರಗತಿಪರವಾದಂಥ ಹೆಜ್ಜೆಯನ್ನು ಇಡುತ್ತಿದೆ ಎಂದು ಹೇಳಿದರು. ಅದಕ್ಕಾಗಿ ನಾನು ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಈ ರೆಗ್ಯುಲೇಟೆಡ್ ಮಾರ್ಕೆಟ್ ಇಲಾಖೆಯು ಈ ದೇಶದ ಹಾಗೂ ಈ ರಾಜ್ಯದ ಬೆನ್ನೆಲುಬಾಗಿರುವಂತಹ ರೈತರ ಮತ್ತು ಗ್ರಾಹಕರ ಒಂದು ಸಂಪರ್ಕವಾಗಿ ಕೆಲಸ ಮಾಡುತ್ತಿದೆ. ರೈತರು ಬೆಳೆಯುವ ವ್ಯವಸಾಯ ಉತ್ಪನ್ನಗಳನ್ನು ರೆಗ್ಯುಲೇಟೆಡ್ ಮಾರುಕಟ್ಟೆಗಳ ಮೂಲಕ ಖರೀದಿ ಮಾಡಿ ಗ್ರಾಹಕರಿಗೆ ವಿತರಣೆ ಮಾಡುವ ಇಲಾಖೆಯಾಗಿ ಇದು ಕೆಲಸ ಮಾಡುತ್ತಿದೆ. ರೈತರು ಮಾರುಕಟ್ಟೆಗೆ ತರುವ ಉತ್ಪನ್ನಗಳಿಗೆ ನಮ್ಮ ಇಲಾಖೆಯು ಒಳ್ಳೆಯ ಬೆಲೆ ಒಳ್ಳೆಯ ತೂಕ ಹಾಗೂ ಒಳ್ಳೆಯ ಕ್ವಾಲಿಟಿಯನ್ನು ಕೊಡತಕ್ಕಂಥ ಒಂದು ತತ್ವವನ್ನು ಅವಲಂಬಿಸಿರುವ ಇಲಾಖೆಯಾಗಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ರೈತರು ಸುಮಾರು ೨೮ ನೂರು ಕೋಟಿ ರೂಪಾಯಿಗಳಷ್ಟು ಮಾಲನ್ನು ಉತ್ಪನ್ನ ಮಾಡುತ್ತಾರೆ. ಇದರಲ್ಲಿ ಇವರು ತಮ್ಮ ದಿನನಿತ್ಯದ ಬಳಕೆಗೆಂದು ಇಟ್ಟುಕೊಂಡು ನಂತರ ಇನ್ನುಳಿದ ಸುಮಾರು ೧೬ ನೂರು ಕೋಟಿ ರೂಪಾಯಿಗಳಷ್ಟು ಮಾಲನ್ನು ನಮ್ಮ ರಾಜ್ಯದಲ್ಲಿರುವಂತಹ ೧೧೩ ನಿಯಂತ್ರಿತ ಮಾರುಕಟ್ಟೆಗಳಿಗೆ ವ್ಯಾಪಾರ ಮಾಡಲು ತರುತ್ತಿದ್ದಾರೆ. ಈ ಕಾರಣದಿಂದ ಈ ಮಾರುಕಟ್ಟೆಗಳನ್ನು ಅಭಿವೃದ್ಧಿಗೊಳಿಸುವುದು ಅವಶ್ಯಕವಿದೆ ಎಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ನಾವು ೧೧ ಕೋಟಿ ೫೫ ಲಕ್ಷ ರೂ.ಗಳ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈ ಯೋಜನೆಯ ಮೂಲಕ ೪೭ ಮಾರುಕಟ್ಟೆಗಳನ್ನು ಪ್ರಗತಿಪರ ರೂಪದಲ್ಲಿ ತರಬೇಕೆಂದು ಹೊರಟಿದ್ದೇವೆ. ಈ ೧೧ ಕೋಟಿ ೫೫ ಲಕ್ಷ ರೂ.ಗಳ ಪೈಕಿ ವಿಶ್ವ ಬ್ಯಾಂಕ್‌ನವರು ಕೊಟ್ಟಿರು

ವುದು ಕೇವಲ ೬ ಕೋಟಿ ೪೦ ಲಕ್ಷ ರೂ.ಗಳು ಮಾತ್ರ. ೧ ಕೋಟಿ ೮೩ ಲಕ್ಷ ರೂ.ಗಳನ್ನು ಸ್ಥಳದ ಬ್ಯಾಂಕ್‌ಗಳ ಮೂಲಕ ಪಡೆದಿದ್ದೇವೆ. ೩ ಕೋಟಿ ೩೨ ಲಕ್ಷ ರೂ.ಗಳನ್ನು ನಮ್ಮ ರೆಗ್ಯುಲೇಟೆಡ್ ಮಾರು ಕಟ್ಟೆಗಳಿಂದ ಪಡೆದಿದ್ದೇವೆ. ಈ ರೀತಿ ಪಡೆದ ಹಣದಿಂದ ಈಗಾಗಲೇ ೩೯ ರೆಗ್ಯುಲೇಟೆಡ್ ಮಾರುಕಟ್ಟೆಗಳ ಪ್ರಗತಿಪರ ಕಾರ್ಯ ಪೂರ್ತಿಯಾಗಿದೆ. ನಾವು ಪಡೆದ ಹಣದಲ್ಲಿ ಈಗಾಗಲೇ ೨ ಕೋಟಿ ೫೨ ಲಕ್ಷ ರೂಪಾಯಿಗಳನ್ನು ಮರುಪಾವತಿ ಮಾಡಿದ್ದೇವೆ. ಇನ್ನುಳಿದ ಹಣವನ್ನು ಹತ್ತು ಕಂತುಗಳಲ್ಲಿ ಕೊಡ ಕೊಡಬಹುದಾದ್ದರಿಂದ, ನಾವು ವೇಳೆಗೆ ಸರಿಯಾಗಿ ಮರುಪಾವತಿ ಮಾಡುತ್ತಿದ್ದೇವೆ. ಈ ನಮ್ಮ ಇಲಾಖೆಯ ಮೇಲೆ ಶ್ರೀ ಎ. ಜಿ. ಕೊಡಗಿ, ಶ್ರೀ ದೇವೇಗೌಡ ಶ್ರೀ ಕಾಪು ಸಂಜೀವಶೆಟ್ಟಿ, ಶ್ರೀ ರಾಜೂ ಗೌಡ, ಶ್ರೀ ರಾಮಭಟ್. ಶ್ರೀ ಗಂಗಾಧರನ್, ಶ್ರೀ ತಕ್ಕೇದ್. ಶ್ರೀ ಪಿ. ಎನ್. ರೆಡ್ಡಿ ಅವರುಗಳು ಮಾತನಾಡಿ ಈ ಇಲಾಖೆಯಲ್ಲಿ ಏನೇನು ಪ್ರಗತಿ ಸಾಧಿಸಲಾಗಿದೆ ಎಂದು ಕೇಳಿದ್ದಾರೆ. ಅದಕ್ಕೆ ನಾನು ಉತ್ತರ ಕೊಡುತ್ತೇನೆ. ಈ ನಮ್ಮ ಇಲಾಖೆಯ ಮೂಲಕ ರೈತರು ಬೆಳೆದ ಮಾಲಿಗೆ ಒಳ್ಳೆಯ ತೂಕ ಮತ್ತು ಒಳ್ಳೆಯ ಬೆಲೆಯನ್ನು ಕೊಟ್ಟರೆ ಅವರ ಒಂದು ಆರ್ಥಿಕ ಪರಿಸ್ಥಿತಿಯೂ ಸಹ ಸುಧಾರಿಸುತ್ತದೆಂದು ಹೇಳುತ್ತೇನೆ. ನಮ್ಮಲ್ಲಿರುವ ರೆಗ್ಯುಲೇಟೆಡ್ ಮಾರುಕಟ್ಟೆಗಳ ಪೈಕಿ ಸುಮಾರು ೬೦ ಮಾರುಕಟ್ಟೆಗಳು ಸ್ಥಳಾಂತರಗೊಂಡು ತಮ್ಮ ಒಂದು ವ್ಯಾಪಾರವನ್ನು ನಡೆಸುತ್ತಿವೆ ಮತ್ತೆ ಕೆಲವು ಮಾರುಕಟ್ಟೆಗಳನ್ನು ಸರಿಯಾದ ಜಾಗಕ್ಕೆ ಸ್ಥಳಾಂತರ ಮಾಡಲು ಒಳ್ಳೆಯ ಸ್ಥಳ ಇನ್ನೂ ಸಿಕ್ಕಿಲ್ಲ. ಈ ದಿಶೆಯಲ್ಲಿ ನಾವು ಅತಿ ಜಾಗ್ರತೆಯಿಂದ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತೇವೆ. ಈಗಾಗಲೇ ನಾನು ಹೇಳಿದಂತೆ ರೈತರ ಒಂದು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಕೆಲಸ ಮಾಡುತ್ತಿರುವ ಪೈಕಿ ನಮ್ಮ ಇಲಾಖೆಯೂ ಸಹ ಒಂದಾಗಿದೆ. ನಾವು ರೈತರು ಬೆಳೆದ ಮಾಲಿಗೆ ಒಳ್ಳೆಯ ಬೆಲೆ. ಒಳ್ಳೆಯ ತೂಕ ಹಾಗೂ ಒಳ್ಳೆಯ ಕ್ವಾಲಿಟಿಯನ್ನು ಕೊಡದಿದ್ದರೆ ಅವರಿಗೆ ಹಂತ ಹಂತದಲ್ಲಿಯೂ ಕೊಡಲಿಪೆಟ್ಟು ಬೀಳುತ್ತದೆ. ಇವನ್ನು ನಾವು ಗಮನದಲ್ಲಿಟ್ಟುಕೊಂಡು ಇವರುಗಳಿಗೆ ಹಂತ ಹಂತವಾಗಿ ಸಹಾಯ ಮಾಡಲು ನಾವು ಅನೇಕ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿದ್ದೇವೆ. ಮಾರ್ಕೆಟ್-ಯಾರ್ಡ್ ಕನಿಷ್ಠಪಕ್ಷ ೨೦ ರಿಂದ ೩೦ ಕಿಲೋಮೀಟರ್ ದೂರದೊಳಗೆ ಇರಬೇಕೆಂದು ನೋಟಿಫಿಕೇಷನ್ ಆಗಿದೆ. ಇದರಿಂದ ಸಣ್ಣ ಸಣ್ಣ ರೈತರೂ ಸಹ ತಾವು ಬೆಳೆದ ಮಾಲನ್ನು ಇಲ್ಲಿಗೆ ತರಲು ಅನುಕೂಲವಾಗುತ್ತದೆ. ಮಾನ್ಯ ದೇವೇಗೌಡರು ಸಣ್ಣ ಪುಟ್ಟ ರೈತರ ಕಡೆಗೆ ನಾವು ಗಮನ ಕೊಟ್ಟಿಲ್ಲವೆಂದು ಹೇಳಿದರು. ಆದರೆ ಇದು ಸರಿಯಲ್ಲ ಸಣ್ಣ ಪ್ರಮಾಣದ ರೈತರು ಶೇಕಡಾ ೯೦ ರಷ್ಟು ಇದ್ದಾರೆ. ದೊಡ್ಡ ಪ್ರಮಾಣದ ರೈತರು ಶೇಕಡಾ ಹತ್ತರಷ್ಟು ಇದ್ದಾರೆ. ಇವರು ೩೦ ಕ್ವಿಂಟಾಲ್‌ನಷ್ಟು ಧಾನ್ಯವನ್ನು ಮಾರುಕಟ್ಟೆಗೆ ತಂದರೆ ಸಣ್ಣಪುಟ್ಟ ರೈತರು ೩ ರಿಂದ ೫ ಕ್ವಿಂಟಾಲ್‌ನಷ್ಟು ಮಾತ್ರ ಧಾನ್ಯವನ್ನು ತರುತ್ತಾರೆ. ಕೆಲವು ಸಂದರ್ಭಗಳಲ್ಲಿ ಇವರುಗಳು ಏನು ಮಾಡುತ್ತಾರೆಂದರೆ, ಮಾರುಕಟ್ಟೆ ದೂರದಲ್ಲಿದೆ ಮತ್ತು ಸಾಗಿಸಲು ವಾಹನ ಸೌಲಭ್ಯವಿಲ್ಲವೆಂಬ ಕಾರಣದಿಂದ ಸ್ಥಳದಲ್ಲಿಯೇ ಮಾರಾಟ ಮಾಡಿಬಿಡುತ್ತಾರೆ. ಇದರಿಂದ ಇವರಿಗೆ ಹೆಚ್ಚಿನ ಬೆಲೆ ಸಿಗುವುದಿಲ್ಲ ಇದನ್ನು ಗಮನದಲ್ಲಿಟ್ಟುಕೊಂಡು ಇವರುಗಳಿಗೆ ವಾಹನ ಸೌಲಭ್ಯವನ್ನು ಒದಗಿಸುವ ಬಗ್ಗೆ ನಾವು ಒಂದು ಯೋಜನೆಯನ್ನು ರೂಪಿಸುತ್ತಿದ್ದೇವೆ.

೨-೩೦ ಪಿ. ಎಂ.

ಅಷ್ಟೇ ಅಲ್ಲದೆ ಈಹೊತ್ತಿನ ದಿವಸ ಈ ರೈತನ ಒಂದು ಉಪಯೋಗಕ್ಕಾಗಿ ಪ್ಯಾಕೇಜ್ ಸಿಸ್ಟಂ ಒಂದನ್ನು ತರಬೇಕೆಂದು ಮಾಡಿದ್ದೇವೆ. ರೈತರು ತಾವು ಬೆಳೆದ ಧಾನ್ಯವನ್ನು ಜಮೀನಿನಿಂದ ೧೦ ಕ್ವಿಂಟಾಲ್ ಭತವನ್ನೋ ಅಥವಾ ರಾಗಿಯನ್ನೋ ಮನೆಗೆ ತರಬೇಕಾದರೆ ಅವರ ಹತ್ತಿರ ಚೀಲ ಇರುವುದಿಲ್ಲ ಚೀಲ ಇದ್ದರೂ ಒಂದು ಸೀಸನ್‌ಗೆ ಮಾತ್ರ ಬರುತ್ತದೆ, ಇನ್ನೊಂದು ಸೀಸನ್‌ನವರೆಗೆ ಬರುವುದಿಲ್ಲ. ಒಂದು ಚೀಲಕ್ಕೆ ೬ ರಿಂದ ೭ ರೂಪಾಯಿಯವರೆಗೆ ಬೆಲೆ ಇದೆ. ಆದುದರಿಂದ ರೈತರ ಉಪಯೋಗಕ್ಕಾಗಿ ಒಂದು ಪ್ಯಾಕೇಜ್ ಸಿಸ್ಟಂನ್ನು ಜಾರಿಗೆ ತರಬೇಕು ಎನ್ನುವ ಯೋಜನೆ ಮಾಡಿಕೊಂಡಿದ್ದೇವೆ.

ಇನ್ನು ನಮ್ಮ ರೈತ ಬೆಳೆದಂಥಾ ಪದಾರ್ಥಗಳನ್ನು ಸರಿಯಾದ ಒಂದು ಬೆಲೆ ಬಂದಾಗ ಮಾರಾಟ ಮಾಡುವವರೆಗೆ ಸಂಗ್ರಹಣೆ ಮಾಡಲು ೨೭೦ ಟನ್ ಹಿಡಿಯುವಂಥಾ ಗೋಡೌನ್ ಅನ್ನು ಗ್ರಾಮಾಂತರ ಪ್ರದೇಶದಲ್ಲಿ ಕಟ್ಟಿಸಿಕೊಡುವ ಒಂದು ಯೋಜನೆಯನ್ನು ಕೇಂದ್ರ ಸರ್ಕಾರದ ಒಂದು ಯೋಜನೆ ಮೇರೆಗೆ ನಾವು ಹಾಕಿಕೊಂಡಿದ್ದೇವೆ. ಹಳ್ಳಿಗಳಲ್ಲಿ ರೈತರು ಬೆಳೆದ ಪದಾರ್ಥಗಳನ್ನು ಮಾರಾಟ ಮಾಡುವುದಕ್ಕೆ ಅದನ್ನು ಸಂಗ್ರಹಣೆ ಮಾಡಲು ಸರಿಯಾದಂಥಾ ಸ್ಥಳ ಇಲ್ಲ, ಎನ್ನುವುದು ಎಲ್ಲರಿಗೂ ಗೊತ್ತಿದೆ, ಅವರು

ಜೋಪಡಿಗಳಲ್ಲಿ ವಾಸ ಮಾಡುತ್ತಾ ಇರುವುದು, ಅಲ್ಲಿ ಇಲಿ ಹೆಗ್ಗಣಗಳು ಸೇರಿಕೊಂಡು ಅವರು ಸಂಗ್ರಹಣೆ ಮಾಡಿಟ್ಟಿದ್ದನ್ನು ತಿಂದುಬಿಡುತ್ತವೆ. ಅನ್ನುವುದೂ ತಮಗೆಲ್ಲಾ ಗೊತ್ತಿದೆ. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ಗೋಡೌನ್‌ಗಳನ್ನು ಕಟ್ಟಿಸಿಕೊಡುವಂಥಾ ಒಂದು ಯೋಜನೆಯನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಎಂ. ಸಿ. ನಾನಯ್ಯ.—ಯಾವ ಹೆಗ್ಗಣಗಳು ಸ್ವಾಮಿ?

ಶ್ರೀ ಸುಧೀಂದ್ರರಾವ್ ಕಸಬೆ.—೪ ಕಾಲಿನ ಹೆಗ್ಗಣಗಳು. ಆದುದರಿಂದ ರೈತರು ಬೆಳೆದಿಟ್ಟ ತಕ್ಕಂಥಾ ಆಹಾರ ಪದಾರ್ಥಗಳನ್ನು ತಿನ್ನುವಂಥಾ ಇಲಿ ಮತ್ತು ಹೆಗ್ಗಣಗಳನ್ನು ಕೊಲ್ಲುವ ಒಂದು ಯೋಜನೆಯನ್ನು ಸಹ ನಾವು ಹಾಕಿಕೊಂಡಿದ್ದೇವೆ ಅನ್ನುವ ಮಾತನ್ನು ಹೇಳುತ್ತೇನೆ. ನನಗೆ ಇವುಗಳ ಅಂಕಿ ಅಂಶ ಗೊತ್ತಿಲ್ಲ. ಆದರೆ ತಜ್ಞರು ಹೇಳಿದಂತ ಪ್ರಕಾರ ೨೪೦ ಲಕ್ಷ ಇವೆ. ನಾನು ಮಾತ್ರ ಒಂದೂ ಹಿಡಿದಿಲ್ಲ, ತಜ್ಞರ ಅಭಿಪ್ರಾಯ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಇಲಿಗಳನ್ನೂ ಮತ್ತು ಹೆಗ್ಗಣಗಳನ್ನೂ ಹಿಡಿಯುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಾ? ಅದರ ವಿವರ ಕೊಡುತ್ತೀರಾ? ಮತ್ತು ಇಲಿಗಳನ್ನು ಎಣಿಸುವುದಕ್ಕೆ ನಿಮ್ಮಲ್ಲಿ ಬೇರೆ ಏನಾದರೂ ಸಿಬ್ಬಂದಿ ಇದೆಯೇ? ಇಲ್ಲದೇ ಹೋದರೆ ಅದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ಅನ್ನುವುದನ್ನು ಹೇಳುತ್ತೀರಾ?

ಉಪಾಧ್ಯಕ್ಷರು.—ತಾವು ಕೇಳುವುದನ್ನೆಲ್ಲಾ ಮಾನ್ಯ ಸಚಿವರು ಉತ್ತರ ಕೊಟ್ಟಾದ ಮೇಲೆ ಕೇಳೀ ಈಗ ಬೇಡ.

ಶ್ರೀ ಸುದೀಂದ್ರರಾವ್ ಕಸಬೆ.—ನಾನು ಮೊದಲೇ ಹೇಳಿದ ಹಾಗೆ ರೈತ ತಾನು ಬೆಳೆದಂಥಾ ಪದ್ಯಾರ್ಥಗಳನ್ನು ಒಳ್ಳೆಯ ಬೆಲೆಗೆ ಮಾರುವುದಕ್ಕಾಗಿ ಕೆಲವು ದಿವಸಗಳವರೆಗೆ ಉಗ್ರಾಣದಲ್ಲಿಡಲು ಏನು ವ್ಯವಸ್ಥೆ ಬೇಕೋ ಅಂದರೆ ಗೋಡೌನ್ ಅನುಕೂಲ ಏನು ಬೇಕೋ ಅದನ್ನು ಮಾಡಿಕೊಡುವ ಒಂದು ಯೋಜನೆಯನ್ನು ಹಾಕಿ ಕೊಂಡಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿ ಉಗ್ರಾಣಗಳನ್ನು ಕಟ್ಟಿಸಿಕೊಡುವ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅವನು ಬೆಳೆದಾಗ ಆಸಂದರ್ಭದಲ್ಲಿ ಸರಿಯಾದ ಬೆಲೆ ಇರುವುದಿಲ್ಲ, ಮಾರೋಣ ಎಂದರೆ ಸರಿಯಾದ ತೂಕ ಅವರಿಗೆ ಸಿಗುವುದಿಲ್ಲ, ಮೇಲಾಗಿ ಸರಿಯಾದ ಕ್ವಾಲಿಟಿಯೂ ಇರುವುದಿಲ್ಲ. ಆದುದರಿಂದ ಇದರ ಬಗ್ಗೆ ಒಂದು ವ್ಯವಸ್ಥೆ ಮಾಡಲು ಕಾಟನ್ ಗ್ರೇಡಿಂಗ್ ಸಿಸ್ಟಂ ಒಂದನ್ನು ಎಲ್ಲಾ ಕಡೆಯೂ ಸ್ಥಾಪಿಸಬೇಕು ಅಂತ ಮಾಡಿದ್ದೇವೆ. ಈಗ ನಮ್ಮ ರಾಜ್ಯದಲ್ಲಿ ಈ ಗ್ರೇಡಿಂಗ್ ಸಿಸ್ಟಂ ಅನ್ನುವುದು ಎರಡು ಕಡೆಯಲ್ಲಿ ಇದೆ. ಒಂದು ರಾಯಚೂರು ಇನ್ನೊಂದು ಸೂರತ್ಕಲ್‌ನಲ್ಲಿದೆ. ಇದುವರೆಗೆ ಇದರಲ್ಲಿ ೨ ಪರ್ಸೆಂಟ್ ಪ್ರಾಫಿಟ್ ಅನ್ನು ಪರ್ಚೇಸ್ ಮಾಡುವವರು ತೆಗೆದುಕೊಳ್ಳುತ್ತಿದ್ದರು, ಇನ್ನು ಮುಂದೆ ಇದು ಮಾರುವವರಿಗೂ ಸಿಗುತ್ತದೆ.

ಶ್ರೀ ಎಂ. ರಾಮಪ್ಪ.—ಸ್ವಾಮಿ, ಈ ಕಾಟನ್ ಬಗ್ಗೆ ಹೇಳುವುದಾದರೆ ಅವರು ತಮ್ಮ ಮಾಲನ್ನು ಕೊಟ್ಟಾದ ಮೇಲೆ ಎಷ್ಟೊ ತಿಂಗಳಾದ ಮೇಲೆ ಒಂದು ಪಟ್ಟಿ ಮಾಡುತ್ತಾರೆ ಮತ್ತು ಅವರಿಗೆ ರೊಕ್ಕವನ್ನು ಎಷ್ಟೋ ದಿವಸಗಳಾದ ಮೇಲೆ ಕೊಡುತ್ತಾರೆ ಅನ್ನುವುದು ತಮಗೆ ಗೊತ್ತಿದೆಯೇ?

ಶ್ರೀ ಸುದೀಂದ್ರರಾವ್ ಕಸಬೆ.—ರಾಮಪ್ಪನವರ ಕ್ಷೇತ್ರದಲ್ಲಿರುವ ಏಜೆಂಟರಿಗೂ ಕಮೀಷನ್ ಕೊಡಲು ಅವರ ಆರ್ಥಿಕ ಪರಿಸ್ಥಿತಿ ಏನು ಇದೆ ಅನ್ನುವುದು ನನಗೆ ಗೊತ್ತಿಲ್ಲ. ಅವಿಚಾರ ಅವರಿಗೆ ಗೊತ್ತಿರಬಹುದು, ನನಗೆ ಗೊತ್ತಿಲ್ಲ. ಅವರವರ ಕ್ಷೇತ್ರದ ಆರ್ಥಿಕ ಪರಿಸ್ಥಿತಿ ಅವರವರಿಗೇ ಗೊತ್ತು ನನಗೆ ಗೊತ್ತಿಲ್ಲ ಬಹುಶ ಅಲ್ಲಿರುವ ಏಜೆಂಟರ ಒಂದು ಆರ್ಥಿಕ ಪರಿಸ್ಥಿತಿಯಿಂದ ಅವರಿಗೆ ರೊಕ್ಕ ಕೊಡಲು ನಿಧಾನವಾಗಿರಬಹುದು. ಅವರು ಬೇಜವಾಬ್ದಾರರಾಗಿರಬಹುದು. ನಮ್ಮ ಕೋಆಪರೇಟಿವ್ ಸಂಸ್ಥೆಗಳಲ್ಲಿ ತೀವ್ರವಾಗಿ ಪಟ್ಟಿಕೊಟ್ಟು ಹಣವನ್ನು ತಕ್ಷಣ ಕೊಡಬೇಕೆಂದು ಆದೇಶ ನೀಡಿದ್ದೇವೆ ಹೀಗೆ ಹತ್ತಿ ಬೆಳೆಯುವವರಿಗೆ ಒಂದು ಕಾಟನ್ ಗ್ರೇಡಿಂಗ್ ಸಿಸ್ಟಂ ಒಂದನ್ನು ಮಾಡಬೇಕೆಂದು ಮಾಡಿದ್ದೇವೆ. ಜೊತೆಗೆ ಅವರಿಗೆ ಟ್ರಾನ್ಸ್‌ಫೋರ್ಟೇಷನ್ ಫಸಿಲಿಟೀಸ್ ಗೋಡೌನ್ ವ್ಯವಸ್ಥೆ ಇವುಗಳನ್ನು ಒದಗಿಸಿ ಕೊಡಬೇಕೆನ್ನುವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಹೀಗೆ ನಾವು ಹಂತಹಂತವಾಗಿ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಾಗುತ್ತಿದ್ದೇವೆ.

ಶ್ರೀ ಎಂ. ರಾಮಪ್ಪ.—ನನ್ನ ತಿಳಿದಂತೆ ಹೇಳಬೇಕಾದರೆ ಅವರ ಆರ್ಥಿಕ ಪರಿಸ್ಥಿತಿ ಏನು ಅನ್ನುವುದು ಮಾನ್ಯ ಸಚಿವರಿಗೆ ಗೊತ್ತಿದೆ. ಆದರೆ ಅವರ ಆರ್ಥಿಕ ಪರಿಸ್ಥಿತಿ ಏನು ಅನ್ನುವುದು ನನಗೆ ಗೊತ್ತಿಲ್ಲ.

ಉಪಾಧ್ಯಕ್ಷರು.—ಅವರ ರಿಪ್ಲೈ ಆದ ಮೇಲೆ ಬೇಕಾದರೆ ಕ್ಲಾರಿಫಿಕೇಷನ್ ಕೇಳಿ ಈಗ ಬೇಡ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮಾನ್ಯ ಸಚಿವರಿಗೆ ರಾಯಚೂರಿನ ಮೇಲೆ ಅಭಿಮಾನ ಜಾಸ್ತಿಯಾಗಿದೆ.

ಶ್ರೀ ಸುಧೀಂದ್ರರಾವ್ ಕಸಬೆ.—ನನ್ನ ಜಿಲ್ಲೆಯ ಮೇಲೆ ಅಭಿಮಾನ ಹೆಚ್ಚು ಅನ್ನುವ ಪ್ರಶ್ನೆ ಅಲ್ಲ ರೆಗ್ಯುಲೇಟೆಡ್ ಮಾರ್ಕೆಟ್‌ನ ಒಂದು ಆರ್ಥಿಕ ಪರಿಸ್ಥಿತಿಯನ್ನೂ ಸಹ ನಾವು ನೋಡಬೇಕಾಗುತ್ತದೆ. ಆ ರೆಗ್ಯುಲೇಟೆಡ್ ಮಾರ್ಕೆಟ್ ಏರಿಯಾದಲ್ಲಿ ಯಾವ್ಯಾವುದು ಸೇರಿರುತ್ತದೆ ಅನ್ನುವುದನ್ನೂ ಸಹ ನಾವು ನೋಡಬೇಕಾಗುತ್ತದೆ. ಚರ್ಚೆ ಯಾವ ರೆಗ್ಯುಲೇಟೆಟ್ ಮಾರ್ಕೆಟ್ ಏರಿಯಾದಲ್ಲಿ ಹಣದ ವ್ಯವಸ್ಥೆ ಸರಿಯಾಗಿ ಇಲ್ಲದೇ ಹೋದರೆ ಅಲ್ಲಿ ರೀಸರ್ಚ್ ಸೆಂಟರನ್ನು ತೆರೆಯುವುದಕ್ಕಾಗುವುದಿಲ್ಲ. ಚಿತ್ರದುರ್ಗ, ಬಳ್ಳಾರಿ, ದಾವಣಗೆರೆ, ಗದಗ ಇಂಥಾ ಕಡೆಗಳಲ್ಲಿ ಕಾಟನ್ ಬೆಳೆದರೂ ಕೂಡ ಅಲ್ಲಿಯ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ರಾಯಚೂರು ಈ ಆರ್ಥಿಕ ಪರಿಸ್ಥಿತಿ ಬಗ್ಗೆ ಒಂದು ಉನ್ನತ ಮಟ್ಟದ ಸ್ಥಾನದಲ್ಲಿರುವುದರಿಂದ ಅಲ್ಲಿ ಇದನ್ನು ರೀಸರ್ಚ್ ಮಾಡಿದರೆ ಅಲ್ಲಿ ಇರತಕ್ಕಂಥಾ ಮಾರ್ಕೆಟ್‌ಗೆ ಯಾವ ಪರಿಣಾಮವೂ ಸಹ ಆಗುವುದಿಲ್ಲ. ಆದುದರಿಂದ ರಾಯಚೂರಿನಲ್ಲಿ ಒಂದು ರೀಸರ್ಚ್ ಸೆಂಟರ್ ಅನ್ನು ತೆಗೆಯುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಇನ್ನು ಯಶವಂತಪುರದ ಮಾರ್ಕೆಟ್ ವಿಚಾರದ ಬಗ್ಗೆ ಹೇಳುವುದಾದರೆ, ಈಗಾಗಲೇ ೧೧೩ ಅಂಗಡಿಗಳ ಪೈಕಿ ೬೦ ಅಲ್ಲಿಗೆ ಸ್ಥಳಾಂತವಾಗಿ ವ್ಯಾಪಾರ ಮಾಡುತ್ತಿವೆ. ಈ ವಿಚಾರವಾಗಿ ಕೆಳಮನೆಯಲ್ಲೂ ಮತ್ತು ಮೇಲ್ಮನೆಯಲ್ಲೂ ಬೇಕಾದಷ್ಟು ಚರ್ಚೆಆಯಿತು. ಅದಕ್ಕೆ ನಾವು ಒಂದು ಕೋಟಿ ರೂಪಾಯಿಯಷ್ಟು ಇನ್‌ವೆಸ್ಟ್ ಮಾಡಿದ್ದೇವೆ, ೧೨ ವರ್ಷದಿಂದಲೂ ಇತ್ಯರ್ಥವಾಗದೇ ಇದ್ದುದು ಈಗ ಇತ್ಯರ್ಥವಾಗಿ ಆ ರೀತಿ ಸ್ಥಳಾಂತರಿಸಿದು ಸರ್ಕಾರದ ಒಂದು ದಿಟ್ಟ ಹೆಜ್ಜೆ ಅಲ್ಲವೇ? ಅಷ್ಟೇ ಅಲ್ಲಿ ಭಾರತ ದೇಶದಲ್ಲಿ ಒಟ್ಟು ೨೨೦೦೦ ಮಾರ್ಕೆಟ್‌ಗಳು ಇವೆ, ಅದರಲ್ಲಿ ೫೦೦೦ ಹೋಲ್‌ಸೇಲ್ ಮಾರ್ಕೆಟ್ಸ್ ಇವೆ. ಕೇಂದ್ರ ಸರ್ಕಾರದ ಒಂದು ಧನಸಹಾಯವನ್ನೂ ನೋಡಿಕೊಂಡು ಈ ಬಗ್ಗೆ ರೆಗ್ಯುಲೇಟೆಡ್ ಮಾರ್ಕೆಟ್ ಟೌನ್‌ಷಿಪ್ ಒಂದನ್ನು ಮಾಡಬೇಕು ಅಂತ ಮಾಡಿದ್ದೇವೆ. ಜೊತೆಗೆ ಒಂದು ಸಂಶೋಧನೆಯನ್ನೂ ಕೂಡ ನಡೆಸಬೇಕೆಂದು ಮಾಡಿದ್ದೇವೆ. ಇದಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯದ ಒಂದು ಸಂಸ್ಥೆಗೆ ಜವಾಬ್ದಾರಿ ಕೊಟ್ಟಿದ್ದೇವೆ. ಈ ಒಂದು ಟೌನ್‌ಷಿಪ್ ಮಾಡಲು ರಾಯಚೂರಿನಲ್ಲಿ ೩೫೦ ಎಕರೆ ಜಮೀನನ್ನು ೪೨ ಲಕ್ಷ ರೂಪಾಯಿ ಕೊಟ್ಟು ತೆಗೆದು ಕೊಂಡಿದ್ದೇವೆ. ಭಾರತಾದ್ಯಂತ ರೆಗ್ಯುಲೇಟೆಡ್ ಮಾರ್ಕೆಟ್ ಟೌನ್‌ಷಿಪ್ ಮಾಡಬೇಕೆಂದು ಇದಕ್ಕಾಗಿ ೨೨ ಕೋಟಿ ರೂಪಾಯಿ ಖರ್ಚು ಮಾಡಿ ಮಾಡಬೇಕೆನ್ನುವ ಒಂದು ಯೋಜನೆಯನ್ನು ಅವರು ಹಾಕಿಕೊಂಡಿದ್ದಾರೆ.

ಹುಬ್ಬಳ್ಳಿಯಲ್ಲಿ ನಾವು ಸುಮಾರು ೬ ಕೋಟಿ ೫೫ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಕೈಗೊಂಡಿದ್ದೇವೆ. ಇಂಥ ಯೋಜನೆಗಳನ್ನು ಹಾಕಿಕೊಂಡು ರೆಗ್ಯುಲೇಟೆಡ್ ಮಾರ್ಕೆಟ್‌ಗಳನ್ನು ಅಭಿವೃದ್ಧಿ ಮಾಡಲಿಕ್ಕೆ ಹೊರಟಿರುವುದು ನಮ್ಮ ಸರ್ಕಾರಕ್ಕೆ ಹೆಮ್ಮೆಯ ವಿಷಯವಾಗಿದೆ, ನಾನು ಮಾರುಕಟ್ಟೆಯ ಮಂತ್ರಿಯಾದ ಮೇಲೆ. ರೆಗ್ಯುಲೆಟೆಡ್ ಮಂಡಳಿಯ ಅಧ್ಯಕ್ಷನಾದ ಮೇಲೆ ಈ ಮಾರುಕಟೆಗಳ ಅಭಿವೃದ್ಧಿ ಕಾರ್ಯ ಕುಂಠಿತವಾದದ್ದನ್ನು ಕಂಡು ಸುಮಾರು ೫೫ಲಕ್ಷ ರೂಪಾಯಿಗಳನ್ನು ಎಲ್ಲಾ ಮಾರುಕಟ್ಟೆಗಳ ಅಭಿವೃದ್ಧಿಗೆ ಕೊಡಲಾಗಿದೆ ಎಂದು ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಶ್ರೀ ಕೊಡಗಿಯವರು ಉಡುಪಿಯಲ್ಲಿ ರೆಗ್ಯುಲೆಟೆಡ್ ಮಾರುಕಟ್ಟೆ ಕಟ್ಟಡ ಸೋರುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಬಹುಶಃ ಅಲ್ಲಿ ಹೆಚ್ಚಿನ ಮಳೆಯಾಗುತ್ತಿರುವುದರಿಂದ ಆ ರೀತಿಯಾಗಿರಬಹುದು ಆದರೂ ನಾವು ಅದನ್ನು ಗಮನಿಸುತ್ತೇವೆ ಮಾನ್ಯ ತರ್ಕೋಡ ಅವರು ತಮ್ಮ ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಹೆಚ್ಚಿನ ಹಣವನ್ನು ಕೊಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಅಲ್ಲಿನ ವ್ಯಾಪಾರಸ್ಥರು ಮುಂದೆ ಬಂದರೆ ನಾವೂ ಸರ್ಕಾರದ ವತಿಯಿಂದ ಎಷ್ಟು ಹಣವನ್ನು ಕೊಡಬೇಕೋ ಅಷ್ಟನ್ನು ಕೊಡುವುದಕ್ಕೆ ಸಾಧ್ಯತೆ ಇದೆ ಎನ್ನುವ ಮಾತನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ರಾಮದೇವ್ ಅವರು ಶಿವಮೊಗ್ಗ ರೆಗ್ಯುಲೇಟೆಡ್ ಮಾರ್ಕೆಟ್‌ನ್ನು ಷಿಫ್ಟ್ ಮಾಡುವುದರ ಬಗ್ಗೆ ಹೇಳಿ

ದ್ದಾರೆ, ವ್ಯಾಪಾರಸ್ಥರು ವ್ಯಾಪಾರವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸ್ಥಳಾಂತರಿಸುವುದರಲ್ಲಿ ಹಿಂದೆ-ಮುಂದೆ ನೋಡುವುದು ಸ್ವಾಭಾವಿಕ, ನಾನು ಶಿವಮೊಗ್ಗಕ್ಕೆ ಹೋದಾಗ ಅಲ್ಲಿನ ನಗರ ಸಭೆಯಲ್ಲಿ ಸುಮಾರು ೫೦ ಪರ್ಸೆಂಟ್‌ನಷ್ಟು ವ್ಯಾಪಾರಸ್ಥರು ಮುನಿಸಿಪಲ್ ಕೌನ್ಸಿಲರ್ಸ್ ಆಗಿರುವುದನ್ನು ಗಮನಿಸಿದೆ. ಹೊಸ ಮಾರ್ಕೆಟ್‌ಗೆ ನೀರಿನ ಸರಬರಾಜು ಅವಶ್ಯಕವಾಗಿತ್ತು, ನಾವು ಅವರನ್ನು ಕೇಳಿದಾಗ ಅವರು ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಈಗ ನಗರಸಭೆ ಸೂಪರ್‌ಸೀಡ್ ಆಗಿದೆ, ಅಲ್ಲಿರುವ ಅಡ್ಮಿನಿಸ್ಟ್ರೇಟರ್ ಅವರು ನೀರನ್ನು ಹೊಸ ಮಾರ್ಕೆಟ್‌ಗೆ ಕೊಡಲು ಒಪ್ಪಿದ್ದಾರೆ. ಶೀಘ್ರದಲ್ಲಿಯೇ ಇದನ್ನು ಸ್ಥಳಾಂತರಿಸುವ ಬಗ್ಗೆ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ನಾನು ಸಭೆಗೆ ಆಶ್ವಾಸನೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಶಿಕಾರಿಪುರ ಹೀರೆರೂರುಗಳಲ್ಲ ತಂಬಾಕು ಮಾರುಕಟ್ಟೆಗಳನ್ನು ಮಾಡಲು ಸುಮಾರು ನಾಲ್ಕು ಲಕ್ಷ ರೂಪಾಯಿಗಳನ್ನು ಪಡೆದಿದ್ದೀರಿ ಎನ್ನುವ ಮಾತನ್ನು ಮಾನ್ಯ ರಾಮದೇವ್ ಅವರು ಹೇಳಿದ್ದಾರೆ. ಅದು ತಪ್ಪು. ನಾವು ಅಲ್ಲಿ ಮಾರ್ಕೆಟ್ ಕಟ್ಟಡವನ್ನು ಕಟ್ಟಲು ಆ ಹಣವನ್ನು ಉಪಯೋಗ ಮಾಡಿಕೊಂಡಿದ್ದೇವೆ ಅಷ್ಟೇಅಲ್ಲ. ೧೯೬೬ರಲ್ಲಿ ಮಾಡಿದಂಥ ಕಾಯಿದೆಯಿಂದ ರೈತರಿಗೆ ಹೆಚ್ಚಿನ ಅನುಕೂಲವಾಗುವುದಿಲ್ಲವೆನ್ನುವುದನ್ನು ಗಮನಿಸಿ ಅದಕ್ಕೆ ತಿದ್ದುಪಡಿಯನ್ನು ತಂದು ರೈತರಿಗೆ ಅನುಕೂಲವಾಗತಕ್ಕ ಕಾರ್ಯಕ್ರಮಗಳನ್ನು ನಾವು ಕೈಗೊಂಡಿದ್ದೇವೆ ಇನ್ನು ದನಗಳ ಸಂತೆಯ ಬಗ್ಗೆ ಕೆಲವು ವಿಷಯ ಹೇಳಲು ಬಯಸುತ್ತೇನೆ. ಮೊದಲಿನ ಹಾಗೆ ದನಗಳನ್ನು ಮಾರುವುದಾಗಲೀ, ಕೊಳ್ಳುವುದಾಗಲಿ ಸುಲಭವಲ್ಲ. ಈಗ ದನಗಳ ವ್ಯಾಪಾರ ಸುಮಾರು ೫೦೦೦ ರೂಪಾಯಿಗಳಿಂದ ಹತ್ತುಸಾವಿರ ರೂಪಾಯಿಗಳವರೆಗೆ ನಡೆಯುತ್ತಿದೆ. ರೈತರ ಆರ್ಥಿಕ ಪರಿಸ್ಥಿತಿ ಇಕ್ಕಟ್ಟಿಗೆ ಸಿಕ್ಕಾಗ ಅವರು ದನಗಳನ್ನು ಮಾರದೆ ಗತ್ಯಂತರವಿಲ್ಲ, ಇದನ್ನು ನಾವು ಗಮನಿಸಿ ಎರಡು ರೂಪಾಯಿಗಳ ರಿಯಾಯಿತಿಯನ್ನು ದನಗಳ ಮಾರುಕಟ್ಟೆಯಲ್ಲಿ ಮಾಡಿದ್ದೇವೆ. ಮತ್ತು ಎಲ್ಲೆಲ್ಲಿ ಹರಿಜನ ಗಿರಿಜನರಿಗೆ ಸರಿಯಾದ ಪ್ರಾತಿನಿಧ್ಯ ಇಲ್ಲ. ಅಲ್ಲೆಲ್ಲಾ ಅವರಿಗೆ ಸೂಕ್ತ ಅವಕಾಶಗಳನ್ನು ಕೊಟ್ಟಿದ್ದೇವೆ.

ಶ್ರೀ ಎಂ ರಾಮಪ್ಪ.—ಅಧ್ಯಕ್ಷರೇ, ಮಾನ್ಯ ಸಚಿವರು ಕಮಿಷನ್ ಗಿಮಿಷನ್ ಎಂದು ನಮ್ಮ ಮೇಲೆ ಆಪಾದನೆ ಮಾಡಿದ ಹಾಗೆ ಕಾಣುತ್ತದೆ. ನಮ್ಮ ಆರ್ಥಿಕ ಪರಿಸ್ಥಿತಿ ಮಾನ್ಯ ಸಚಿವರಿಗೇನು ಗೊತ್ತು? ನಾನು ಎಂಎಲ್‌ಎ ಆಗಿ ಎಷ್ಟು ದುಡಿದಿದ್ದೇನೆ. ಅವರು ಮಂತ್ರಿಯಾಗಿ ಎಷ್ಟು ದುಡಿದಿದ್ದಾರೆ ಎಂದು ಅವರಿಗೆ ಗೊತ್ತಿದೆಯೇ?

ಶ್ರೀ ಸುಧೀಂದ್ರರಾವ್ ಕಸಬೆ.—ನಾನು ವೈಯಕ್ತಿಕವಾಗಿ ಏನನ್ನೂ ಹೇಳಲಿಲ್ಲ.

ಶ್ರೀ ಎಂ. ರಾಮಪ್ಪ.—ನನಗೆ ಕಮಿಷನ್ ಬರುತ್ತದೆಂದು ಹೇಳಬೇಕಾದರೆ ನಾನೇನು ವ್ಯಾಪರಸ್ಥನೇ?

ಶ್ರೀ ಎಂ. ಸಿ. ನಾನಯ್ಯ.—ಮಾನ್ಯ ಮಂತ್ರಿಗಳು ಈಗ ಏನೊಂದು ಆಪಾದನೆ ಮಾಡಿದ್ದಾರೆ. ಅದರ ಬಗ್ಗೆ ಕೇಳಲಿಕ್ಕೆ ಮಾನ್ಯ ಸದಸ್ಯರಿಗೆ ಹಕ್ಕು ಇದೆ. ಕಮಿಷನ್ ಏಜೆಂಟ್ಸ್‌ಗೂ ಇವರಿಗೂ ಮಧ್ಯ ಇರತಕ್ಕ ಸಂಬಂಧದ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದನ್ನು ನಿರಾಕರಣೆ ಮಾಡತಕ್ಕ ಹಕ್ಕು ಮಾನ್ಯ ಸದಸ್ಯರಿಗೆ ಇದೆ.

ಶ್ರೀ ಸುಧೀಂದ್ರರಾವ್ ಕಸಬೆ.—ನಮ್ಮ ಭಾಷೆಗೂ ಅವರ ಭಾಷೆಗೂ ವ್ಯತ್ಯಾಸ ಇದೆ.

ಶ್ರೀ ಎಂ. ರಾಮಪ್ಪ.—ಕಮಿಷನ್ ಯಾರಿಗೆ ಸಿಕ್ಕುತ್ತಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಸರಿಯಾಗಿ ಹೇಳಬೇಕು ಇಲ್ಲದೇ ಹೋದರೆ ಅವರು ಕ್ಷಮಾಪಣೆ ಕೇಳಬೇಕು. ಮತ್ತು ಅವರು ಹೇಳಿದಂಥ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಸುಧೀಂದ್ರರಾವ್ ಕಸಬೆ.—ನಾನು ಒಂದು ಸಾರಿ ಹೇಳಿದ ಮಾತನ್ನು ವಾಪಸ್ ತೆಗೆದುಕೊಳ್ಳುವುದು ನನ್ನ ಜನ್ಮದಲ್ಲೇ ಇಲ್ಲ.

ಶ್ರೀ ಎ. ಬಿ. ಪಾಟೀಲ್.—ಆಳಂದ ರೆಗ್ಯುಲೇಟೆಡ್ ಮಾರ್ಕೆಟ್ ಯಾವ ರೀತಿಯಲ್ಲಿ ಪ್ರಗತಿ ಹೊಂದಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಂ. ರಾಮಪ್ಪ.—ಸ್ವಾಮಿ ಮಾನ್ಯ ಮಂತ್ರಿಗಳು ನನ್ನ ಬಗ್ಗೆ ಹೇಳಿರುವುದನ್ನು ಕಡತದಿಂದ ತೆಗೆಯಿಸಬೇಕು.

ಶ್ರೀ ಸುಧೀಂದ್ರರಾವ್ ಕಸಬೇ.—ಮಾನ್ಯ ಅಧ್ಯಕ್ಷರೇ, ನಾನು ಹೇಳಿದ್ದುದು ವ್ಯಾಪಾರಸ್ಥರಿಗೂ ಮತ್ತು ರೈತರಿಗೂ ಇರತಕ್ಕ ಸಂಬಂದದ ಬಗ್ಗೆ. ನಾನೇನು ತಪ್ಪು ಮಾತನಾಡಿದ್ದೇನೆ ಎಂದು ವಾಪಸ್ ತೆಗೆದುಕೊಳ್ಳಬೇಕು?

ಶ್ರೀ ಎಂ. ರಾಮಪ್ಪ.—ನನ್ನ ಮೇಲೆ ಮಾತನಾಡುವುದಕ್ಕೆ ನೀವು ಯಾರ್ರೀ

ಉಪಾಧ್ಯಕ್ಷರು.—ಮಾನ್ಯ ಪಂಪಾಪತಿಯವರು ಪ್ರಶ್ನೆ ಕೇಳಬಹುದು.

ಶ್ರೀ ಪಂಪಾಪತಿ.—ದಾವಣಗೆರೆಯ ರೆಗ್ಯುಲೆಟೆಡ್ ಮಾರ್ಕೆಟ್ ಬಹಳ ದೊಡ್ಡದು, ಇದರ ಪಕ್ಕದಲ್ಲಿ ಒಂದು ರೈಲ್ವೆ ಗೇಟ್ ಇದೆ, ಅದನ್ನು ಈಗ ಮುಚ್ಚಿ ಹಾಕಿದ್ದಾರೆ. ಗೇಟನ್ನು ಮುಚ್ಚಿರುವುದರಿಂದ ಅಲ್ಲಿಗೆ ಬರತಕ್ಕ ವಾಹನಗಳಿಗೆ ಮತ್ತು ಎತ್ತಿನ ಗಾಡಿಗಳಿಗೆ ಬಹಳ ತೊಂದರೆಯಾಗಿದೆ. ಮಾರ್ಕೆಟ್ ಸಮಿತಿಯವರು, ಮತ್ತು ರೈತರು ರೈಲ್ವೆ ಇಲಾಖೆಯವರಿಗೆ ಎಷ್ಟು ಬಾರಿ ಕೇಳಿಕೊಂಡರೂ ಸಹ ಅದು ಪರಿಣಾಮಕಾರಿಯಾಗಿಲ್ಲ. ಮಾನ್ಯ ಮಂತ್ರಿಗಳು ರೈತರ ಬಗ್ಗೆ ಹೆಚ್ಚಿನ ಅಭಿಮಾನವುಳ್ಳವರು, ಮಾರ್ಕೆಟ್‌ಗಳನ್ನು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಅಭಿವೃದ್ಧಿ ಪಡಿಸುತ್ತಿದ್ದೀರಿ. ತಾವು ಸ್ವಲ್ಪ ರೈಲ್ವೆ ಇಲಾಖೆಯವರ ಮೇಲೆ ಒತ್ತಾಯ ತಂದು ಮುಚ್ಚಿರುವ ರೈಲ್ವೆಗೇಟನ್ನು ತೆಗೆಯುವಂತೆ ಪ್ರಯತ್ನ ಮಾಡುವಿರಾ? ಮಾರ್ಕೆಟ್ ಸಮಿತಿಯವರು ಇದಕ್ಕೆ ತಗಲುವ ಖರ್ಚನ್ನು ಕೊಡುವುದಕ್ಕೆ ಸಿದ್ಧರಿದ್ದಾರೆಂದು ಹೇಳಿದ್ದಾರೆ. ಈಗ ಗೇಟನ್ನು ತೆಗೆಯಿಸುವ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡಬೇಕು.

ಶ್ರೀ ಎಂ. ಶೀರನಾಳಿ ಚಂದ್ರಶೇಖರ್.—ಶಿವಮೊಗ್ಗದಲ್ಲಿ ಊರಿನ ಹೊರಗೆ ರೆಗ್ಯುಲೆಟೆಡ್ ಮಾರ್ಕೆಟ್ ಯಾರ್ಡನ್ನು ಮಾಡಿದ್ದಾರೆ. ಕೆಲವು ವ್ಯಾಪಾರಸ್ಥರು ಈಗಾಗಲೇ ಷಿಫ್ಟ್ ಮಾಡಿದ್ದಾರೆ, ಇನ್ನೂ ಕೆಲವರು ಪ್ರಭಾವ ಬೀರಿ ಇದ್ದಲ್ಲಿಯೇ ಇದ್ದಾರೆ. ಪೂರ್ತಿಯಾಗಿ ಮಾರ್ಕೆಟ್‌ಟನ್ನು ಸ್ಥಳಾಂತರಿಸುವುದಕ್ಕೆ ಇನ್ನು ಎಷ್ಟುಕಾಲ ಬೇಕಾಗಂತ್ತದೆ?

ಶ್ರೀ ಆತ್ಮಾನಂದ.—ಮಾನ್ಯ ಅಧ್ಯಕ್ಷರೇ, ನಮ್ಮ ಮಂಡ್ಯ ತಾಲ್ಲೂಕಿನಲ್ಲಿ ಈ ಒಂದು ಮಾರ್ಕೆಟ್ ಯಾರ್ಡ್‌ನ ಶಂಕುಸ್ಥಾಪನೆ ಮಾಡಿ ೬-೭ ತಿಂಗಳುಗಳು ಕಳೆದರೂ ಕೂಡ ಇನ್ನೂ ಅದು ಪ್ರಾರಂಭ ಹಾಗಿಲ್ಲ. ಅದನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎನ್ನುವ ವಿಚಾರದಲ್ಲಿ ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಷೇರ್‌ಖಾನ್.—ಮಾನ್ಯ ಅಧ್ಯಕ್ಷರೇ, ನಮ್ಮ ಭಾಗದಲ್ಲಿ ಒಂದು ಮಾರ್ಕೆಟ್‌ಯಾರ್ಡ್‌ಗಾಗಿ ಈಗ ೧೦ ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಅದು ಸಾಲದು, ಇನ್ನೂ ಹೆಚ್ಚು ಕೊಡಬೇಕು. ನಮ್ಮ ಗುಲ್ಬರ್ಗ ಜಿಲ್ಲೆಯಲ್ಲೇ ಈ ಚಿತ್ತಾಪುರ ಮಾರ್ಕೆಟ್‌ಯಾರ್ಡ್ ಬಹಳ ಮುಖ್ಯವಾದದ್ದು. ಅದು ಯಾವ ಸ್ಟೇಜ್‌ನಲ್ಲಿದೆ ಎಂಬುದನ್ನು ಮಾನ್ಯ ಮಂತ್ರಿಯವರು ಹೇಳಬೇಕು. ಅಲ್ಲದೇ ನಮ್ಮ ಭಾಗದಲ್ಲಿ ಬೇಕಾದಷ್ಟು ಮಾರ್ಕೆಟ್‌ಗಳನ್ನು ಅಭಿವೃದ್ಧಿ ಮಾಡಿದರೂ ಕೂಡ ಅಲ್ಲೆಲ್ಲಾ ನೀರಿನ ಕೊರತೆ ಇದೆ. ಮುನಿಸಿಪಾಲಿಟಿಯವರಿಂದ ನೀರಿನ ಸಪ್ಲೈ ಸರಿಯಾಗಿ ಆಗುತ್ತಾ ಇಲ್ಲ. ಇದರ ಬಗ್ಗೆ ಅವರು ಯಾರೂ ಸರಿಯಾಗಿ ವಿಚಾರ ಮಾಡುತ್ತಾ ಇಲ್ಲ. ಈ ಬಗ್ಗೆ ಮಾನ್ಯ ಮಂತ್ರಿಯವರು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಡಿ. ಟಿ. ರಾಮು.—ಮಾನ್ಯ ಅಧ್ಯಕ್ಷರೇ, ಈ ಕುಣಿಗಲ್ ತಾಲ್ಲೂಕಿನಲ್ಲಿ ಒಂದು ರೆಗ್ಯುಲೇಟೆಡ್ ಮಾರ್ಕೆಟನ್ನು ಓಪನ್ ಮಾಡಿದ್ದಾರೆ. ಆ ಮಾರ್ಕೆಟ್‌ನಲ್ಲಿ ಟೆಂಪರರಿಯಾಗಿ ಕೆಲಸ ಮಾಡತಕ್ಕಂಥವರು ಅನೇಕ ಜನ ಇದ್ದಾರೆ. ಅವರಲ್ಲಿ ಕೆಲವರನ್ನು ಪರ್ಮನೆಂಟ್ ಮಾಡಿದ್ದಾರೆ, ಇನ್ನು ಕೆಲವರನ್ನು ಪರ್ಮನೆಂಟ್ ಮಾಡಿಲ್ಲ. ಆದ್ದರಿಂದ ಅಲ್ಲಿ ೫-೬ ವರ್ಷ ಸರ್ವೀಸ್ ಆಗಿರುವವರನ್ನು ಖಾಯಂಗೊಳಿಸುವ ಬಗ್ಗೆ ಮಾನ್ಯ ಮಂತ್ರಿಯವರು ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಗಂಗಾಧರನ್.—ಸ್ವಾಮಿ, ಮೈಸೂರಿನಲ್ಲಿ ಹೊಸದಾಗಿ ಒಂದು ಮಾರ್ಕೆಟ್‌ಯಾರ್ಡ್ ಕಟ್ಟುವುದಕ್ಕಾಗಿ ವರ್ಲ್ಡ್ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡಿದ್ದಾರೆ. ಅದು ನಂಜನಗೂಡು-ಮೈಸೂರು ರೋಡ್‌ನಲ್ಲಿ ಇದೆ. ಅದರ ಬಗ್ಗೆ ಏನು ತೀವ್ರ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ನಾನು ಮಾನ್ಯ ಮಂತ್ರಿಯವರನ್ನು ಕೇಳಬಯಸುತ್ತೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಮಾನ್ಯ ಸದಸ್ಯರು ಹೇಳುವುದನ್ನು ನೋಟ್ ಮಾಡಿಕೊಳ್ಳುತ್ತಾ ಇಲ್ಲ. ಹಿಂದೆ ಶತಾವಧಾನಿಗಳು ಎಂದು

ಇರಂತ್ತಿದ್ದರು. ಅವರು ನೂರು ಜನ ಏನೇ ಹೇಳಿದರೂ ಅದನ್ನೆಲ್ಲಾ ಕೇಳಿಕೊಂಡು ಆ ನೂರು ಜನಕ್ಕೂ ಉತ್ತರ ಕೊಡುತ್ತಿದ್ದರು. ಆ ತರಹ ಮಾನ್ಯ ಮಂತ್ರಿಯವರು ಶತಾವಧಾನಿಗಳಾಗಿದ್ದರೆ ನನ್ನ ಅಭ್ಯಂತರ ವಿಲ್ಲ.

ಶ್ರೀ ಪ್ರಭಾಕರ್ ತೇಲ್ಕರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ೫-೬ ತಿಂಗಳ ಹಿಂದೆ ನಮ್ಮ ಚಿತ್ತಾಪುರ ಮಾರ್ಕೆಟ್‌ಯಾರ್ಡ್‌ಗೆ ಬಂದಿದ್ದರು. ನಮ್ಮ ಚಿತ್ತಾಪುರ ಮಾರ್ಕೆಟ್‌ಯಾರ್ಡ್‌ಗೆ ೧೦ ಲಕ್ಷ ರೂಪಾಯಿಗಳನ್ನು ಕೊಡುವ ಬಗ್ಗೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅಲ್ಲಿ ಸುಮಾರು ೪೫ ಹಳ್ಳಿಗಳು ಇವೆ. ಅಲ್ಲಿ ಒಂದು ರೈಲ್ವೆ ಲೈನ್ ಕೂಡ ಇದೆ. ಅಲ್ಲಿ ಒಂದು ಬ್ರಿಡ್ಜ್ ಏನಿದೆ ಅದು ಬಹಳ ಹಳೆಯದು ಹಾಗೂ ಬಿರುಕು-ಬಿಟ್ಟಿದೆ. ಅದರ ಮೂಲಕ ದೊಡ್ಡ ದೊಡ್ಡ ಲಾರಿಗಳಲ್ಲಿ ದವಸ ಧಾನ್ಯಗಳನ್ನು ತರುವುದಕ್ಕೆ ಬಹಳ ತೊಂದರೆಯಿದೆ. Either it should be broadened and the height raised or there should be a level crossing because the people of 45 villages are unable to get the goods into the market yard. The other thing is. please grant Rs. 10 lakhs immediately ty this Chitapur Market Yard so that this could be developed.

ಶ್ರೀ ರಾಜುಗೌಡ.—ಮಾನ್ಯ ಅಧ್ಯಕ್ಷರೇ, ನಮ್ಮ ಭಾಗದಲ್ಲಿ ಇರತಕ್ಕಂಥ ಈ ಮಹದೇಶ್ವರ ಸ್ವಾಮಿ ದೇವಸ್ಥಾನಕ್ಕೆ ಬಸ್‌ಗಳನ್ನು ಹಾಕಿಲ್ಲ. ಪ್ರಯಾಣಿಕರಿಗೆ, ಬಹಳ ತೊಂದರೆ ಇದೆ. ಈ ದೇವಸ್ಥಾನಕ್ಕೆ ಯಾವಾಗ ಬಸ್‌ಗಳನ್ನು ಓಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು. ಅಲ್ಲದೇ ನಮ್ಮ ಭಾಗದಲ್ಲಿ ಒಂದು ಮಾರ್ಕೆಟ್‌ಯಾರ್ಡ್ ಮಾಡಬೇಕು ಎನ್ನತಕ್ಕಂಥ ಬೇಡಿಕೆ ಜನರಿಂದ ಬಂದಿದೆ. ಅದನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎಂಬುದನ್ನೂ ಕೂಡ ಮಾನ್ಯ ಮಂತ್ರಿಯವರು ತಿಳಿಸಬೇಕು ಎಂದು ನಾನು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ ರಾಜ್ಯದಲ್ಲಿ ಒಟ್ಟು ಸುಮಾರು ೨೪೧ ಲಕ್ಷ ಹೆಗ್ಗಣಗಳು ಮತ್ತು ಇಲಿಗಳು ಇವೆ ಎಂದು ಹೇಳಿದರು.

ಅಧ್ಯಕ್ಷರು.—ಅದು ತಜ್ಞರು ಹೇಳಿದಂತಹ ಸಂಖ್ಯೆ ;

ಶ್ರೀ ಎಂ. ಸಿ. ನಾಣಯ್ಯ.—ಸ್ವಾಮಿ, ಇಡೀ ರಾಷ್ಟ್ರದಲ್ಲಿ ಸುಮಾರು ೨೪೦ ಕೋಟಿ ಇಲಿಗಳು ಉಂಟು ಎಂದು ಹೇಳಿದ್ದಾರೆ. ಕರ್ನಾಟಕದಲ್ಲಿ ನಿರ್ದಿಷ್ಟವಾಗಿ ಎಷ್ಟು ಇದೆ ಎಂಬುದು ಮಾನ್ಯ ಕಸಬೆ ಯವರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ. ನಾವು ಅದನ್ನು ೨೪೦ ಲಕ್ಷ ಇಲಿಗಳು ಎಂದು ಲೆಕ್ಕ ಹಾಕೋಣ. ಈ ಇಲಿ ಮತ್ತು ಹೆಗ್ಗಣಗಳನ್ನು ನಾಶ ಮಾಡಿದರೆ ನಮ್ಮ ಉಗ್ರಾಣದಲ್ಲಿರತಕ್ಕಂಥ ಧಾನ್ಯ ಗಳನ್ನು ಸುರಕ್ಷಿತವಾಗಿ ಇಡಬಹುದು ಎನ್ನತಕ್ಕಂಥ ವಾದವನ್ನು ಅವರು ಈ ಸಭೆಯ ಮುಂದಿಟ್ಟಿದ್ದಾರೆ. ಅಲ್ಲದೇ ಈ ೨೪೦ ಲಕ್ಷ ಇಲಿ-ಹೆಗ್ಗಣಗಳು ಏನಿವೆ, ಇವು ನಮ್ಮ ದೇಶದಲ್ಲಿ ಆಗುತ್ತಾ ಇರತಕ್ಕಂಥ ೨೫-೩೦ ಪರ್ಸೆಂಟ್‌ನಷ್ಟು ಉತ್ಪಾದನೆಯನ್ನು ಹಾಳು ಮಾಡುತ್ತಿವೆ. ಆದ್ದರಿಂದ ಅವುಗಳನ್ನು ನಾವು ನಾಶ ಮಾಡು ತ್ತೇವೆ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ. ಹಾಗೆ ಆ ಇಲಿ ಮತ್ತು ಹೆಗ್ಗಣಗಳನ್ನು ನಾಶ ಮಾಡುವುದಕ್ಕೆ ಹೊರಟಾಗ ತಮಗೆ ಗೊತ್ತಿರುವ ಹಾಗೆ ಪ್ರಿವೆನ್‌ಷನ್ ಆಫ್ ಕ್ರೂಯಲ್ಟಿ ಟು ಅನಿಮಲ್ಸ್ ಆಕ್ಟ್ ಅಡ್ಡ ಬಂದರೆ ಅವರು ಏನು ಮಾಡುತ್ತಾರೆ ? ಇದಕ್ಕೆ ಉತ್ತರ ಕೊಡಬೇಕು ಮತ್ತು ಹೆಗ್ಗಡ ದೇವನಕೋಟೆಯಲ್ಲಿ ಇಲಿಗಳ ಮತ್ತು ಹೆಗ್ಗಣಗಳ ಸಂಖ್ಯೆ ಎಷ್ಟು ಇದೆ ಎಂಬುದನ್ನು ಹೇಳಬೇಕು.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ಈ ರೆಗ್ಯುಲೇಟೆಡ್ ಮಾರ್ಕೆಟ್‌ಗಳಲ್ಲಿ ರೈತರಿಗೆ ದಳ್ಳಾಳಿಗಳಿಂದ ಆಗತಕ್ಕಂಥ ಶೋಷಣೆಯನ್ನು ತಪ್ಪಿಸುವುದಕ್ಕೆ ಏನು ವ್ಯವಸ್ಥೆ ಮಾಡುತ್ತಾರೆ ಎಂದು ನಾನು ಆಗಲೇ ಮಾನ್ಯ ಮಂತ್ರಿಯವರನ್ನು ಕೇಳಿದೆ. ಆದಕ್ಕೆ ಅವರು ಯಾವುದೇ ಉತ್ತರವನ್ನು ಹೇಳಲಿಲ್ಲ. ಆ ಬಗ್ಗೆ ನನಗೆ ಉತ್ತರ ಬೇಕು.

ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಅಧ್ಯಕ್ಷರೇ, ಎಲ್ಲಾ ಕಡೆಗಳಲ್ಲಿ ಈಗ ಈ ಎಸ್.ಸಿ. ಮತ್ತು ಎಸ್.ಟಿ ಯವರಿಗೆ ೧೮ ಪರ್ಸೆಂಟ್ ರಿಸರ್ವೇಷನ್ ಏನಿದೆ ಅದನ್ನು ಮೈನ್‌ಟೈನ್ ಮಾಡುತ್ತಿದ್ದಾರೆ. ಆದರೆ ಈ ರೆಗ್ಯುಲೇಟೆಡ್ ಮಾರ್ಕೆಟ್‌ಗಳಲ್ಲಿ ಅದು ಜೀರೋ ಪರ್ಸೆಂಟ್ ಇದೆ. ಅಲ್ಲಿ ಈ ಒಂದು

ಬ್ಯಾಕ್‌ಲಾಗನ್ನು ಯಾವ ರೀತಿ ತುಂಬುತ್ತಾರೆ ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು. ಅಲ್ಲದೇ ನಮ್ಮ ಬಿಜಾಪುರಕ್ಕೆ ಫೈರ್‌ಫೈಟಿಂಗ್ ಫೋರ್ಸನ್ನು ಕೊಡುತ್ತೇವೆ ಎಂದು ಹೇಳಿದ್ದರು. ಅದನ್ನು ಯಾವಾಗ ಕೊಡುತ್ತಾರೆ ಎಂಬುದನ್ನು ಸಹ ಹೇಳಬೇಕು.

ಶ್ರೀ ಸುಧೀಂದ್ರರಾವ್ ಕಸಬೆ.—ಮಾನ್ಯ ಅಧ್ಯಕ್ಷರೇ. ಶ್ರೀ ಪಂಪಾಪತಿಯವರು ಹೇಳಿದಂತೆ, ನಗರ ಪ್ರದೇಶದಲ್ಲಿ ಜನರು ತಿರುಗಾಡತಕ್ಕಂಥ ದಾರಿಯಲ್ಲಿ ರೈಲ್ವೆ ಗೇಟನ್ನು ಹಾಕಿರುವುದರಿಂದ ಸಂಚಾರಕ್ಕೆ ಅಡಚಣೆಯಾಗಿದೆ ; ಈ ಬಗ್ಗೆ ಕೇಂದ್ರ ರೈಲ್ವೆ ಸಚಿವರೊಡನೆ ಮಾತುಕತೆಯಾಡಿ ಅವರಿಂದ ಅನುಮತಿಯನ್ನು ತೆಗೆದುಕೊಂಡು ಅದನ್ನು ತೆಗೆಸಿ ಅನುಕೂಲ ಮಾಡಿಕೊಡಬೇಕು ಎಂದು ಹೇಳಿದ್ದಾರೆ. ಇದನ್ನು ಸೂಕ್ತ ರೀತಿಯಲ್ಲಿ ಪರಿಶೀಲನೆ ಮಾಡಿ, ಒಂದು ವೇಳೆ ಕೇಂದ್ರ ರೈಲ್ವೆ ಸಚಿವರು ಅನುಮತಿ ಕೊಟ್ಟರೆ ಅದನ್ನು ತೆಗೆಸಿ ಜನರಿಗೆ ಸಹಾಯ ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಪಂಪಾಪತಿ.—ಸ್ವಾಮಿ, ಈ ಕೆಲಸವನ್ನು ತಾವು ಜಾಗ್ರತೆಯಾಗಿ ಮಾಡಬೇಕು.

ಶ್ರೀ ಸುಧೀಂದ್ರರಾವ್ ಕಸಬೆ.—ಅದನ್ನು ನಾವು ಮಾಡುತ್ತೇವೆ. ಮತ್ತೆ ಮಾನ್ಯ ಸದಸ್ಯರಾದ ಶೀರನ್ನಾಳಿ ಚಂದ್ರಶೇಖರ್‌ರವರು ಶಿವಮೊಗ್ಗದಲ್ಲಿ ಇರತಕ್ಕಂಥ ರೆಗ್ಯುಲೇಟೆಡ್ ಮಾರ್ಕೆಟನ್ನು ನಗರ ಪ್ರದೇಶದಿಂದ ದೂರ ತೆಗೆದುಕೊಂಡು ಹೋಗಿ ಹಾಕಿದ್ದಾರೆ ಎಂದು ಹೇಳಿದರು, ಅದಕ್ಕೆ ಕಾರಣವಿದೆ. ಅದನ್ನು ನಗರಕ್ಕೆ ಹತ್ತಿರದಲ್ಲಿ ಹಾಕಬೇಕು ಎನ್ನತಕ್ಕಂಥ ಬೇಡಿಕೆಯೂ ಇದೆ. ಅದನ್ನು ನಾವು ಪರಿಶೀಲಿಸುತ್ತೇವೆ. ಆಮೇಲೆ ಮಾನ್ಯ ಷೇರ್‌ಖಾನ್‌ರವರು ಚಿತ್ತಾಪುರ ರೆಗ್ಯುಲೇಟೆಡ್ ಮಾರ್ಕೆಟ್‌ಗೆ ೧೦ ಲಕ್ಷ ರೂಪಾಯಿಗಳನ್ನು ಕೊಟ್ಟರೆ ಸಾಲದು, ಹೆಚ್ಚು ಕೊಡಬೇಕು ಎಂದು ಹೇಳಿದರು. ಈ ಬಗ್ಗೆ ಅಲ್ಲಿನ ಬೇಡಿಕೆ ಏನಿದೆ ಅದನ್ನು ನಾವು ಪರಿಶೀಲಿಸಿ ನಂತರ ಕೊಡುತ್ತೇವೆ. ನಾನು ಚಿತ್ತಾಪುರಕ್ಕೆ ಭೇಟಿ ನೀಡಿದ್ದಂತಹ ಕಾಲದಲ್ಲಿ ನಾನು ಆ ಬಗ್ಗೆ ಒಂದು ಆಶ್ವಾಸನೆಯನ್ನು ಕೊಟ್ಟದ್ದು ನಿಜ. ಹಾಗೆಯೇ ನಮ್ಮ ಶ್ರೀ ಪ್ರಭಾಕರ್ ತೇಲ್ಕರ್‌ರವರು ಅಲ್ಲಿರತಕ್ಕಂಥ ಒಂದು ಬ್ರಿಡ್ಜ್ ವಿಷಯ ಹೇಳಿದರು. ಇವುಗಳನ್ನು ಪರಿಶೀಲಿಸುತ್ತೇವೆ,

೩–೦೦ ಪಿ.ಎಂ.

ಮಾನ್ಯ ಅಧ್ಯಕ್ಷರೇ, ರೆಗ್ಯುಲೇಟೆಡ್ ಮಾರ್ಕೆಟ್‌ಗಳಲ್ಲಿ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಂತಹ ಕೆಲವು ಜನರನ್ನು ಈಗಾಗಲೇ ಖಾಯಂಗೊಳಿಸಿದ್ದೇವೆ. ಇನ್ನೂ ಕೆಲವು ಜನ ನೌಕರರು ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರು ತಮ್ಮ ಬೇಡಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಆದರೂ ಕೂಡ ಅವರನ್ನು ಖಾಯಂಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತೇ ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ತಿಮ್ಮೇಗೌಡರು ಮಾತನಾಡುತ್ತಾ ಈ ರೆಗ್ಯುಲೇಟೆಡ್ ಮಾರ್ಕೆಟ್‌ಗಳಲ್ಲಿ ದಳ್ಳಾಳಿಗಳಿಂದ ಶೋಷಣೆಯಾಗುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಬರೀ ದಳ್ಳಾಳಿಗಳಿಂದಲೇ ರೈತರ ಶೋಷಣೆಯಾಗುತ್ತಿಲ್ಲ, ಲಾರಿ ಮಾಲೀಕರಿಂದಲೂ ಒಂದು ರೀತಿಯಲ್ಲಿ ರೈತರ ಶೋಷಣೆಯಾಗುತ್ತಿದೆ. ಆದ್ದರಿಂದ ಸರ್ಕಾರ ಇದನ್ನು ತಪ್ಪಿಸುವುದಕ್ಕಾಗಿ ಸಬ್ ಮಾರ್ಕೆಟ್ ಅಧಿಕಾರಿಗಳನ್ನು ನೇಮಕ ಮಾಡಿ ಸೂಕ್ತ ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ವಿ. ಬಿ. ಭಾವೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಮ್ಮ ಇಲಾಖೆಗೆ ಸಂಬಂಧಪಡದೆ ಇದ್ದರೂ ಸಹ ಮಾನ್ಯ ಸದಸ್ಯರ ಮನವಿಯನ್ನು ಅಂಗೀಕಾರ ಮಾಡಿ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳ ಉದಾರ ಭಾವನೆಯನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಸದಸ್ಯರು ಮಾನ್ಯ ಮಂತ್ರಿಗಳನ್ನು ಅಂತರ್‌ಗತವಾಗಿ ಮಾತನಾಡಿ ನೋವನ್ನುಂಟು ಮಾಡಿದ್ದಾರೆ.

MR. DEPUTY SPEAKER.—I am on my legs.

SRI H. GANGADHARAN.—If the Hon'ble Mini ter is not going to promise to place White Paper on this matter we will walk out.

(Sri H. Gangadharan and Sri Jartargar withdrew from the House)

MR. DEPUTY SPEAKER.—I will now put the Demands to vote. The uestion is :

"That a sum not exceeding Rs. 13,42,28,000 on Revenue Account and Rs. 20,42,30,000 on Capital Account inclusive of the sum granted 'on account' be granted to the Government to d fray the charges which will come in course of payment during the financial year ending 31st day of March 1983 in respect of Demand No. 54 'Co-operation (Excluding Regulated Markets)".

"That a sum not exceeding Rs. 5,24,00,000 on Revenue Account and Rs. 4,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of Demand No. 55 "Regulated Market".

The motion was adopted and the Demands were granted.

MR. DEPUTY SPEAKER.—The Next item is Questions and Answers.

STARRED QUESTIONS

(To which oral Answers were given)

Completion of Janatha· HUDCO and Low Cost Houses in Karwar District.

11. SRI V.M. GHADI (Haliyal).—Will the Minister for Housing and Urban Development be pleased to state.—

(a) number of Janatha, Hudco and Low Cost houses taken up and completed in Karwar District (Talukwise figures may by furnished since inception of the scheme) ;

(b) out of above categories, the number of them that are in good condition and the number of them collapsed, and are without doors wooden materials and the reasons for the same ;

(c) out of all the houses, the number of them that are kept vacant, encroached given on hire and the number that were not in existence but shown on record especially in Mundgod taluk ;

(d) the number of persons to whom ownership right pattas have been given ;